ಭಾಸನ

ಭಾರತ ರೂಪಕ

ಡಾ. ಎಲ್. ಬಸವರಾಜು

ಬುಕ್ ಹೌಸ್ : ಮೈಸೂರು

ಭಾಸನ

ಭಾರತ ರೂಪಕ

ಡಾ. ಎಲ್. ಬಸವರಾಜು

ಗೀತಾ ಬುಕ್ ಹೌಸ್ : ಮೈಸೂರು

Bhāsana Bhārata Rūpaka (Six Plays of Bhāsa rendered into Kannada). By Dr. L. Basavaraju, M.A., D.Litt., Professor of Kannada, University of Mysore, Mysore 570 006. Published by Geetha Book House, New Statue Circle, Mysore 570 001.

ಮೊದಲನೆಯ ಮುದ್ರಣ 1959

ಎರಡನೆಯ ಮುದ್ರಣ 1977

ಮುದ್ರಕರು

ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್

ಮೈಸೂರು

ಪೀಠಿಕೆ

ಇದು ವ್ಯಾಸಭಾರತವಲ್ಲ; ಭಾಸಭಾರತ. ಇದರಲ್ಲಿ ಭಾರತಕಥೆಯನ್ನು ವಸ್ತುವನ್ನಾಗಿಟ್ಟುಕೊಂಡು ಅದಕ್ಕೆ ಹೊಸ ಘಟನೆ ಮತ್ತು ಹೊಸ ಸನ್ನಿವೇಶಗಳನ್ನು ಜೋಡಿಸಿ ಭಾಸನು ಬರೆದಿರುವ ಮಧ್ಯಮ ವ್ಯಾಯೋಗ, ಪಂಚರಾತ್ರ, ದೂತವಾಕ್ಯ, ದೂತಘಟೋತ್ಕಚ, ಕರ್ಣಭಾರ ಮತ್ತು ಊರುಭಂಗ ಎಂಬ ಆರು ನಾಟಕಗಳನ್ನು ಇದೇ ಕ್ರಮದಲ್ಲಿ ಸಾರಸಂಗ್ರಹರೂಪವಾಗಿ ಕನ್ನಡಿಸಿ ಕೊಟ್ಟದ್ದೇನೆ. ಇವುಗಳಲ್ಲಿ ಯಾವುದೊಂದೂ ಶಾಸ್ತ್ರೀಯ ದೃಷ್ಟಿಯಿಂದ 'ನಾಟಕ'ವೆನಿಸಿಕೊಳ್ಳುವುದಿಲ್ಲವಾದುದರಿಂದಲೂ ಮತ್ತು ಎಲ್ಲವೂ ಸೇರಿ ಒಂದೇ ಭಾರತದ ಕಥೆಯನ್ನು ರಸಸ್ಥಾನಗಳಲ್ಲಿ ನಿಂತು ನಿರೂಪಿಸುವುದರಿಂದಲೂ ಇವುಗಳನ್ನು ಒಳಗೊಂಡ ಈ ಪುಸ್ತಕಕ್ಕೆ "ಭಾರತ ರೂಪಕ" ಎಂಬ ಹೆಸರನ್ನಿಟ್ಟೆ.

ಘಟೋತ್ಕಚ, ಬ್ರಾಹ್ಮಣಮಧ್ಯಮ, ಅಭಿಮನ್ಯು, ಉತ್ತರ, ದುರ್ಜಯ ಎಂಬ ಭಾಸಭಾರತದ ಬಾಲಕರ ಪಾತ್ರಗಳು, ಇಂದಿನ ಭಾರತೀಯ ಬಾಲಕರ ಜೀವನವನ್ನೂ ಆ ಮೂಲಕ ಭಾರತದೇಶವನ್ನೂ ರೂಪಿಸುವುದರಲ್ಲಿ ಆದರ್ಶ ಪಾತ್ರವನ್ನು ವಹಿಸುವುದೆಂಬ ಕಾರಣದಿಂದಲೂ ಈ ನಾಟಕ ಗ್ರಂಥಕ್ಕೆ "ಭಾರತ ರೂಪಕ" ಎಂಬ ಹೆಸರನ್ನಿಟ್ಟುದು ಸಾರ್ಥಕವಾಯಿತೆಂದು ಭಾವಿಸಿದ್ದೇನೆ.

ವ್ಯಾಸರಿಂದ ಕೇವಲ ಶ್ರವ್ಯವಾಗಿದ್ದ ಭಾರತದ—ಅದ್ಭುತವಾದರೂ ವಾಸ್ತವಿಕವಾದ, ದಿವ್ಯವಾದರೂ ಮಾನವೀಯವಾದ—ಈ ಕಥೆಯು ಭಾಸನ ದರ್ಶನಶಕ್ತಿಯಿಂದ ಶ್ರವ್ಯವೂ ದೃಶ್ಯವೂ ಆಯಿತು. ಒಂದು ಲಕ್ಷ ಶ್ಲೋಕಗಳಷ್ಟು ಬೃಹತ್ತಾಗಿ ಬೆಳೆದು ನಿಂತ ವ್ಯಾಸಭಾರತವನ್ನು ನಿಷ್ಠೆ, ಶ್ರದ್ಧೆ ಮತ್ತು ಶ್ರಮಗಳಿಂದ ಹತ್ತಿ ಅದರ ತುದಿಯಲ್ಲಿ ಮನಗಾಣಬಹುದಾದ ತತ್ತ್ವವೇ ಭಾಸನ ಭಾರತರೂಪಕದ ಕ್ರೀಡಾಶೈಲದ ಬಳಿ ವಿನೋದಕ್ಕಾಗಿ ಲೀಲೆಯಿಂದ ಯಾವ ಜೀವವಾದರೂ ಕಾಲಾಡಿಸಿದರೆ ಸಾಕು, ರಸರೂಪದಲ್ಲಿ ಅನುಭವಕ್ಕೆ ಬರುವುದು. ಪುರಾಣವನ್ನೂ ಕಾವ್ಯವನ್ನೂ ಬೇರ್ಪಡಿಸುವ ಮುಖ್ಯ ಲಕ್ಷಣ ಇದೇ. ಪುರಾಣದ ದೈತ್ಯದೇಹದ ಮುಂದೆ ಕಾವ್ಯದ ಕೃಶಾಂಗವೂ ಹೀಗೆ ವಿಜಯಶಾಲಿಯೂ ನಯನಮನೋಹಾರಿಯೂ ಹೃದಯಸಂಸ್ಕಾರಿಯೂ ಆಗಿ ನಿಲ್ಲುವುದು.

ಅಂಗೈ ಅಗಲದ ಕನ್ನಡಿಯಲ್ಲಿ ಆನೆಯ ಬಿಂಬ ಪ್ರತಿಬಿಂಬಿಸುವಂತೆ ಈ ಚಿಕ್ಕ ಗ್ರಂಥದಲ್ಲಿ ಮಹಾಭಾರತವು ಸಾರರೂಪದಲ್ಲಿ ಪಡಿಮೂಡಿದೆ.

ಮಹಾಭಾರತದ ಕಥೆಯನ್ನು ನೆಪಕ್ಕೆ ಮಾತ್ರ ಆಧಾರವನ್ನಾಗಿಟ್ಟು ಕೊಂಡ ಮಧ್ಯಮವ್ಯಾಯೋಗ, ದೂತಘಟೋತ್ಕಚ—ಇವೆರಡೂ ಭಾಸನು ಸ್ವಂತವಾಗಿ ಕಲ್ಪಿಸಿಕೊಂಡ ರೂಪಕಗಳು. ಪಂಚರಾತ್ರ, ದೂತವಾಕ್ಯ, ಕರ್ಣಭಾರ—ಇವುಗಳಲ್ಲಿ ಹೊಸ ಸನ್ನಿವೇಶಗಳನ್ನೂ, ಪಾತ್ರಗಳ ಹೊಸಮುಖ ಗಳನ್ನೂ ಕಾಣಬಹುದು.

"ಊರುಭಂಗವಂತೂ ಇಡೀ ಪ್ರಾಚೀನ ಭಾರತೀಯ ನಾಟಕಸಾಹಿತ್ಯದಲ್ಲೆ ಲ್ಲಿಯೂ ನಮಗೆ ಸಿಗದ ಒಂದು ಅಪೂರ್ವರೂಪಕ(ನಾಟಕ)ಪ್ರಕಾರ. ಇಲ್ಲಿ ಮೊತ್ತಮೊದಲ ಬಾರಿಗೆ ದುರ್ಯೋಧನನ ದುರಂತಪಾತ್ರದ ಕಲ್ಪನೆ ಬರುತ್ತದೆ. ದುರ್ಜಯನೆಂಬೊಬ್ಬ ಮಗುವಿನ ಪಾತ್ರವನ್ನು ಪ್ರವೇಶಮಾಡಿಸಿ ಈ ನಾಟಕದ ದುರಂತತೆಯನ್ನು ತೀವ್ರಗೊಳಿಸಿರುವ ಭಾಸನ ಕಲಾಭಿಜ್ಞತೆಯು ಆಶ್ಚರ್ಯಕಾರಿ."

ಈ ಪುಸ್ತಕವನ್ನು ನನಗೆ ಸಕಾಲಕ್ಕೆ ಮುದ್ದಾಗಿ ಮುದ್ರಿಸಿಕೊಟ್ಟ ನನ್ನ ಮಾನ್ಯ ಗೆಳೆಯರಾದ ಜಿ. ಹೆಚ್. ರಾಮರಾವ್‌ರವರಿಗೆ ನಾನು ತೋರಿಸ ಬೇಕೆಂದಿರುವ ಕೃತಜ್ಞತೆ ಮಾತಿಗೆ ಮೀರಿದ್ದು.

ಈ ಕೃತಿ ರಚನೆಯಾಗುತ್ತಿದ್ದಂತೆಯೇ ಅದರ ಮೊದಲ ಶ್ರೋತೃವಾಗಿ ನನಗೆ ಉತ್ತೇಜನವನ್ನೂ ಹಲವು ಸಲಹೆಗಳನ್ನೂ ಕೊಟ್ಟ ಸತೀ ವಿಶಾಲಾಕ್ಷಿಗೆ ನಾನು ಕೃತಜ್ಞ.

ಎಲ್. ಬಸವರಾಜು

Shri

Saraswati prasann

V. S. Vibhuti
B.A II
K.R.C.E.S. A & SC
College Bailhongal

ಭಾಸನ

ಭಾರತ ರೂಪಕ

[illegible]

ಅನುಕ್ರಮಣಿಕೆ

ಮಧ್ಯಮ ವ್ಯಾಯೋಗ

(ಸ್ಥಳ : ಅರಣ್ಯ. ಹೆಂಡತಿ ಮತ್ತು ಮೂವರು ಮಕ್ಕಳೊಡಗೂಡಿದ ಬ್ರಾಹ್ಮಣ; ಅವ ಹಿಂದೆ, ದೂರದಲ್ಲಿ ಘಟೋತ್ಕಚನು ಪ್ರವೇಶಿಸುವನು.)

ಮೊದಲನೆಯವ—ಅಪ್ಪ, ಯಾರಿವನು? ಪ್ರಳಯಕಾಲದ ರುದ್ರ ನಂತಿದಾನೆ!

ಎರಡನೆಯವ—ಅಪ್ಪಾಜಿ, ನೋಡು ಅವನ ಕಣ್ಣುಗಳು ಗ್ರಹಗಳಂತಿವೆ. ಕತ್ತಲೆಯ ಮೊತ್ತದ ಮೈಬಣ್ಣ, ಎತ್ತಿದ ಕೋರೆದಾಡೆ, ತ್ರಿಪುರದಹನೋದ್ಯತ ನಾದ ಹರನಂತೆ ರೋಷಗೊಂಡಿದಾನೆ.

ಬ್ರಾಹ್ಮಣಿ—ಯಾರ್ರೀ ಇವನು? ಭಯವಾಗುತ್ತಿದೆ.

(ಎಲ್ಲರೂ ಬ್ರಾಹ್ಮಣನನ್ನು ತಬ್ಬಿ ಹಿಡಿದು ನಡೆಯುವರು.)

ಘಟೋತ್ಕಚ—(ಹತ್ತಿರ ಬಂದು) ಅಯ್ಯ, ಬ್ರಾಹ್ಮಣ, ನಿಲ್ಲು ನಿಲ್ಲು! ನನ್ನನ್ನು ನೋಡಿದ ಭಯದಿಂದ ನಿನ್ನ ಧೈರ್ಯಸಾರವೆಲ್ಲ ಹಿಂಗಿದಂತಿದೆ. ಹೆದರಿದ ಹೆಂಡತಿ ಮಕ್ಕಳನ್ನು ರಕ್ಷಿಸಿಕೊಳ್ಳುವ ಶಕ್ತಿ ನಿನಗಿಲ್ಲ, ಗರುಡನ ಗರಿಯ ಗಾಳಿ ಬೀಸಿ ರೋಷಾಗ್ನಿ ಕಿಡಿಗೆದರಿದ ಸರ್ಪಶ್ರೇಷ್ಠನಂತಿರುವೆಯಲ್ಲ!? ಅಯ್ಯ ಬ್ರಾಹ್ಮಣಶ್ರೇಷ್ಠ, ಬೇಡ, ಓಡಬೇಡ ನಿಲ್ಲು.

ಬ್ರಾಹ್ಮಣ—ಬ್ರಾಹ್ಮಣಿ, ಹೆದರಬೇಡ. ಮಕ್ಕಳೇ ಹೆದರಬೇಡಿ. ಆಡುವ ಮಾತಿನಿಂದಿವನು ವಿಚಾರಪರನೆಂದು ತೋರುತ್ತಿದೆ.

ಘಟೋತ್ಕಚ—(ಸ್ವಗತ) ಅಯ್ಯೋ! ಕಷ್ಟ. ಎಲ್ಲೆಡೆಯಲ್ಲೂ, ಎಲ್ಲ ಕಾಲದಲ್ಲೂ ಸದ್‌ಬ್ರಾಹ್ಮಣರು ಪೂಜ್ಯರೆಂಬುದನ್ನು ಬಲ್ಲೆ. ಆದರೂ ತಾಯ ಅಪ್ಪಣೆಯಾಗಿರುವುದರಿಂದ ಈ ಅಕಾರ್ಯವನ್ನೀಗ ನಾನು ಹಿಂದು ಮುಂದು ನೋಡದೆ ಮಾಡಲೇಬೇಕಾಗಿದೆ.

ಬ್ರಾಹ್ಮಣ—(ಹೆಂಡತಿಯನ್ನು ಕುರಿತು) ಈ ಕಾಡಿನಲ್ಲಿ ರಾಕ್ಷಸರಿದ್ದಾರೆ. ಎಚ್ಚರಿಕೆಯಿಂದ ಪ್ರಯಾಣ ಮಾಡಬೇಕು ಎಂದು ಜಲಕ್ಲಿನ್ನ ಮುನಿಗಳು, ಹೊರಡುವಾಗ, ನನಗೆ ಹೇಳಿದ್ದರು. ಮರೆತೆಯಾ? ನೋಡು ಆ ಭಯವೇ ನಿಜವಾಯಿತು!

ಬ್ರಾಹ್ಮಣಿ—ಏನ್ರೀ, ನಿಮಗೂ ಭಯದಿಂದ ಮುಖ ಬಿಳುಪೇರಿದಂತಿದೆ ಯಲ್ಲ!?

ಬ್ರಾಹ್ಮಣ—ಮಂದಭಾಗ್ಯನಾದ ನಾನಿನ್ನೇನು ಮಾಡಲಿ ?

ಬ್ರಾಹ್ಮಣಿ—ಗಟ್ಟಿಯಾಗಿ ಕೂಗಿಕೊಂಡು ಬಿಡೋಣ.

ಮೊದಲನೆಯವ—ಅಮ್ಮ, ಯಾರು ಬರುವರೆಂದು ಕೂಗಿಕೊಳ್ಳೋಣ. ದಿಕ್ಕು ದಿಕ್ಕಿಗೂ ಅಡ್ಡಲಾಗಿ ಹಬ್ಬಿರುವ ಎತ್ತರವಾದ ಪರ್ವತಾವಳಿಗಳಿಂದ ಸುತ್ತೆಲ್ಲಾ ಮಬ್ಬು ಮುಸುಕಿ ಈ ವನಪ್ರದೇಶವಷ್ಟೂ ಶೂನ್ಯವಾಗಿ ಕಾಣು ತ್ತಿದೆ. ಇಲ್ಲಿರುವುದು ಕ್ರೂರ ಖಗ ಮೃಗಗಳು ಮತ್ತು ಜಿತೇಂದ್ರಿಯರಾದ ಋಷಿಗಳು.

ಬ್ರಾಹ್ಮಣ—ಬ್ರಾಹ್ಮಣಿ, ಹೆದರಬೇಕಾಗಿಲ್ಲ, ಇನ್ನು ಹೆದರಬೇಕಾಗಿಲ್ಲ. ಇಲ್ಲಿ ಋಷಿಗಳಿರುವರೆಂದು ಕೇಳಿ ನನ್ನ ಭಯವೆಲ್ಲ ಮಾಯವಾಯ್ತು. ಹತ್ತಿರ ದಲ್ಲೆಲ್ಲೋ ಪಾಂಡವರ ಆಶ್ರಮವಿರಬೇಕು. ಅವರು ಯುದ್ಧಪ್ರಿಯರು, ಶರಣಾಗತವತ್ಸಲರು, ದೀನದಲಿತರ ಪಕ್ಷಪಾತಿಗಳು, ಮೇಲಾಗಿ ಸಾಹಸಿಗಳು; ಈ ರೀತಿಯ ಭಯೋತ್ಪಾದಕ ತಂಟಿಕೋರರಿಗೆ ತಕ್ಕ ಶಾಸ್ತಿಯನ್ನು ಮಾಡ ಲವರೇ ಸರಿ.

ಮೊದಲನೆಯವ—ಅಪ್ಪ, ಇಲ್ಲಿ ಪಾಂಡವರಿಲ್ಲ.

ಬ್ರಾಹ್ಮಣ—ಅದು ನಿನಗೆ ಹೇಗೆ ಗೊತ್ತು ?

ಮೊದಲನೆಯವ—ಧೌಮ್ಯಮಹರ್ಷಿಗಳ ಆಶ್ರಮದಲ್ಲಿ ನಡೆಯುತ್ತಿರುವ ಶತಕುಂಭವೆಂಬ ಯಜ್ಞವನ್ನು ನೋಡಲು ಪಾಂಡವರು ಅಲ್ಲಿಗೆ ಹೋಗಿರುವ ರಂತೆ, ಅಲ್ಲಿಂದ ಬಂದ ಬ್ರಾಹ್ಮಣನೊಬ್ಬ ದಾರಿಯಲ್ಲಿ ಹಾಗೆಂದು ಮಾತನಾಡು ತ್ತಿದ್ದುದನ್ನು ಕೇಳಿದೆ.

ಬ್ರಾಹ್ಮಣ—ಅಯ್ಯೋ! ಹಾಗಾದರೆ ಸತ್ತೆವು ನಾವು.

ಮೊದಲನೆಯವ—ಅಪ್ಪ, ಎಲ್ಲರೂ ಹೋಗಿಲ್ಲವಂತೆ! ಆಶ್ರಮವನ್ನು ನೋಡಿಕೊಳ್ಳಲೆಂದು ಮಧ್ಯಮನನ್ನು ಬಿಟ್ಟು ಹೋಗಿರುವರಂತೆ.

ಬ್ರಾಹ್ಮಣ—ಸಾಕು! ಬದುಕಿದೆವು. ಅವನೊಬ್ಬನಿದ್ದ ಪಕ್ಷದಲ್ಲಿ ಪಾಂಡವರೆಲ್ಲರೂ ಇದ್ದಂತೆಯೇ.

ಮೊದಲನೆಯವ—ಅವನೂ ಈ ಸಮಯದಲ್ಲಿ ವ್ಯಾಯಾಮಕ್ಕಾಗಿ

ಆಶ್ರಮದಿಂದೆಲ್ಲಿಯೋ ದೂರ ಹೋಗಿರುತ್ತಾನಂತೆ!

ಬ್ರಾಹ್ಮಣ—ಅಯ್ಯೋ! ಆಶೆ ನಿರಾಶೆಯಾಯಿತು. ಆಗಲಿ ಮಗು, ನಮ್ಮನ್ನು ಬಿಟ್ಟುಬಿಡೆಂದಿವನನ್ನೇ ಪ್ರಾರ್ಥಿಸೋಣ.

ಮೊದಲನೆಯವ—ಅಪ್ಪ, ಬೇಡ. ವ್ಯರ್ಥವಾಗಿ ಶ್ರಮಪಡುವುದು ಬೇಡ.

ಬ್ರಾಹ್ಮಣ—ಮಗು, ದುಃಖಕ್ಕೆ ಪ್ರಾರ್ಥನೆಯೇ ಪರಿಹಾರ. ಆಗಲಿ ಕೇಳಿ ನೋಡೋಣ ತಾಳು. (ಎಂದು ಘಟೋತ್ಕಚನನ್ನು ಕುರಿತು) ಅಯ್ಯಾ, ನಮಗೇನಾದರೂ ಬಿಡುಗಡೆಯುಂಟೆ?

ಘಟೋತ್ಕಚ—ನನ್ನ ಒಪ್ಪಂದಕ್ಕೆ ಒಪ್ಪಿದರೆ, ಉಂಟು.

ಬ್ರಾಹ್ಮಣ—ಅದೇನಾ ಒಪ್ಪಂದ?

ಘಟೋತ್ಕಚ—ನನಗೊಬ್ಬ ಪೂಜ್ಯಳಾದ ತಾಯಿಯಿದಾಳೆ. ಆಕೆ, "ಪುತ್ರ, ನನ್ನ ಉಪವಾಸವ್ರತ ಮುಗಿಯಿತು, ಪಾರಣೆಗಾಗಿ ಒಬ್ಬ ಮನುಷ್ಯನನ್ನು ಈ ವನದಲ್ಲೆಲ್ಲಾದರೂ ಹಿಡಿದು ತಾ" ಎಂದು ನನಗೆ ಅಪ್ಪಣೆ ಮಾಡಿದ್ದಾಳೆ. ಮನುಷ್ಯನೊಬ್ಬನನ್ನು ಹುಡುಕಿಕೊಂಡು ಹೀಗೇ ಬರುತ್ತಿದ್ದಾಗ ನೀವು ಸಿಕ್ಕಿದಿರಿ. ಸಚ್ಚಾರಿತ್ರಶಾಲಿನಿಯಾದ ಹೆಂಡತಿ ಮತ್ತು ಇಬ್ಬರು ಮಕ್ಕಳ ಸಹಿತ ಬಿಡುಗಡೆ ನಿನಗೆ ಬೇಕಾಗಿದ್ದರೆ—ನಿನ್ನ ಮಗನೊಬ್ಬನನ್ನು ನನಗೆ ಬಿಟ್ಟುಕೊಡು. ನೀನು ಬಲಹೀನ ನಾನು ಬಲಶಾಲಿ. ಯೋಚಿಸಿ ನೋಡು.

ಬ್ರಾಹ್ಮಣ—ಎಲೋ ರಾಕ್ಷಸಾಧಮ, ನಾನಂತಹ ನೀಚನೆಂದು ಭಾವಿಸಿದೆಯಾ? ವಿದ್ವಾಂಸನೂ, ವೃದ್ಧನೂ, ಬ್ರಾಹ್ಮಣನೂ ಆದ ನಾನು ಶೀಲಗುಣಾನ್ವಿತನಾದ ಪುತ್ರನನ್ನು ನಿನ್ನಂಥವನ ಕೈಯಲ್ಲಿಟ್ಟು ಹೇಗೆ ತಾನೇ ನೆಮ್ಮದಿಯಿಂದಿದ್ದೇನು?

ಘಟೋತ್ಕಚ—ಅಯ್ಯ ಬ್ರಾಹ್ಮಣೋತ್ತಮ, ನಾನು ಬೇಡಿಕೊಂಡಾಗ್ಯೂ ನೀನು—ಒಬ್ಬ ಮಗನನ್ನು ಬಿಡೆನೆಂದರೆ—ಈ ಕ್ಷಣದಲ್ಲೇ ಕುಟುಂಬಸಹಿತವಾಗಿ ನಾಶವಾಗುತ್ತೀಯೆ, ನೋಡಿಕೋ!

ಬ್ರಾಹ್ಮಣ—ಅಯ್ಯ, ನಾನೊಂದು ತೀರ್ಮಾನಕ್ಕೆ ಬಂದಿದ್ದೇನೆ—ಕೇಳು: ಈ ನನ್ನ ದೇಹ ಕರ್ತವ್ಯಗಳನ್ನೆಲ್ಲ ಮುಗಿಸಿ ಕೃತಕೃತ್ಯವಾಗಿದೆ; ವೇದವಿಧಿಗಳಿಂದ ಪುನೀತವಾಗಿದೆ; ಮುಪ್ಪಿನಿಂದ ಹಣ್ಣಾಗಿದೆ, ಪುತ್ರಾ-

ಪೇಕ್ಷೆಯಿಂದ ಈ ನನ್ನ ದೇಹವನ್ನೇ ರಾಕ್ಷಸಾಗ್ನಿಯಲ್ಲಿ ಹೋಮ ಮಾಡುತ್ತೇನೆ.

ಬ್ರಾಹ್ಮಣ—ಅಯ್ಯೋ! ಬೇಡಿ! ಬೇಡಿ!! ಪತಿಯಿದ್ದರಲ್ಲವೆ ನನಗೆ ಮುತ್ತೈದೆಯೆಂಬ ಹೆಸರು. ಪಡೆಯಬೇಕಾದ ಫಲಗಳನ್ನೆಲ್ಲ ಪಡೆದ ಈ ನನ್ನ ಶರೀರದಿಂದಿನ್ನೇನಾಗಬೇಕು? ಇದನ್ನೇ ಬಲಿಕೊಟ್ಟು ನಿಮ್ಮನ್ನೂ ನಿಮ್ಮ ವಂಶವನ್ನೂ ರಕ್ಷಿಸಲಿಚ್ಛಿಸುತ್ತೇನೆ.

ಘಟೋತ್ಕಚ—ಪೂಜ್ಯಳೇ, ನಮ್ಮ ತಾಯಿ ಹೆಂಗಸರನ್ನು ತಿನ್ನಲೊಪ್ಪುವುದಿಲ್ಲ.

ಬ್ರಾಹ್ಮಣ—ಅಯ್ಯ, ನಿನ್ನ ಹಿಂದೆ ನಾನು ಬರುತ್ತೇನೆ ನಡೆ.

ಘಟೋತ್ಕಚ—ಆ! ನೀನು ಮುದುಕ, ಹೋಗತ್ತ.

ಮೊದಲನೆಯವ—(ತಂದೆಯ ಕಡೆ ತಿರುಗಿ)ಅಪ್ಪ, ನಾನೊಂದು ಮಾತನ್ನು ಹೇಳಬೇಕೆಂದಿದ್ದೇನೆ.

ಬ್ರಾಹ್ಮಣ—ಅದೇನು ಬೇಗ ಹೇಳು.

ಮೊದಲನೆಯವ—ಅಪ್ಪ, ನನ್ನ ಪ್ರಾಣವನ್ನು ಕೊಟ್ಟು ತಾಯಿ ತಂದೆಗಳಾದ ನಿಮ್ಮ ಪ್ರಾಣವನ್ನು ರಕ್ಷಿಸಬೇಕೆಂಬಿಚ್ಛೆ ನನಗೆ. ನಮ್ಮ ವಂಶರಕ್ಷಣೆಗಾಗಿ ನನ್ನನೀ ರಾಕ್ಷಸನಿಗೆ ಕೊಟ್ಟುಬಿಡು.

ಎರಡನೆಯವ—ಅಪ್ಪಾಜಿ, ಅಣ್ಣ ಹೇಳುವುದು ಸರಿಯಲ್ಲ. ಲೋಕಕ್ಕೆ ಮತ್ತು ವಂಶಕ್ಕೆ ಜ್ಯೇಷ್ಠಪುತ್ರನೇ ಶ್ರೇಷ್ಠ; ಪಿತೃಗಳಿಗೂ ಅವನೇ ಪ್ರಿಯ. ಆದ್ದರಿಂದ ಅವನಿರಲಿ. ಈ ಗುರುಕಾರ್ಯಕ್ಕಾಗಿ ನಾನೇ ಹೋಗುತ್ತೇನೆ.

ಮೂರನೆಯವ—ಅಪ್ಪಯ್ಯ, ಅದು ಹಾಗಲ್ಲ. ಅಣ್ಣನು ತಂದೆಗೆ ಸಮನೆಂದು ಜ್ಞಾನಿಗಳು ಹೇಳಿದ್ದಾರೆ. ಆದ್ದರಿಂದ ಗುರುಹಿರಿಯರ ಪ್ರಾಣರಕ್ಷಣೆ ಮಾಡಬೇಕಾದವನು ನಾನು—ಈತನ ಹಿಂದೆ ನಾನು ಹೋಗುತ್ತೇನೆ.

ಮೊದಲನೆಯವ—ತಮ್ಮಾ, ಹಾಗಲ್ಲವಪ್ಪ, ತಂದೆಗಾಪತ್ತೊದಗಿದರೆ ಅದನ್ನು ನಿವಾರಿಸುವ ಭಾರ ಜ್ಯೇಷ್ಠಪುತ್ರನದಲ್ಲವೆ? ಆದ್ದರಿಂದ ಹೆತ್ತವರ ಪ್ರಾಣ ರಕ್ಷಿಸಲೆಂದು ನಾನೇ ಹೋಗುತ್ತೇನೆ.

ಬ್ರಾಹ್ಮಣ—(ದೊಡ್ಡ ಮಗನನ್ನು ತಬ್ಬಿಕೊಂಡು) ಈ ಜ್ಯೇಷ್ಠಪುತ್ರನೆಂದರೆ ನನಗೆ ಬಲು ಇಷ್ಟ. ನಾನಿವನನ್ನು ಬಿಟ್ಟುಕೊಡಲಾರೆ.

ಬ್ರಾಹ್ಮಣಿ—ನಿಮಗೆ ಹಿರಿಯ ಮಗನಮೇಲಿಷ್ಟವಿದ್ದರೆ, ನನಗೆ ಕಿರಿಯ ಮಗನ ಮೇಲಿಷ್ಟ (ಎಂದು ಕಿರಿಯ ಮಗನನ್ನು ಬಾಚಿ ತಬ್ಬಿಕೊಳ್ಳುವಳು.)

ಎರಡನೆಯವ—ತಾಯಿ ತಂದೆಗಳಿಗೆ ಅನಿಷ್ಟನಾದ ನಾನಿನ್ನಾರಿಗೆ ತಾನೇ ಇಷ್ಟ ? !

ಘಟೋತ್ಕಚ—ನನಗಿಷ್ಟ ; ಬೇಗ ಬಾ.

ಎರಡನೆಯವ—'ನನ್ನ ಪ್ರಾಣವನ್ನು ಕೊಟ್ಟು ಗುರುಹಿರಿಯರ ಪ್ರಾಣಗಳನ್ನುಳಿಸಿದುವರಿಂದ ಧನ್ಯನಾದೆ.' ಬಂಧುಗಳ ಸ್ನೇಹಕ್ಕಾಗಿ ಸಾವಿನೊಡನೆ ಸ್ನೇಹವನ್ನು ಮಾಡುವ ಸುಯೋಗ ಲಭಿಸುವುದು ಅಪರೂಪ.

ಘಟೋತ್ಕಚ—ಈ ಬ್ರಾಹ್ಮಣ ಬಾಲಕನಿಗದೆಷ್ಟು ಸ್ವಜನವಾತ್ಸಲ್ಯ !

ಎರಡನೆಯವ—(ತಂದೆಯನ್ನು ಕುರಿತು) ಅಪ್ಪಾಜಿ, ನಮಸ್ಕಾರ! ಹೋಗುತ್ತೇನೆ.

ಬ್ರಾಹ್ಮಣ—ಹೋಗಪ್ಪ, ಹೋಗು. ನಿನಗೆ ಬ್ರಹ್ಮಲೋಕ ಪ್ರಾಪ್ತಿಯಾಗಲಿ.

ಎರಡನೆಯವ—ನಿಮ್ಮ ಆಶೀರ್ವಾದವಪ್ಪಾಜಿ. (ತಾಯಿಗೆ ನಮಸ್ಕರಿಸಿ) ಅಮ್ಮ, ನಮಸ್ಕಾರ.

ಬ್ರಾಹ್ಮಣಿ—ಕಂದ, ಚಿರಂಜೀವಿಯಾಗು.

ಎರಡನೆಯವ—ಅನುಗೃಹೀತನಾದೆ. (ಅಣ್ಣನಿಗೆ ನಮಿಸಿ) ಅಣ್ಣ, ನಮಸ್ಕಾರ.

ಮೊದಲನೆಯವ—ಬಾ ತಮ್ಮ, ಬಾ. (ಎಂದು ತಬ್ಬಿಕೊಂಡು) ಶುಭಗುಣಗಳಿಂದೊಡಗೂಡಿದ ನೀನು ನನ್ನನ್ನು ಗಾಢವಾಗಿ ಆಲಂಗಿಸು. ನಿನ್ನ ಕೀರ್ತಿ ಲೋಕಕ್ಕೆಲ್ಲ ಹಬ್ಬುವುದು.

ಎರಡನೆಯವ—ಅನುಗೃಹೀತನಾದೆ.

ಮೂರನೆಯವ—(ಎರಡನೆಯವನ ಬಳಿಸಾರಿ ನಮಸ್ಕರಿಸಿ) ಅಣ್ಣ, ನಿನಗೆ ನಮಸ್ಕರಿಸುತ್ತೇನೆ.

ಎರಡನೆಯವ—ಸ್ವಸ್ತಿ.

ಮೂರನೆಯವ—ಅನುಗೃಹೀತನಾದೆ.

ಎರಡನೆಯವ—(ಘಟೋತ್ಕಚನ ಕಡೆ ತಿರುಗಿ) ಅಯ್ಯ, ನಿನ್ನನ್ನೊಂದು

ಮಾತನ್ನು ಕೇಳಿಕೊಳ್ಳುತ್ತೇನೆ.

ಘಟೋತ್ಕಚ—ಕೇಳು, ಕೇಳು. ಜಾಗ್ರತೆ ಕೇಳಿಕೋ.

ಎರಡನೆಯವ—ಈ ಕಾಡಿನಲ್ಲದೋ ದೂರದಲ್ಲಿ ಸರೋವರವಿರುವಂತೆ ಕಾಣುತ್ತದೆ. ಪರಲೋಕಕ್ಕೆ ಸಿದ್ಧನಾಗಿರುವ ನಾನು ಬಾಯಾರಿಕೆಯನ್ನು ತೀರಿಸಿಕೊಂಡು ಬರುತ್ತೇನೆ.

ಘಟೋತ್ಕಚ—ಗಟ್ಟಿ ಮನಸ್ಸಿನ ದಿಟ್ಟನೇ, ಹೋಗಿ ಬಾ. ನಮ್ಮ ತಾಯಿಯ ಊಟಕ್ಕೆ ಹೊತ್ತಾಯಿತು ; ಜಾಗ್ರತೆ ಬಾ.

ಎರಡನೆಯವ—(ತಂದೆಯನ್ನು ಕುರಿತು)ಅಪ್ಪಾಜಿ, ಇದೋ ಹೋಗುತ್ತೇನೆ (ಎಂದು ನಿಷ್ಕ್ರಮಿಸುವನು).

ಬ್ರಾಹ್ಮಣ—ಅಯ್ಯೋ ! ಮುದ್ದು ಕಂದನೊಬ್ಬನನ್ನು ಕಳೆದುಕೊಂಡೆ ವಲ್ಲಾ !! (ನನ್ನ ವಂಶಪರ್ವತಕ್ಕೆ ಶೃಂಗಾರವಾದ ಮೂರು ಶಿಖರಗಳಿದ್ದವು.) ಅವುಗಳಲ್ಲಿ ಮಧ್ಯ ಶಿಖರವೀಗ ಮುರಿದುದರಿಂದ ನನ್ನ ಮನಸ್ಸು ಪರಿತಪಿಸುತ್ತಿದೆ. ಹಾ ! ಪುತ್ರ, ಹೊರಟೇ ಹೋದೆಯಾ ?! ಮಗನೇ, ಮುಗುವುತನಕ್ಕೆ ತಕ್ಕ ಮುದ್ದು ಮಾಟದವನೇ, ನೀನು ನಿಯಮಪರನಾಗಿದ್ದೆ, ಚೆನ್ನಾಗಿ ಓದುತ್ತಿದ್ದೆ. ಮದ್ದಾನೆಯ ಕೋರೆಯ ಹಲ್ಲಿಗೆ ಸಿಕ್ಕಿ ಮುರಿದ ಹೂಬಿಟ್ಟ ಮರದಂತೆ ವಿನಾಶವನ್ನು ಹೊಂದಿದೆಯಾ !

ಘಟೋತ್ಕಚ—(ಸ್ವಗತ) ಈ ಬ್ರಾಹ್ಮಣವಟುವಿನ್ನೂ ಬರಲಿಲ್ಲವಲ್ಲಾ. ಅಮ್ಮನ ಊಟಕ್ಕೆ ಹೊತ್ತಾಯಿತು ; ಏನು ಮಾಡಲಿ ? (ಬ್ರಾಹ್ಮಣನನ್ನು ನೋಡಿ) ಅಯ್ಯ ಬ್ರಾಹ್ಮಣ, ನಿನ್ನ ಮಗನನ್ನು ಕೂಗು.

ಬ್ರಾಹ್ಮಣ—ಆ ? ಅತಿರಾಕ್ಷಸವಾಗಿದೆಯಲ್ಲಾ ನಿನ್ನ ಮಾತು ?!

ಘಟೋತ್ಕಚ—ಕೋಪವೇಕೆ ಸ್ವಾಮಿ ? ತಡೆದುಕೊಳ್ಳಿ. ಈ ಒರಟು ತನ ನನ್ನ ಹುಟ್ಟಿನಿಂದ ಬಂದ ದೋಷ. ನಿಮ್ಮ ಮಗನ ಹೆಸರೇನು ಹೇಳಿ. ನಾನೇ ಕೂಗುತ್ತೇನೆ.

ಬ್ರಾಹ್ಮಣ—ಇದನ್ನೂ ನಾನು ಕಿವಿಯಿಂದ ಕೇಳಲಾರೆ.

ಘಟೋತ್ಕಚ—ಸರಿ ! (ಮೊದಲನೆಯವನ ಕಡೆ ತಿರುಗಿ)ಅಯ್ಯ ಬ್ರಾಹ್ಮಣ ಕುಮಾರ, ನಿನ್ನ ತಮ್ಮನ ಹೆಸರೇನಪ್ಪ ?

ಮೊದಲನೆಯವ—ನಿರ್ಭಾಗ್ಯನಾ ಮಧ್ಯಮ.

ಘಟೋತ್ಕಚ—ಮಧ್ಯಮನೆ? ಈ ಹೆಸರು ಅವನಿಗೆ ಒಪ್ಪುತ್ತದೆ. ನಾನೇ ಕೂಗುತ್ತೇನೆ. (ಎರಡನೆಯವನು ಹೋದ ಕಡೆ ತಿರುಗಿ) ಅಯ್ಯ, ಮಧ್ಯಮ, ಮಧ್ಯಮ, ಬೇಗ ಬಾ.

(ಭೀಮಸೇನನು ದೂರದಲ್ಲಿ ಪ್ರವೇಶಿಸುತ್ತಾನೆ.)

ಭೀಮ—ಯಾರದೀ ಸ್ವರ? ಈ ನಿಬಿಡಾರಣ್ಯದ ನೂರಾರು ಖಗ ಮೃಗ ತುಮುಲ ನಾದವನ್ನೂ ಮೀರಿ ತಾರದಲ್ಲಿ ಕೇಳಬರುತ್ತಿದೆ. ನನಗೆ ಮನೋಜ್ವರವನ್ನುಂಟುಮಾಡುತ್ತಿರುವ ಈ ಸ್ವರ ತೀರ ಧನಂಜಯನ ಸ್ವರದಂತೆಯೇ ಇದೆ.

ಘಟೋತ್ಕಚ—(ಸ್ವಗತ) ತಡಮಾಡುತ್ತಿರುವನಲ್ಲಾ ಬ್ರಾಹ್ಮಣವಟು?! ತಾಯಿಗೆ ಊಟದ ಸಮಯ ಮೀರಿತು. ಏನು ಮಾಡಲಿ? ಆಗಲಿ. ಇನ್ನೂ ಗಟ್ಟಿಯಾಗಿ ಕೂಗುತ್ತೇನೆ. (ಪ್ರಕಾಶ) ಅಯ್ಯ, ಮಧ್ಯಮ, ಬೇಗ ಬಾ.

ಭೀಮ—ಎಲೇ! ಯಾರಿರಬಹುದು? ಈ ನಟ್ಟ ನಡುಗಾಡಿನಲ್ಲಿ ನನ್ನ ವ್ಯಾಯಾಮಕ್ಕೆ ಭಂಗ ತಂದು 'ಮಧ್ಯಮ' 'ಮಧ್ಯಮ' ಎಂದು ಹೆಸರು ಹಿಡಿದು ಕೂಗುತ್ತಿರುವನಲ್ಲಾ!? ನೋಡೋಣ (ಎಂದು ಮುಂದೆ ಬಂದು ಘಟೋತ್ಕಚನನ್ನು ಕಂಡು ವಿಸ್ಮಯದಿಂದ) ಆಹಾ? ನೋಡಲಿವನೆಷ್ಟು ಚೆನ್ನಾಗಿದ್ದಾನೆ. ಸಿಂಹಮುಖ, ಸಿಂಹದ್ರಂಷ್ಟ್ರ. ಜೇನುಗಣ್ಣು, ಸ್ನಿಗ್ಧ ಗಂಭೀರ ಕಂಠ, ಹೊಂಬಣ್ಣದ ಹುಬ್ಬು, ಗರುಡ ಮೂಗು, ಸಲಗನ ಕಪೋಲ, ಕೆದರಿದುರಿಗೂದಲು, ವಿಶಾಲವಾದೆದೆ, ವಜ್ರಸಮಾನವಾದ ನಡು, ಗಜವೃಷಭ ಗಮನ, ಲಂಬಪೀನಾಂಸಬಾಹು. ಲೋಕವೀರನೊಬ್ಬನಿಗೆ ರಾಕ್ಷಸಿಯಲ್ಲಿ ಹುಟ್ಟಿದ ಬಲಯುತನಾದ ಪುತ್ರನಿವನೆಂಬುದಂತೂ ಸ್ಪಷ್ಟ.

ಘಟೋತ್ಕಚ—ಇವನಿನ್ನೂ ಬರಲಿಲ್ಲವೆ?! ಎಲೆಲೇ, ಮಧ್ಯಮಾ. ಬೇಗ ಬಾ.

ಭೀಮ—(ಮುಂದೆ ಬಂದು) ಅಯ್ಯಾ, ಇದೋ ಬಂದೆ.

ಘಟೋತ್ಕಚ—(ಭೀಮನ ಕಡೆ ನೋಡಿ) ಇವನಾರು? ಆ ಬ್ರಾಹ್ಮಣವಟುವಲ್ಲ! ಆಹ! ನೋಡಲಿವನೆಷ್ಟು ಚೆನ್ನಾಗಿದ್ದಾನೆ! ಸಿಂಹಾಕೃತಿ, ಕನಕತಾಲಸಮಾನಬಾಹು. ಪಕ್ಕೆಗಳು ಗರುಡನ ರೆಕ್ಕೆಯಂತೆ ನಿರಿನಿರಿಯಾಗಿವೆ. ಅರಳಿದ ಕಮಲದ ಕಣ್ಣಿನ ವಿಷ್ಣುವಿರಬೇಕಿವನು. ನಯನಮನೋಹಾರಿ

ಯಾದಿವನು ನನ್ನ ಬಂಧುವಿನಂತೆ ಬಂದ (ಮತ್ತೆ ಬ್ರಾಹ್ಮಣ ಬಾಲಕನು ಹೋದ ಕಡೆ ತಿರುಗಿ) ಅಯ್ಯಾ ಮಧ್ಯಮ, ನಾನು ಕೂಗುತ್ತಿರುವುದು ನಿನ್ನನ್ನಯ್ಯ.

ಭೀಮ—ಆದ್ದರಿಂದಲೇ ಇದೋ ಬಂದಿದ್ದೇನೆ.

ಘಟೋತ್ಕಚ—ಏನು ? ನಿನ್ನ ಹೆಸರೂ ಮಧ್ಯಮನೇ ?!

ಭೀಮ—ನಾನಲ್ಲದೆ ಆ ಹೆಸರಿನವನಿನ್ನೊಬ್ಬನಿಲ್ಲ. ನಾನೊಬ್ಬನೇ ಅವಧ್ಯರಲ್ಲಿ ಮಧ್ಯಮಣಿ, ಉದ್ವೃತ್ತರಿಗೆಲ್ಲ ಮಧ್ಯಮ! ಕ್ಷಿತಿಗೆಲ್ಲ ಮಧ್ಯಮನು ನಾನೇ, ಅಣ್ಣ ತಮ್ಮಂದಿರಲ್ಲೂ ಮಧ್ಯಮ.

ಘಟೋತ್ಕಚ— ಆಹಾ !

ಭೀಮ—ನಾನು ಪಂಚಭೂತಗಳೊಳಗೆ ಮಧ್ಯಮ, ಪಾರ್ಥಿವರಲ್ಲಿ ಮಧ್ಯಮ, ಹುಟ್ಟಿನಲ್ಲೂ ಮಧ್ಯಮ. ಲೋಕದಲ್ಲಿ, ಸರ್ವಕಾರ್ಯದಲ್ಲಿ ಮಧ್ಯಮ.

ಬ್ರಾಹ್ಮಣ—(ಸ್ವಗತ) ಮಧ್ಯಮನೆಂದುಕೊಳ್ಳುತಿರುವುದರಿಂದ ಪಾಂಡವ ಮಧ್ಯಮ—ಭೀಮನಿವನೇ ಇರಬೇಕು. ಮೃತ್ಯುವಿನಿಂದ ನಮ್ಮನ್ನು ಬಿಡಿಸಲು ದರ್ಪದಿಂದ ಬಂದಿದಾನೆ.

ಎರಡನೆಯವ—(ಪ್ರವೇಶಿಸಿ) [ಪದ್ಮಪತ್ರದ ಮೇಲೆ ಥಳಥಳಿಸುವ ಜಲವು ಪರಲೋಕದಲ್ಲಿ ದುರ್ಲಭ.] ಆದನ್ನು ತಾವರೆಯ ಕೆರೆಯಲ್ಲಿ ನನಗೆ ನಾನೇ ತರ್ಪಣ ಕೊಟ್ಟುಕೊಂಡೆ. (ಘಟೋತ್ಕಚನ ಬಳಿಸಾರಿ) ಅಯ್ಯಾ, ಇದೋ ಬಂದೆ.

ಘಟೋತ್ಕಚ—ಬಂದೆಯಾ ? ನೀನು ನಿಜವಾದ ಮಧ್ಯಮ. ಮಧ್ಯಮ, ಬಾ ಹೋಗೋಣ.

ಬ್ರಾಹ್ಮಣ—(ಭೀಮನ ಬಳಿಸಾರಿ) ಅಯ್ಯ, ಮಧ್ಯಮ, ಬ್ರಾಹ್ಮಣರನ್ನು ಕಾಪಾಡು.

ಭೀಮ—ಹೆದರಬೇಡಿ, ಹೆದರಬೇಡಿ. ನಾನು ಮಧ್ಯಮ—ನಮಸ್ಕರಿಸುತ್ತೇನೆ (ಎಂದು ಕೈಮುಗಿಯುವನು.)

ಬ್ರಾಹ್ಮಣ—ವಾಯುದೇವನಂತೆ ದೀರ್ಘಾಯುವಾಗು.

ಭೀಮ—ಅನುಗೃಹೀತನಾದೆ. ಸ್ವಾಮಿ, ನಿಮಗೀಗ ಯಾರಿಂದ ಭಯ ?

ಬ್ರಾಹ್ಮಣ—ಹಿಂದೆ, ಕುರುರಾಜನಾದ ಧರ್ಮರಾಯನಾಳುತ್ತಿದ್ದ ಕುರು ಜಾಂಗಲದೇಶದ ಯೂಪಗ್ರಾಮವಾಸಿ ನಾನು ; ಕೇಶವದಾಸನೆಂಬ ಬ್ರಾಹ್ಮಣ; ಉದ್ಯಾಮಕ ಗ್ರಾಮದಲ್ಲಿ ನನ್ನ ಸೋದರಮಾವನಾದ ಯಜ್ಞಬಂಧುವೆಂಬವ ನಿದ್ದಾನೆ. ಅವನ ಮಗನ ಉಪನಯನಕ್ಕಾಗಿ ಹೆಂಡತಿಮಕ್ಕಳೊಡಗೂಡಿ ಹೋಗುತ್ತಿದ್ದೆ....

ಭೀಮ—ಒಳ್ಳೆಯದು, ಆಮೇಲೆ ?

ಬ್ರಾಹ್ಮಣ—(ಘಟೋತ್ಕಚನನ್ನು ತೋರಿ) ಈ ರಾಕ್ಷಸನು, ನಿನ್ನಂಥವರು ಜಗತ್ತಿನಲ್ಲಿರುವರೆಂಬುದನ್ನು ನಿರ್ಲಕ್ಷಿಸಿ, ನಿರ್ಭೀತಿಯಿಂದ, ಮಕ್ಕಳು ಮರಿ ಗಳೊಡಗೂಡಿದ ನನ್ನನ್ನು ಕೊಲ್ಲಲೆಂದು ಬೆನ್ನು ಹತ್ತಿದ್ದಾನೆ.

ಭೀಮ—ಹಾಗೇನು ? ಇವನು ಬ್ರಾಹ್ಮಣರಿಗೆ ಮಾರ್ಗವಿಘ್ನ ಮಾಡಿ ದನೋ ? ಆಗಲಿ. ಒಂದು ಕೈ ನೋಡಿಕೊಳ್ಳುತ್ತೇನೆ. (ಘಟೋತ್ಕಚನಿಗೆ) ಲೋ, ನಿಲ್ಲೋ, ನಿಲ್ಲೋ.

ಘಟೋತ್ಕಚ—ನಿಂತೇ ಇದ್ದೇನೆ ನೋಡು.

ಭೀಮ—ಈ ಬ್ರಾಹ್ಮಣರಿಗೇಕೆ ತೊಂದರೆ ಕೊಡುತ್ತಿದ್ದೀಯೆ ? ಮಕ್ಕಳು ನಕ್ಷತ್ರಗಳಂತಿವೆ, ಹೆಂಡತಿ ಬೆಳುದಿಂಗಳಂತಿದ್ದಾಳೆ. ಇವರ ಮಧ್ಯೆ ಚಂದ್ರಮನಂತಿರುವ ಈ ವೃದ್ಧ ಬ್ರಾಹ್ಮಣನಿಗೆ ರಾಹು ಬಂದಂತೆ ಬಂದಿರು ವೆಯಲ್ಲಾ !

ಘಟೋತ್ಕಚ—ಹೌದು, ನಾನು ರಾಹುವೇ.

ಭೀಮ—ಪ್ರಾಪಂಚಿಕ ವ್ಯವಹಾರಗಳಿಂದ ನಿವೃತ್ತನಾಗಿದ್ದಾನೆ ಈ ಬ್ರಾಹ್ಮಣ! ಹೆಂಡತಿ ಮಕ್ಕಳೊಡಗೂಡಿ ಬಂದಿರುವನು. ಏನಪರಾಧ ಮಾಡಿದರೂ ಕೊಲ್ಲಬಾರದು ಬ್ರಾಹ್ಮಣರನ್ನು—ಬಿಟ್ಟುಬಿಡು.

ಘಟೋತ್ಕಚ—ಬಿಡೋದಿಲ್ಲ.

ಭೀಮ—(ಸ್ವಗತ) ಇವ ಯಾರ ಮಗ ? ನನ್ನ ಸಹೋದರರ ಸದ್ಗುಣ ಗಳನ್ನೆಲ್ಲ ಕದ್ದ ಕಳ್ಳನಿವರಾರೋ ?! ಈ ಪಟಿಂಗನನ್ನು ಕಂಡು ನನಗೆ ಅಭಿ ಮನ್ಯುವಿನ ನೆನಪಾಗುತ್ತಿದೆ. (ಪ್ರಕಾಶ. ಅನುನಯ ಸ್ವರದಲ್ಲಿ) ಅಪ್ಪ, ಬಿಟ್ಟು ಬಿಡೋ.

ಘಟೋತ್ಕಚ—ಬಿಡೋದಿಲ್ಲ ಅಂದೆನಲ್ಲ. ನಮ್ಮಪ್ಪನೇ ಬಂದು ಬಿಡು

ಅಂತ ಹೇಳಿದರೂ ಬಿಡೋದಿಲ್ಲ. ಅಮ್ಮನಪ್ಪಣೆಯ ಪ್ರಕಾರ ಹಿಡಿದಿದೀನಿ.

ಭೀಮ—(ಸ್ವಗತ) ಏನು ? ಅಮ್ಮನಪ್ಪಣೆ! ಓಹೋ! ಇವನೊಬ್ಬ ಮಾತೃಭಕ್ತ. ಪಾಪ ! ಮಾತೆಯೇ ಮನುಷ್ಯರಿಗೆ ಮತ್ತು ದೇವತೆಗಳಿಗೂ ದೇವರು. ಹೌದು ! ಮಾತೆಯಾಜ್ಞೆಯನ್ನು ಪುರಸ್ಕರಿಸಿದುದರಿಂದಲೇ ಅಲ್ಲವೆ ನಮಗೀ ಗತಿಯಾದುದು ? (ಪ್ರಕಾಶ) ಅಪ್ಪ, ನಿನ್ನನ್ನೊಂದು ಮಾತು ಕೇಳುವುದಿದೆ.

ಘಟೋತ್ಕಚ—ಕೇಳು, ಜಾಗ್ರತೆ ಕೇಳು ಮತ್ತೆ.

ಭೀಮ—ಯಾರು ನಿಮ್ಮ ತಾಯಿ ?

ಘಟೋತ್ಕಚ—ಕೇಳು, ಹಿಡಿಂಬೆ ಎಂಬ ರಾಕ್ಷಸಿ; ಕೌರವ್ಯಕುಲ ದೀಪಕನಾದ ಪಾಂಡವ ಮಹಾತ್ಮನೊಬ್ಬನನ್ನು ಗಂಡನನ್ನಾಗಿ ಪಡೆದ ಪುಣ್ಯ ವಂತಳವಳು. ಪೂರ್ಣಚಂದ್ರನಿಂದ ಗಗನಮಂಡಲದಂತೆ ಆ ಮಹನೀಯ ನಿಂದವಳ ಬಾಳು ಬೆಳಕಾಯಿತು.

ಭೀಮ—(ಸಂತೋಷದಿಂದ ಆತ್ಮಗತ) ಓಹೋ ! ಇವನು ಹಿಡಿಂಬೆಯ ಮಗ. ಇವನಿಗೆ ಈ ಗರ್ವ ಸರಿ. ಇವನ ಶೌರ್ಯ ತಂದೆಯಿಂದ ಬಂದ ಗುಣ. ಜನಗಳ ಬಗ್ಗೆ ಕರುಣೆಯಿಲ್ಲದ ಮನಸ್ಸಿನ ಕ್ರೌರ್ಯವಿವನಿಗೆ ಯಾರಿಂದ ಬಂತೋ ?! (ಪ್ರಕಾಶ) ಅಪ್ಪ, ಇವರನ್ನು ಬಿಟ್ಟುಬಿಡು.

ಘಟೋತ್ಕಚ—ಬಿಡೋದಿಲ್ಲವಯ್ಯ.

ಭೀಮ—(ಬ್ರಾಹ್ಮಣನನ್ನು ಕುರಿತು) ಸ್ವಾಮಿ, ನೀವು ನಿಮ್ಮ ಮಗನನ್ನು ಕರೆದುಕೊಂಡು ಹೋಗಿ. ನಾನೇ ಇವನ ಹಿಂದೆ ಹೋಗುತ್ತೇನೆ

ಎರಡನೆಯವ—ಬೇಡ. ನೀನು ಹೋಗಬಾರದು. ಗುರುಹಿರಿಯರ ಪ್ರಾಣಗಳನ್ನು ರಕ್ಷಿಸಲೆಂದು ನನ್ನ ಪ್ರಾಣಗಳನ್ನಾಗಲೇ ಮುಡಿಪಿಟ್ಟಿದ್ದೇನೆ. ನೀನು ರೂಪಗುಣಸಂಪನ್ನ, ಹರೆಯದವ ; ನಿಲ್ಲು ಭೂಲೋಕದಲ್ಲಿ.

ಭೀಮ—ಪೂಜ್ಯ, ಅದು ಸರಿಯಲ್ಲ. ಕ್ಷತ್ರಿಯಕುಲೋತ್ಪನ್ನ ನಾನು: ಪರಮಪೂಜ್ಯರಾದ ಬ್ರಾಹ್ಮಣರು ನೀವು. ಆದ್ದರಿಂದ ನಿಮ್ಮ ಶರೀರಕ್ಕೆ ಬದಲಾಗಿ ನನ್ನ ಶರೀರವನ್ನು ಕೊಡಬೇಕೆಂದಾಶೆಯಾಗಿದೆ.

ಘಟೋತ್ಕಚ—(ಸ್ವಗತ) ಓಹೋ! ಕ್ಷತ್ರಿಯನಿವನು ! ಆದ್ದರಿಂದಲೇ ಇವನಿಗಿಷ್ಟು ಗರ್ವ. ಆಗಲಿ ಇವನನ್ನೇ ಕೊಂಡೊಯ್ಯುತ್ತೇನೆ. (ಪ್ರಕಾಶ.

ಭೀಮನ ಕಡೆ ತಿರುಗಿ) ಏ! (ಬ್ರಾಹ್ಮಣ ಬಾಲಕನನ್ನು ತೋರಿ) ಇವನನ್ನು ತಡೆದವರು ಯಾರು?

ಭೀಮ—ನಾನು.

ಘಟೋತ್ಕಚ—ನೀನೋ?

ಭೀಮ—ಮತ್ತೇನು?

ಘಟೋತ್ಕಚ—ಹಾಗಾದರೆ ಬಾ ನೀನೆ.

ಭೀಮ—ಹೀಗೆಲ್ಲ ನಾನು ಬರಿಯ ಗತ್ತಿಗೆ ಹೆದರಿ ಬರುವವನಲ್ಲ ಶಕ್ತಿಯಿದ್ದರೆ ಬಲಾತ್ಕಾರದಿಂದ ಕರೆದೊಯ್ಯಿ.

ಘಟೋತ್ಕಚ—ಗೊತ್ತೇ ನಿನಗೆ, ನಾನು ಯಾರೆಂದು?

ಭೀಮ—ಗೊತ್ತಿಲ್ಲವೇ? ನನ್ನ ಮಗನೇ!

ಘಟೋತ್ಕಚ—(ಹಲ್ಲು ಕಡಿದು) ಏನಂದೆ? ನಿನ್ನ ಮಗನೇ ನಾನು?

ಭೀಮ—ಅಪ್ಪ, ಕೋಪವೇಕೆ? ತಡೆದುಕೋ. ಪ್ರಜೆಗಳನ್ನೆಲ್ಲ ಕ್ಷತ್ರಿಯರು ಮಕ್ಕಳೆಂದೇ ಕರೆಯುತ್ತಾರೆ. ಆದ್ದರಿಂದಲೇ ನಾನು ಹಾಗೆಂದೆ.

ಘಟೋತ್ಕಚ—ಭಲೇ! ಹೆದರಿದವರ ಆಯುಧವನ್ನು ಹಿಡಿದು, ಮಾತನ್ನು ತಿರುಗಿಸಿಬಿಟ್ಟೆಯಲ್ಲ ನೀನು!

ಭೀಮ—ಸತ್ಯವಾಗಿ. ಆಣೆಯಿಟ್ಟು ಹೇಳುತ್ತೇನೆ. ಭಯವೆಂದರೇನೆಂಬುದೇ ನನಗೆ ತಿಳಿಯದು. ಆದರಲ್ಲಿ ಪಂಡಿತನಾದ ನಿನ್ನಿಂದ ನಾನದನ್ನು ತಿಳಿಯಬೇಕೆಂದಿದ್ದೇನೆ. ಭಯವೆಂದರೇನು, ಅದರ ಸ್ವರೂಪವೇನು ಹೇಳು. ಅದರ ಗುಣಾವಗುಣವನ್ನು ತಿಳಿದು ಆಮೇಲೆ ತಕ್ಕ ಸೇವೆಮಾಡುತ್ತೇನೆ.

ಘಟೋತ್ಕಚ—ಇದೋ, ನಿನಗೆ ಭಯವನ್ನುಪದೇಶಿಸುತ್ತೇನೆ: ಕೈಯ್ಯಲ್ಲಾಯುಧವನ್ನು ಹಿಡಿ.

ಭೀಮ—ಆಯುಧವೆಂದೆಯಾ? (ತೋಳನ್ನು ಮೇಲೆತ್ತಿ) ಇದೋ ಆಯುಧ.

ಘಟೋತ್ಕಚ—ಎಲ್ಲೋ?!

ಭೀಮ—(ಮೇಲೆತ್ತಿದ ಬಲದೋಳನ್ನು ತೋರಿ, ಅಲುಗಿಸಿ) ಶತ್ರುಗಳನ್ನು ಸದೆಯುವುದರಲ್ಲೇ ಸದಾ ನಿರತವಾದ ಕಾಂಚನಸ್ತಂಭಸಮ ಆಯುಧವಿದೋ.

ಈ ಬಲದೋಳೇ ನನ್ನ ಸಹಜಾಯುಧ!

ಘಟೋತ್ಕಚ—ಈ ಮಾತು ನನ್ನ ತಂದೆ ಭೀಮಸೇನನಿಗೆ, ನಿನಗಲ್ಲ.

ಭೀಮ—ಭೀಮನೇ? ಯಾರವನು? ವಿಶ್ವಕರ್ತನಾದ ಶಿವನೋ ಕೃಷ್ಣನೋ, ಶಕ್ತಿಧರನಾದ ಯಮನೋ—ಇವರಲ್ಲಿ ಯಾರಿಗೆ ಸಮ ನಿಮ್ಮ ತಂದೆ? ಹೇಳು.

ಘಟೋತ್ಕಚ—ಒಬ್ಬನಿಗಲ್ಲ! ಎಲ್ಲರಿಗೂ ಸಮ!

ಭೀಮ—ಛೆ! ಸುಳ್ಳು.

ಘಟೋತ್ಕಚ—ಏನೇನು? ಸುಳ್ಳೆಂದೆಯಾ? ನಮ್ಮ ತಂದೆಯನ್ನು ಬೈಯುವೆಯಾ? ಆಗಲಿ. ಮಹಾವೃಕ್ಷವೊಂದನ್ನು ಕಿತ್ತದರಿಂದ ನಿನ್ನನ್ನು ಕುಟ್ಟುತ್ತೇನೆ.

(ಎಂದು ಹೋಗಲುದ್ಯೋಗಿಸುವನು.)

ಭೀಮ—ನಿಲ್ಲು. ಕಾಡಾನೆಯದೆಷ್ಟು ಕೆರಳಿದರೂ ವ್ಯಾಘ್ರವನ್ನೇನು ಮಾಡೀತು.

ಘಟೋತ್ಕಚ—ನಾನು ಭೀಮಸೇನನ ಮಗ, ವಾಯುದೇವನ ಮೊಮ್ಮಗ. ಸನ್ನದ್ಧನಾಗಿ ನಿಲ್ಲು! ಬಾಹುಯುದ್ಧದಲ್ಲಿ ನನಗೆ ಸಮಾನರಿಲ್ಲ. (ಎಂದು ಇಬ್ಬರೂ ಹೋರಾಡುವರು. ಘಟೋತ್ಕಚನು ಭೀಮನನ್ನು ಬಿಗಿಯಾಗಿ ಹಿಡಿದು) ನನ್ನ ಬಾಹುಬಲಕ್ಕೂ ಮೀರಿದವನೇ ನೀನು? ಬಿಡಿಸಿಕೋ, ನೋಡೋಣ! ಮಿಣಿಗಳಿಗೆ ಸಿಕ್ಕಿದಾನೆಯಂತೆ ನನ್ನ ತೋಳುಗಳಿಗೆ ನೀನು ಸಿಕ್ಕಿಬಿದ್ದಿದೀಯೆ.

ಭೀಮ—(ಸ್ವಗತ) ಏನು? ಇವನ ಪಟ್ಟಿಗೆ ಸಿಕ್ಕಿಬಿದ್ದನಲ್ಲ!! ಲೋ, ದುರ್ಯೋಧನ, ನಿನ್ನ ಶತ್ರುಪಕ್ಷ ಬಲವಾಗುತ್ತಿದೆ ಸಜ್ಜಾಗು,(ಪ್ರಕಾಶ) ಅಯ್ಯ, ದಮ್ಮು ಹಿಡಿ. ಎಚ್ಚರವಾಗಿರು.

ಘಟೋತ್ಕಚ—ಎಚ್ಚರವಿಲ್ಲದೇನು? ಬಿಡಿಸಿಕೋ.

ಭೀಮ—(ಮೈಕೊಡವಿ ಬಿಡಿಸಿಕೊಂಡು) ಬಿಡು ಜಂಬವನ್ನ. ನಿನ್ನ ಬಂಡವಾಳ ಗೊತ್ತಾಯಿತು! ಶೂರ, ನನಗೆ ಬಾಹುಯುದ್ಧದಲ್ಲಿ ಬಳಲಿಕೆ ಯೆಂಬುದೇ ಇಲ್ಲ. ಗೊತ್ತಾಯಿತೋ?

ಘಟೋತ್ಕಚ—(ಸಖೇದಾಶ್ಚರ್ಯದಿಂದ) ಏನು ಮಾಡಲಿ? (ಪ್ರಕಾಶ)

ಅಯ್ಯ, ಹಿಂದೆ ನೀನು ಮಾಡಿಕೊಂಡ ಒಪ್ಪಂದವನ್ನು ನೆನೆದುಕೋ.

ಭೀಮ—ಒಪ್ಪಂದವೆಂದೆಯಾ? ಅದೀಗ ಚಂದ. ನಡಿ, ಹಾಗಾದರೆ ಮುಂದೆ. (ಎಂದಿಬ್ಬರೂ ನಿಷ್ಕ್ರಮಿಸುವರು.)

ಬ್ರಾಹ್ಮಣ—ಮೈಮೇಲೆ ಬಿದ್ದ ಮಳೆ ಹನಿಯನ್ನು ಕೊಡವಿ ಹೊರಡುವ ಗೂಳಿಯಂತೆ ಬಾಹುಬಲ ವೀರ್ಯಸಂಪನ್ನನಾದ ಭೀಮನದೆಷ್ಟು ಗಂಭೀರವಾಗಿ ಹೋದ! ಅಯ್ಯೋ! ಮಕ್ಕಳೇ, ಭೀಮನು ಹೋಗೇ ಬಿಟ್ಟನಲ್ಲ! (ಎಂದು ಎಲ್ಲರೂ ನಿಷ್ಕ್ರಮಿಸುವರು.)

(ಘಟೋತ್ಕಚನನ್ನು ಮುಂದು ಮಾಡಿಕೊಂಡು, ಮುಸುಕು ಹಾಕಿಕೊಂಡ ಭೀಮನು ಪ್ರವೇಶಿಸುವನು.)

ಘಟೋತ್ಕಚ—ನಿಲ್ಲಿಲ್ಲಿ. ನೀನು ಬಂದಿರುವೆಯೆಂದಮ್ಮನಿಗೆ ಹೇಳುತ್ತೇನೆ.

ಭೀಮ—ಓಹೋ! ಹೇಳು. ಹೋಗು.

ಘಟೋತ್ಕಚ—(ತೆರೆಯ ಬಳಿ ಸಾರಿ) ಅಮ್ಮಾ ಬಂದೆ; ನಮಸ್ಕಾರ. ಇದೋ, ನೀನು ಬಹಳ ಹೊತ್ತಿನಿಂದ ಬಯಸಿದ ಆಹಾರಕ್ಕಾಗಿ ಒಬ್ಬ ಮನುಷ್ಯನನ್ನು ತಂದಿದ್ದೇನೆ.

ಹಿಡಿಂಬೆ—(ಪ್ರವೇಶಿಸಿ ಮಗನನ್ನು ನೋಡಿ) ಮುದ್ದು ಮಗನೇ, ಚಿರಂಜೀವಿಯಾಗು. (ಎಂದು ಗಲ್ಲವನ್ನು ಸವರಿ ನಟಿಗೆ ಮುರಿಯುವಳು.)

ಘಟೋತ್ಕಚ—ಅಮ್ಮಾ, ನಿನ್ನ ಆಶೀರ್ವಾದ. (ಭೀಮನನ್ನು ತೋರಿ) ರೂಪವನ್ನು ಮಾತ್ರ ನೋಡಿ ಇವನನ್ನು ಮನುಷ್ಯನೆನ್ನಬೇಕು; ಬಲವನ್ನು ನೋಡಿಯಲ್ಲ.

ಹಿಡಿಂಬೆ—ಏನು? ಬ್ರಾಹ್ಮಣನೋ?

ಘಟೋತ್ಕಚ—ಅಲ್ಲ.

ಹಿಡಿಂಬೆ—ಅಥವಾ ಮುದುಕನೋ?

ಘಟೋತ್ಕಚ—ಮುದುಕನಲ್ಲಮ್ಮಾ!

ಹಿಡಿಂಬೆ—ಹಾಗಾದರಿನ್ನೂ ಹುಡುಗನೇನು?

ಘಟೋತ್ಕಚ—ಹುಡುಗ? ಅಲ್ಲವಮ್ಮಾ, ಅಲ್ಲ!

ಹಿಡಿಂಬೆ—ಹಾಗಾದರೆ ಯಾರಿವನು? ಎಲ್ಲಿ ನೋಡೋಣ.

ಘಟೋತ್ಕಚ—(ಭೀಮನ ಮುಖದ ಮೇಲಣ ಮುಸುಕನ್ನು ತೆಗೆಯುವನು.)

ಹಿಡಿಂಬೆ—(ಮಂದಹಾಸದಿಂದ) ಮಗು, ಇವನು ಮನುಷ್ಯನೇನೋ

ಘಟೋತ್ಕಚ—ಅಮ್ಮಾ, ಯಾರಿವನು ?

ಹಿಡಿಂಬೆ—ಹುಚ್ಚ, ನಮ್ಮ ಭಾಗದ ದೇವರಿವನು.

ಘಟೋತ್ಕಚ—ಆ ?! ಯಾರಿಗೆ ದೇವರು ?

ಹಿಡಿಂಬೆ—ನನಗೆ ಮತ್ತು ನಿನಗೆ.

ಘಟೋತ್ಕಚ—ಹಾಗೆಂದರೇನಮ್ಮ ?

ಹಿಡಿಂಬೆ—ನೋಡು (ಎಂದು ಭೀಮನ ಕಾಲಿಗೆರಗಿ), ಪತಿದೇವರಿಗೆ ನಮಸ್ಕಾರ.

ಭೀಮ—(ದೃಷ್ಟಿಸಿ) ಎಲೆ ದೇವಿ, ಹಿಡಿಂಬೆ, ರಾಜ್ಯಭ್ರಷ್ಟನಾಗಿ ಕಾಡಿನಲ್ಲಲೆಯುವ ನನಗೆ ನೀನು ಕರುಣೆ ತೋರಿದುದರಿಂದ ನನ್ನ ದುಃಖವೆಲ್ಲಾ ಮಾಯವಾಯಿತು. ಹಿಡಿಂಬೆ, ಏನಿದೆಲ್ಲಾ ?

ಹಿಡಿಂಬೆ—(ಕಿವಿಯಲ್ಲಿ) ನಿಮ್ಮನ್ನು ಕರೆಸಿಕೊಳ್ಳಲಿದೊಂದು ಉಪಾಯ !

ಭೀಮ—ನೀನು ಜಾತಿಯಿಂದ ರಾಕ್ಷಸಿಯೇ ಹೊರತು, ನಡವಳಿಕೆಯಿಂದಲ್ಲ.

ಹಿಡಿಂಬೆ—ಹುಚ್ಚ, ತಂದೆಗೆ ನಮಸ್ಕರಿಸು.

ಘಟೋತ್ಕಚ—ಅಪ್ಪಾಜಿ, ಹಿಂದೆ ನಾನು ಅಜ್ಞಾನದಿಂದ ನಿಮಗೆ ನಮಸ್ಕರಿಸಲಿಲ್ಲ. ನಿಮ್ಮ ಮಗನು ಮಾಡಿದೀ ಅಪರಾಧವನ್ನು ಮನ್ನಿಸಿ, ಕೃಪೆಮಾಡಿರಿ. ಧಾರ್ತರಾಷ್ಟ್ರವನದಾವಾಗ್ನಿ ಘಟೋತ್ಕಚ ನಾನು. (ಎಂದು ನಮಸ್ಕರಿಸುವನು.)

ಭೀಮ—ಬಾ, ಬಾ ಮಗು. ನಿನ್ನ ಒರಟಾಟವೂ ನನಗೆ ಚಂದವೇ. (ಎಂದು ತಬ್ಬಿ) ನೀನೇ ಏನು ಧಾರ್ತರಾಷ್ಟ್ರವನದಾವಾಗ್ನಿ? ನಿನ್ನಂತಹ ಮಗನನ್ನು ಪಡೆಯುವುದಲ್ಲವೇ ತಂದೆಯಾದವರೆಲ್ಲರಪೇಕ್ಷೆ?! ಮಗು ಅತಿ ಬಲಪರಾಕ್ರಮಿಯಾಗು.

ಘಟೋತ್ಕಚ—ಅನುಗೃಹೀತನಾದೆ.

ಭೀಮ—ಹಿಡಿಂಬೆ, ಬಾ ಹೋಗೋಣ. ವತ್ಸ ಘಟೋತ್ಕಚ, ಬಾರಪ್ಪ (ಎಂದು ಎಲ್ಲರೂ ನಿಷ್ಕ್ರಮಿಸುವರು).

ಪಂಚರಾತ್ರ

ದೃಶ್ಯ ೧

(ಸ್ಥಳ : ಯಜ್ಞಮಂಟಪ)

ದ್ರೋಣ—ಆಹ ! ಕುರುರಾಜನ ಯಜ್ಞದ ಸಂಭ್ರಮವೇ ಸಂಭ್ರಮ ! ದುರ್ಯೋಧನನೀಗ ಧರ್ಮಾವಲಂಬಿಯಾದುದರಿಂದ (ತನ್ನೆದೆ ಮುಟ್ಟಿಕೊಂಡು) ಅವನ ಗುರುವಾದೀ ದ್ರೋಣನೇ ಅನುಗೃಹೀತನಾದಂತಿದೆ. ಏಕೆಂದರೆ, ಶಿಷ್ಯನು ಮಾಡಿದ ದೋಷವು ಬಂಧುಗಳನ್ನು ಬಿಟ್ಟು, ಮಿತ್ರರನ್ನು ಮುಟ್ಟದೆ, ಆಚಾರ್ಯನಿಗೇ ತಟ್ಟುವುದು. ಮಗನನ್ನು ಮಗುವಾಗಿದ್ದಾಗಲೇ ಗುರುಗಳಿಗೊಪ್ಪಿಸಿ ಬಿಟ್ಟಮೇಲೆ ತಾಯಿತಂದೆಗಳಿಗೆ ಆ ದೋಷ ಹೇಗೆ ತಾನೇ ತಟ್ಟೀತು ?!

ಭೀಷ್ಮ—(ಪ್ರವೇಶಿಸಿ) ಈ ಭೀಷ್ಮನು ಆಚಾರ್ಯರಿಗೆ ವಂದಿಸುತ್ತಾನೆ. (ನಮಸ್ಕರಿಸಿ, ತೆರೆಯ ಕಡೆ ನೋಡಿ) ಅದೋ ದುರ್ಯೋಧನ : ಧನವನ್ನು ಸೆಳೆದು ದೊಡ್ಡವನೆನಿಸಿಕೊಂಡು, ಜಗಳಗಂಟಿಗತನದಿಂದ ಅಪಯಶಸ್ಸನ್ನು ಪಡೆದಿದ್ದ ಅವನು, ಈಗ ಧರ್ಮಾವಲಂಬಿಯಾದುದರಿಂದ ಸಾತ್ತ್ವಿಕ ಕಳೆಯಿಂದ ಶೋಭಿಸುತ್ತ ಇತ್ತಲೇ ಬರುತ್ತಿದ್ದಾನೆ, ನೋಡಿ.

(ದುರ್ಯೋಧನ, ಕರ್ಣ, ಶಕುನಿ ಪ್ರವೇಶಿಸುವರು.)

ದುರ್ಯೋಧನ—ನನ್ನಾತ್ಮಕ್ಕೆ ಶ್ರದ್ಧೆ ಬಂತು ; ನನ್ನಿಂದ ಗುರುಜನಕೆ ಸಂತೋಷವಾಯ್ತು ; ನನ್ನನ್ನೀಗ ಜಗತ್ತು ನಂಬಿದೆ ; ನಾನು ಗುಣವಂತನೆನಿಸಿಕೊಂಡೆ. ನನಗೆ ಬಂದಿದ್ದ ಅಪಕೀರ್ತಿಯೀಗ ಹೋಯ್ತು. ಸ್ವರ್ಗ ಸತ್ತ ಮೇಲೆ ಸಿಗುತ್ತದೆನ್ನುವ ಮಾತು ಸುಳ್ಳು. ಸ್ವರ್ಗವೆಂಬುದು ಕಣ್ಮರೆಯಾಗಿ ಆಕಾಶದಲ್ಲೆಲ್ಲೂ ಇಲ್ಲ. ಅದು ಈ ನೆಲದ ಮೇಲೆ, ಇಲ್ಲೇ ನೂರ್ಮಡಿಯಾಗಿ ಫಲಿಸುತ್ತದೆ.

ಕರ್ಣ—ಎಲೆ, ಗಾಂಧಾರಿಯ ಕಂದ, ನ್ಯಾಯದಿಂದ ಬಂದ ಹಣವನ್ನು ಹೀಗೆ ನೀನು ವಿನಿಯೋಗಿಸುತ್ತಿರುವುದು ನ್ಯಾಯವೇ. ಏಕೆಂದರೆ; ಕ್ಷತ್ರಿಯರ ಅಭ್ಯುದಯ ಬಾಣವನ್ನವಲಂಬಿಸಿದೆ. ದುಡ್ಡನ್ನು ದುಂಡಗೆ

ಮಾಡಿ ಮಕ್ಕಳಿಗಿರಲೆಂದು ಮಡಗುವವನು ಮೋಸ ಹೋಗುತ್ತಾನೆ. ರಾಜನಾದವನು ತಾನು ಆರ್ಜಿಸಿದ ಹಣವನ್ನೆಲ್ಲಾ ವಿಪ್ರರ ಮಡಲಿಗೆ ಸುರಿದು ಮಕ್ಕಳ ಕೈಗೆ ಬಿಲ್ಲನ್ನು ಮಾತ್ರ ಕೊಡಬೇಕು.

ಶಕುನಿ—ಅಂಗರಾಜನು ಚೆನ್ನಾಗಿ ಹೇಳಿದ. ಅವನ ಅಂಗ ಗಂಗೋಪಸ್ಪರ್ಶನದಿಂದ ಕಲ್ಮಷವನ್ನೆಲ್ಲಾ ಕಳೆದು ನಿರ್ಮಲವಾದುದುದಲ್ಲವೆ?

ಕರ್ಣ—ಇಕ್ಷ್ವಾಕು, ಶರ್ಯಾತಿ, ಯಯಾತಿ, ರಾಮ ಈ ಮುಂತಾದವರೆಲ್ಲರೂ ಮಡಿದರಾದರೂ ತಾವು ಮಾಡಿದ ಯಜ್ಞಯಾಗವೆಂಬ ದೇಹಗಳನ್ನು ಧರಿಸಿ ಅವರೀಗಲೂ ಜೀವಂತರಾಗಿರುವರು.

ದ್ರೋಣ—ದುರ್ಯೋಧನ, ಸುದೈವದಿಂದ ನೀನು ಕೈಗೊಂಡೀ ಯಜ್ಞವಿನ್ನೇನು ಸಮಾಪ್ತಿಯಾಯ್ತು. ನಿನಗೊಳ್ಳೆಯದಾಗಲಿ.

ದುರ್ಯೋಧನ—ಅನುಗೃಹೀತನಾದೆ. ಆಚಾರ್ಯರೇ, ನಮಸ್ಕಾರ (ಎಂದು ನಮಸ್ಕರಿಸಲು ಬಾಗುವನು).

ದ್ರೋಣ—(ಅಷ್ಟರಲ್ಲೇ ತಡೆದು) ಮಗು, ನಿಲ್ಲು ನಿಲ್ಲು. ಇದು ಕ್ರಮವಲ್ಲ!

ದುರ್ಯೋಧನ—ಹಾಗಾದರೆ ಕ್ರಮ ಯಾವುದು?

ದ್ರೋಣ—ಕಾಣುವುದಿಲ್ಲವೇ? (ಎಂದು ಭೀಷ್ಮನನ್ನು ತೋರಿ) ಮನುಷ್ಯಾಕೃತಿಯನ್ನು ತಾಳಿರುವ ಈ ದೇವರಿಗೆ ಮೊದಲು ನಮಸ್ಕರಿಸು. ಭೀಷ್ಮರನ್ನು ಬಿಟ್ಟು ಮತ್ತೊಬ್ಬರಿಗೆ ಮೊದಲು ನಮಸ್ಕರಿಸುವುದು ಅನ್ಯಾಯವೆಂಬುದು ನನ್ನ ಭಾವನೆ.

ಭೀಷ್ಮ—ಅಲ್ಲ, ಅದು ಸರಿಯಲ್ಲ. ತಾವು ಹಾಗೆನ್ನಬೇಡಿ. ನಾನು ತಮಗಿಂತಲೂ ಕಡಿಮೆಯೆನ್ನಲು ಬಹಳ ಕಾರಣಗಳಿವೆ; ನೋಡಿ: ನಾನಾದರೋ ತಾಯ ಹೊಟ್ಟೆಯಲ್ಲಿ ಹುಟ್ಟಿದವನು, ತಾವು ಸ್ವಯಂಭುಗಳು; ನಾನು ಆಯುಧಜೀವಿ, ತಾವು ಪ್ರೇಮಜೀವಿಗಳು; ತಾವು ದ್ವಿಜೋತ್ತಮರು. ನಾನು ಕ್ಷತ್ರಿಯ; ತಾವು ಗುರುಗಳು, ನಿಮ್ಮ ಶಿಷ್ಯರು ನಾವು.

ದ್ರೋಣ—ತಮ್ಮನ್ನು ತಾವು ಸಣ್ಣವರೆಂದುಕೊಳ್ಳಲು ಮಹಾತ್ಮರೆಂದೂ ಹಿಂತೆಗೆಯುವುದಿಲ್ಲ. ಆಗಲಿ, ಬಾ ಮಗು, ನನಗೇ ಮೊದಲು ನಮಸ್ಕರಿಸು.

ದುರ್ಯೋಧನ—ಆಚಾರ್ಯರಿಗೆ ನಮಸ್ಕಾರ (ಎಂದು ನಮಿಸುವನು).

ದ್ರೋಣ—ಏಳಪ್ಪ, ಎದ್ದೇಳು. ಹೀಗೆಯೇ ನೀನು ಅವಭೃತಸ್ನಾನ ಮಾಡಿ ಮಾಡಿ ದಣಿಯುತ್ತಿರು.

ದುರ್ಯೋಧನ—ಅನುಗೃಹೀತನಾದೆ; ತಾತ, ನಿಮಗೆ ನಮಸ್ಕಾರ.

ಭೀಷ್ಮ—ಮುದ್ದು ಮೊಮ್ಮಗನೇ, ಬಾರಪ್ಪ; ಹೀಗೇ ನಿನ್ನ ಬುದ್ಧಿ ಪ್ರಶಾಂತವಾಗಿರಲಿ.

ದುರ್ಯೋಧನ—ಅನುಗೃಹೀತನಾದೆ; ಮಾವ, ನಿನಗೆ ನಮಸ್ಕಾರ.

ಶಕುನಿ—ಚಿಣ್ಣ, ನೀನು ಹೀಗೆಯೇ ಆಪ್ತರಿಗೆ ದಕ್ಷಿಣೆಯನ್ನು ನೀಡಿ, ಯಜ್ಞಗಳನ್ನು ಮಾಡಿ, ರಾಜಸೂಯಕ್ಕಾಗಿ ರಾಜರನ್ನು ಜರಾಸಂಧನಂತೆ ಗೆದ್ದು ಸೆರೆಹಿಡಿದು ತಾ.

ದ್ರೋಣ—ಆಹಾ! ಶಕುನಿಯು ಹರಸುವಾಗಲೂ ಘರ್ಷಣೆಯನ್ನೇ ಧ್ವನಿಸುತ್ತಾನೆ. ಕ್ಷತ್ರಿಯಕುಮಾರನಾದಿವನಿಗೆ ವಿರೋಧವೆಂದರದೆಷ್ಟು ಪ್ರೀತಿ.

ದುರ್ಯೋಧನ—ಗೆಳೆಯ ಕರ್ಣ, ಗುರುಜನರಿಗೆ ನಮಸ್ಕರಿಸಿಯಾದ ಮೇಲೆ ನಿನ್ನ ಸ್ನೇಹಿತನಾದ ನನ್ನೀ ವಿಶ್ವಾಸವನ್ನು ಕ್ರಮಪ್ರಾಪ್ತವಾಗಿ ಸ್ವೀಕರಿಸು ಬಾ (ಎಂದು ತಬ್ಬಿಕೊಳ್ಳುವನು.)

ಕರ್ಣ—ಗಾಂಧಾರಿಯ ಮುದ್ದು ಮಗನೇ, ಕ್ರತುವ್ರತಗಳಿಂದ ನಿನ್ನ ದೇಹ ಕೃಶವಾಗಿದೆ. ತಡೆದುಕೊಳ್ಳುವೆಯಾದರೆ ಬಲವಾಗಿ ತಬ್ಬಿಕೊಳ್ಳಬೇಕೆಂದಿದ್ದೇನೆ. ಆದರೂ ಅಪ್ಪಣೆಯಿಲ್ಲದೆ ನಿನ್ನನ್ನು ಸಲಿಗೆಯಿಂದ ಆಲಿಂಗಿಸಲು ನನಗೆ ಧೈರ್ಯ ಸಾಲದು. ರಾಜರ್ಷಿಯೋಗ್ಯವಾದ ಧೀರವಚನಗಳನ್ನು ನೀನಾಡುತ್ತಿರುವುದರಿಂದ ನಿನ್ನನ್ನು ಕಂಡರೆ ನನಗೆ ಭಕ್ತಿಮಿಶ್ರಿತವಾದ ಭಯ.

ದುರ್ಯೋಧನ—ನಿನ್ನ ಅಕ್ಕರೆ, ಅಭಿಮಾನ ಇದೇ ರೀತಿಯಿರಲಿ.

ದ್ರೋಣ—ಮಗು, ದುರ್ಯೋಧನ, ಇದೋ ಮಹೇಂದ್ರನಿಗೆ ಪ್ರಿಯಮಿತ್ರನಾದ ಭೀಷ್ಮಕನೆಂಬುವನು ನಿನ್ನನ್ನು ಅಭಿನಂದಿಸಲೆಂದು ಬಂದು ನಿನ್ನ ಸಮಯ ಕಾಯುತ್ತಿದ್ದಾನೆ.

ದುರ್ಯೋಧನ—(ಬಳಿಬಂದ ಭೀಷ್ಮಕನ ಕಡೆ ತಿರುಗಿ) ಆರ್ಯನಿಗೆ ಸ್ವಾಗತ.

ಭೀಷ್ಮ—ಅಪ್ಪ ದುರ್ಯೋಧನ, ಇದೋ ದಕ್ಷಿಣಾಪಥಪರಿಘ ಪ್ರಾಯನಾದ ಭೂರಿಶ್ರವನೆಂಬುವನು ನಿನ್ನನ್ನು ಅಭಿನಂದಿಸಲು ಬಂದು ನಿನ್ನ ಸಮಯ ಕಾಯುತ್ತಿದ್ದಾನೆ.

ದುರ್ಯೋಧನ—ಆರ್ಯನಿಗೆ ಸ್ವಾಗತ.

ದ್ರೋಣ—ಮಗು ದುರ್ಯೋಧನ, ನೀನು ಮಾಡಿದ ಯಜ್ಞಕ್ಕಾಗಿ ನಿನ್ನನ್ನು ಅಭಿನಂದಿಸಲೆಂದು ಕೃಷ್ಣನು ಕಳಿಸಿರುವ ಅಭಿಮನ್ಯು ಬಂದಿದ್ದಾನೆ.

ದುರ್ಯೋಧನ—ಮಗು, ಬಾರಪ್ಪ (ಎನ್ನುವಷ್ಟರಲ್ಲೇ)

ಶಕುನಿ—ವತ್ಸ ದುರ್ಯೋಧನ, ಇದೋ ಜರಾಸಂಧನ ಮಗನಾದ ಸಹದೇವನು ನಿನ್ನನ್ನು ಅಭಿನಂದಿಸಲು ಬಯಸುತ್ತಿದ್ದಾನೆ.

ದುರ್ಯೋಧನ—(ಅಭಿಮನ್ಯು ಸಹದೇವ ಇವರ ಕಡೆ ಪ್ರೀತಿಯಿಂದ ನೋಡಿ ಬಳಿ ಬಂದ ಸಹದೇವನನ್ನು ಆಲಿಂಗಿಸಲು ತೋಳ್ ಚಾಚಿ) ಬಾ ಮಗು, ತಂದೆಯಂತೆ ನೀನೂ ಪರಾಕ್ರಮಶಾಲಿಯಾಗು.

ಸರ್ವರೂ—(ಗುಂಪಾಗಿ ಬಂದ ರಾಜಸಮೂಹವನ್ನು ತೋರಿ) ಈ ಸರ್ವರಾಜಮಂಡಲವೂ ನಿನ್ನನ್ನು ಅಭಿನಂದಿಸುತ್ತದೆ.

ದುರ್ಯೋಧನ—ಅನುಗೃಹೀತನಾದೆ; (ಹುಡುಕುಗಣ್ಣಿನಿಂದ ರಾಜ ಸಮೂಹವನ್ನು ನಿಟ್ಟಿಸಿ) ರಾಜರೆಲ್ಲರೂ ಬಂದಿದ್ದಾರೆ. ಆದರೆ ವಿರಾಟನೊಬ್ಬನು ಮಾತ್ರ ಕಾಣುತ್ತಿಲ್ಲವಲ್ಲಾ!

ಶಕುನಿ—ಅವನನ್ನು ಕರೆತರಲು ನಾನೊಬ್ಬ ದೂತನನ್ನು ಕಳಿಸಿದ್ದೆ; ಇನ್ನೇನು ದಾರಿಯಲ್ಲಿ ಬರುತ್ತಿರಬಹುದು.

ದುರ್ಯೋಧನ—(ದ್ರೋಣರನ್ನು ಕುರಿತು) ಸ್ವಾಮಿ, ಧರ್ಮ ಮತ್ತು ಧನುರ್ವಿದ್ಯೆಗಳೆರಡರಲ್ಲೂ ನನಗೆ ಆಚಾರ್ಯರಾದ ತಾವು ಇಂದು ನನ್ನಿಂದ ದಕ್ಷಿಣೆಯನ್ನು ಸ್ವೀಕರಿಸಬೇಕು.

ದ್ರೋಣ—ಏನು? ದಕ್ಷಿಣೆಯೋ? ಆಗಲಿ, ತಾಳು; ಬೇಡಿಕೊಳ್ಳುತ್ತೇನೆ.

ದುರ್ಯೋಧನ—ಆಚಾರ್ಯರಾದ ತಾವು ಬೇಡುವುದೆಂದರೇನು! ಅಪ್ಪಣೆ ಕೊಡಿಸಬೇಕು.

ಭೀಷ್ಮ—ನೀನು ಚಿಕ್ಕಂದಿನಿಂದಲೂ ಸೇವಾಬುದ್ಧಿಯಿಂದ ಕೊಡುತ್ತ ಬಂದಿರುವ ಸೋಮರಸವನ್ನು ದ್ರೋಣರು ಕುಡಿದಿದ್ದಾರೆ. ಬೆಳ್ಗೊಡೆಯ

ತಣ್ಣೆಳಲಿದೆ. ಜೊತೆಗೆ ಪ್ರಖ್ಯಾತಿಯಿದೆ. ನಿನ್ನಂತಹ ಕ್ಷತ್ರಿಯರಿಗೆ ಆಚಾರ್ಯ ನಾಗಿರುವಾಗ ಈ ಬ್ರಾಹ್ಮಣಶ್ರೇಷ್ಠನಿಗೆ ಹಣದಲ್ಲಾಗಲಿ ಮತ್ತಾವ ಫಲದಲ್ಲೇ ಆಗಲಿ ಕೊರತೆ ಎಲ್ಲಿ ಬಂತು ?

ದುರ್ಯೋಧನ—ತಾವೇನನ್ನು ಅಪೇಕ್ಷಿಸುವಿರೋ, ಅಪ್ಪಣೆ ಕೊಡಿಸ ಬೇಕು. ನಿಮಗೆ ನಾನೇನನ್ನು ಕೊಡಲಿ ? ಹೇಳಿ.

ದ್ರೋಣ—ಪುತ್ರ ದುರ್ಯೋಧನ, ತಾಳು ಹೇಳುತ್ತೇನೆ.

ದುರ್ಯೋಧನ—ಈಗೇಕೆ ನೀವು ಹಿಂತೆಗೆಯುತ್ತಿರುವಿರಿ ? ನಿಮಗೆ ನಾನು ಪ್ರಾಣಕ್ಕಿಂತಲೂ ಪ್ರಿಯನಲ್ಲವೇ ? ನಿಮ್ಮ ಉಪದೇಶಬಲದಿಂದಲೇ ಅಲ್ಲವೇ ನಾನು ಸಾಹಸವನ್ನು ತೋರಿ ಶೂರರಲ್ಲಿ ಗಣ್ಯನಾದೆ ?! ನಿಮಗೇನು ಬೇಕೋ ನಿರ್ಭಿಡೆಯಿಂದ ಹೇಳಿ ; ಕೊಟ್ಟು ಧನ್ಯನಾಗುತ್ತೇನೆ. ನನ್ನ ಕೈಯಲ್ಲಿ ಗದೆಯಿದ್ದರೆ ಸಾಕು ; ಸರ್ವವೂ ನಿಮ್ಮದೇ.

ದ್ರೋಣ—ಮಗು, ಸ್ವಲ್ಪ ತಾಳಪ್ಪ, ಹೇಳುತ್ತೇನೆ. ಕಣ್ಣೀರುಕ್ಕಿ ಕಂಠ ಬಿಗಿದು ಬರುತ್ತಿದೆ.

ಸರ್ವರು—ಇದೇನು ಆಚಾರ್ಯರು ಕಣ್ಣೀರಿಡುತ್ತಿದಾರೆ !

ಭೀಷ್ಮ—ಅಪ್ಪ ದುರ್ಯೋಧನ, ಈಗ ನಿನ್ನ ವಿದ್ಯೆ ಶೌರ್ಯ ಸಂಪನ್ನತೆ ಯೆಲ್ಲ ವಿಫಲವಾಯಿತು.

ದುರ್ಯೋಧನ—(ತೆರೆಯ ಕಡೆ ತಿರುಗಿ) ಯಾರಲ್ಲಿ ?

ಭಟ—(ಪ್ರವೇಶಿಸಿ) ಮಹಾರಾಜರಿಗೆ ಜಯವಾಗಲಿ.

ದುರ್ಯೋಧನ—ಓಡು ; ನೀರು ತಾ.

ಭಟ—ಮಹಾರಾಜರ ಅಪ್ಪಣೆ. (ನಿಷ್ಕ್ರಮಿಸಿ ಪ್ರವೇಶಿಸಿ) ಒಡೆಯರೇ, ಇದೋ ನೀರು.

ದುರ್ಯೋಧನ—ಕೊಡಿಲ್ಲಿ. (ಕಲಶವನ್ನು ಕೈಗಿಸುಕೊಂಡು) ಪೂಜ್ಯ ಆಚಾರ್ಯರೇ, ಮುಖಕ್ಕೆ ನೀರು ಕೊಳ್ಳಿ—ಕಣ್ಣೀರಿನ ಕಲೆಯನ್ನು ತೊಳೆದು ಕೊಳ್ಳಿ.

ದ್ರೋಣ—ಆಗಲಪ್ಪ, ಆಗಲಿ. ನಾನು ಹೇಳಿದುದನ್ನು ನೀನು ನಡೆಸಿ ಕೊಟ್ಟರಲ್ಲವೆ ನನ್ನ ಕಣ್ಣೀರಿನ ಕಲೆಯನ್ನು ತೊಳೆದುಕೊಳ್ಳಲು ನೀನು ನೀರನ್ನು ಕೊಟ್ಟಂತಾಗುವುದು ?

ದುರ್ಯೋಧನ—ಅಯ್ಯೋ! ಮೊದಲಿನಂತೆ ನಾನೀಗಲೂ ಮೋಸಗಾರನೆಂದು ನೀವು ಬಗೆದಿರಾ? ನೀವು ಕೇಳಿದ್ದನ್ನು ನಾನು ಕೊಡಲಾರೆನೆಂದು ಕೊಂಡಿರುವಿರೇನು? ಹಾಗಾದರೀಗಲೇ ನಿಮ್ಮ ಶರಶತಕಠಿನ ಹಸ್ತವನ್ನಿತ್ತ ನೀಡಿ—ಇದೋ ನೀರು—ನಿಮಗೆ ಬೇಕಾದುದನ್ನೆಲ್ಲಾ ಕೊಟ್ಟೆನೆಂದು ಧಾರೆಯೆರೆಯುತ್ತೇನೆ. ಸಂಶಯ ಪಡಬೇಡಿ, ಕೈನೀಡಿ.

ದ್ರೋಣ—ಆಹ! ನನ್ನ ಮನಸ್ಸಿಗೀಗ ನಂಬಿಕೆ ಹುಟ್ಟಿತು. ಮಗು, ಕೇಳಪ್ಪ: ಪಾಂಡವರು ನಿರಾಶ್ರಿತರಾಗಿ ಎಲ್ಲಿ ಅಲೆಯುತ್ತಿರುವರೋ?! ಹನ್ನೆರಡು ವರ್ಷಗಳಾಯ್ತು ಅವರು ಕಣ್ಮರೆಯಾಗಿ ಹೋಗಿ. ನೀನು ಪಾಂಡವರಿಗೆ ಅವರ ಭಾಗವನ್ನು ಕೊಟ್ಟುಬಿಡು. ಇದೇ ನಾನು ನಿನ್ನನ್ನು ಬೇಡುವ ಭಿಕ್ಷೆ! ನೀನು ನನಗೆ ಕೊಡಬೇಕಾದ ದಕ್ಷಿಣೆಯೂ ಅದೆ!

ಶಕುನಿ—(ಉದ್ವೇಗದಿಂದ) ಅದು ಹಾಗಲ್ಲ ತಾಳಿ, ಸ್ವಾಮಿ. ನಿಮ್ಮ ನೆರಳಲ್ಲಿದ್ದು ನಿಮ್ಮನ್ನು ದೊಡ್ಡವರೆಂದು ನಂಬಿದ ಈ ಶಿಷ್ಯನಿಗೆ ನೀವು ಯಜ್ಞದ ಹೆಸರಿನಲ್ಲಿ ಧರ್ಮವಂಚನೆ ಮಾಡುವುದು ತರವೆ?

ದ್ರೋಣ—ಏನು? ಧರ್ಮವಂಚನೆಯೆಂದೆಯಾ? ಹಾಗೆಲ್ಲಾ ಮಾತನಾಡ ಬೇಡವಯ್ಯ, ಗಾಂಧಾರದೇಶದ ಭ್ರಾಂತಶಕುನಿ. ನೀನು ಕುಸಂಸ್ಕೃತನಾದುದರಿಂದ ಪ್ರಪಂಚವನ್ನೆಲ್ಲಾ ಅಸಂಸ್ಕೃತವೆಂದು ಭಾವಿಸುತ್ತೀಯೆ. ಅಬ್ಬ! ಪಿತ್ರಾರ್ಜಿತವನ್ನು ಅಣ್ಣತಮ್ಮಂದಿರಿಗೆ ಹಂಚಿದರೆ ವಂಚನೆಯೆ? ನಾನು ಬೇಡಿಕೊಂಡಾಗ ಕೊಡುವುದು ಮೇಲೋ ಅಥವಾ ಅವರೇ ಬಲಾತ್ಕಾರದಿಂದ ಕಿತ್ತುಕೊಂಡಾಗ ಬಿಡುವುದು ಮೇಲೋ? ಹೇಳು

ದುರ್ಯೋಧನ—(ಅಸಮಾಧಾನದಿಂದ) ಏನು? ಬಲಾತ್ಕಾರವೆಂದಿರಾ?

ಭೀಷ್ಮ—ಅಪ್ಪ ದುರ್ಯೋಧನ, ಅವಭೃತಸ್ನಾನವಾಗಬೇಕಾದ ಈ ಶುಭ ಮುಹೂರ್ತದಲ್ಲಿ ಶಕುನಿಯ ಮಾತಿಗೆ ಕಿವಿಗೊಡಬೇಡ. ಅವನು ಮಿತ್ರನ ಮುಖವಾಡದ ಶತ್ರು. ನೀನು ಪಾಂಡವರನ್ನು ಕಂಡರೆ ಮುಖಮುರಿಯುತ್ತೀಯೆ, ಅವರು ನಿನ್ನನ್ನು ಕಂಡರೆ ಕೆಕ್ಕರಿಸುವರು. ಇದೆಲ್ಲಕ್ಕೂ ಮೂಲ ಈ ಶಕುನಿಯ ಅಸಾಧ್ಯ ಅಹಂಕಾರ.

ದುರ್ಯೋಧನ—(ದ್ರೋಣರನ್ನು ಕುರಿತು) ಆಚಾರ್ಯರೇ, ಆಗಲಿ; ತಾವೆಂದುದು ಸರಿಯೆನ್ನೋಣ. ನಿಮ್ಮನ್ನು ನಾನೊಂದು ಮಾತು ಕೇಳು ತ್ತೇನೆ.......

ದ್ರೋಣ—ಕೇಳಪ್ಪ.

ದುರ್ಯೋಧನ—ನೀವು ಹೇಳುವಂತೆ, ಬಲಾತ್ಕಾರ ಮಾಡುವಷ್ಟು ಸಾಮರ್ಥ್ಯವುಳ್ಳ ಆ ಪಾಂಡವರು ಹಿಂದೆ ಸಭಾಮಧ್ಯದಲ್ಲಿ ರಾಜ್ಯಭ್ರಷ್ಟರೂ ಮಾನಭ್ರಷ್ಟರೂ ಆದಾಗ ರೋಷವನ್ನೇಕೆ ನುಂಗಿಕೊಂಡರೋ?

ದ್ರೋಣ—ಜೂಜಿನ ಗೀಳು ಹಿಡಿದು ಧರ್ಮದ ಹೆಸರಿನಲ್ಲಿ ವಂಚಿತ ನಾದ ಧರ್ಮರಾಯನನ್ನಲ್ಲವೇ ನೀನು ಈ ಸಂಬಂಧವಾಗಿ ಕೇಳಬೇಕಾದ್ದು? ಸಭಾಸ್ತಂಭವನ್ನು ತೂಗಿನೋಡುತ್ತಿದ್ದ ಭೀಮನನ್ನು ಅಷ್ಟಕ್ಕೇ ತಡೆದು ನಿಲ್ಲಿಸಿದವನು ಅವನಲ್ಲವೆ? ಅಂದು ಅದರಿಂದ ಒಬ್ಬನು ನುಗ್ಗುನುರಿಯಾಗಿ ದ್ದಿದ್ದರೆ ಇಂದು ಇಲ್ಲಿ ನಮ್ಮನ್ನು ಆಕ್ಷೇಪಿಸುತ್ತಿರುವ ಈ ಶಕುನಿಯ ಸೊಲ್ಲೇ ಇರುತ್ತಿರಲಿಲ್ಲ.

ಭೀಷ್ಮ—(ದ್ರೋಣರನ್ನು ಪ್ರತ್ಯೇಕವಾಗಿ ಕರೆದು) ಆಗಬೇಕಾದುದೊಂದು ಹೋಗಿ, ಆಗಬಾರದುದಿನ್ನೊಂದಾಯ್ತು! ಸ್ವಾಮಿ, ಆಚಾರ್ಯರೇ, ನಮಗೆ ಕೆಲಸವಾಗುವುದು ಮುಖ್ಯ, ಕಲಹವಲ್ಲ.

ದ್ರೋಣ—ನಾವೀಗ ಸಡಿಲ ಕೊಡಬಾರದು. ಆಗುವುದಾದರೆ ಕಲ ಹವೇ ಆಗಲಿ.

ಭೀಷ್ಮ—ಆಚಾರ್ಯರು ಪ್ರಸನ್ನರಾಗಬೇಕು. (ದುರ್ಯೋಧನನ ಕಡೆ ತಿರುಗಿ) ಅಪ್ಪ ದುರ್ಯೋಧನ, ಕೇಳು. ಪಾಂಡವರೀಗ ದುರ್ಬಲರೂ ಬಡ ಪಾಯಿಗಳೂ, ನಿರಾಶ್ರಿತರೂ ಆಗಿದ್ದಾರೆ. ನಿನ್ನಿಂದವರು ರಕ್ಷಣೆಯನ್ನು ಕೋರುತ್ತಿರುವರೇ ಹೊರತು ನಿನ್ನ ಮೇಲವರು ಜೋರು ಮಾಡುತ್ತಿಲ್ಲ. ನೀನೆಂದರವರಿಗೆಲ್ಲ ಅಕ್ಕರೆ. ಅಂತಹ ಪಾಂಡವರನ್ನು ನೀನೇನು ಒಂದೇ ಮನೆ ಯವರೆಂದು ಕೂಡಿ ಬಾಳುವೆಯೋ? ಅಥವಾ ಅವರು ಕಾಡುಮೃಗಗಳೊಡ ನಿರಲೆಂದು ಬಿಡುವೆಯೊ?

ಶಕುನಿ—ಇರಲಿ, ಇರಲಿ ಬಿಡಿ.

ಕರ್ಣ—ಸ್ವಾಮಿ, ಆಚಾರ್ಯರೆ, ಸಿಟ್ಟನ್ನು ಬಿಟ್ಟು ಮಾತಾಡಿ.

ನೀವು ಹಿತವನ್ನೇ ಹೇಳಿದರೂ—ಒರಟಾಗಿ ಹೇಳಿದರೆ—ಅದಕ್ಕೆ ಜಗ್ಗುವನಲ್ಲ ದುರ್ಯೋಧನ. ಕೇಳುತ್ತಿದ್ದಂತೆಯೇ ಕೋಪದ ಕಿಡಿ ಕಾರುತ್ತಾನೆ; ಇತರರನ್ನು ತನಗಿಂತಲೂ ಉತ್ತಮರೆಂದು ಹೊಗಳಿದರೆಂದಿಗೂ ಅವನು ಸಹಿಸನು. ನಿಮ್ಮ ಶಿಷ್ಯನ ಯಜ್ಞಕಾರ್ಯವಿನ್ನೇನು ಮುಗಿಯುವುದರಲ್ಲಿದೆ—ಅದನ್ನು ನೆರವೇರಿಸಿಬಿಡಿ. ಬಹು ದೋಷಗಳಿಂದ ಕೂಡಿದ ಕಾಡಾನೆಯನ್ನು ಹೇಗೋ ಹಾಗೆ ಇವನನ್ನು ಉಪಾಯದಿಂದಲೇ ನಡೆಸಿಕೊಳ್ಳಬೇಕು.

ದ್ರೋಣ—(ಕರ್ಣನೊಡನೆ ಪ್ರತ್ಯೇಕವಾಗಿ) ವತ್ಸ ಕರ್ಣ, ಬ್ರಾಹ್ಮಣನಾದ ನನಗೆ ಬಹಳ ಆವೇಶವಪ್ಪ. ಸಕಾಲದಲ್ಲಿ ನೀನು ನನ್ನನ್ನೆಚ್ಚರಿಸಿದೆ. ಇದೋ ನೀನು ಹೇಳಿದಂತೆಯೇ ಮಾಡುತ್ತೇನೆ. (ದುರ್ಯೋಧನನನ್ನು ಸಮೀಪಿಸಿ) ಪುತ್ರ ದುರ್ಯೋಧನ, ನಾನು ನಿನಗೆ ಒಂದು ಬುದ್ಧಿಯ ಮಾತನ್ನು ಹೇಳುವಷ್ಟು ದೊಡ್ಡವನೋ ಅಲ್ಲವೋ?

ಭೀಷ್ಮ—(ಸ್ವಗತ) ಇದೀಗ ಸರಿಯಾದ ದಾರಿ. ಒರಟರಿಗೆ ಸಮಾಧಾನವೇ ಸಿದ್ಧೌಷಧ.

ದುರ್ಯೋಧನ—ಆಚಾರ್ಯರೇ, ನನಗಷ್ಟೇ ಅಲ್ಲ, ನನ್ನ ಕುಲಕ್ಕೆಲ್ಲ ನೀವು ದೊಡ್ಡವರು, ತಿದ್ದುವ ಒಡೆಯರು.

ದ್ರೋಣ—ಇದೀಗ ನಿನಗೆ ತಕ್ಕ ಮಾತು- ನನ್ನಿಂದ ನಿನಗೆ ವಂಚನೆಯಾದರೆ ಅದರಿಂದ ಬರುವ ಪಾಪ ನಿನಗಲ್ಲ, ನನಗೆ. ನಾನು ನಿನ್ನನ್ನೇನಾದರೂ ಒತ್ತಾಯ ಪಡಿಸಿದರೆ ಅದರಿಂದಾಗುವ ಲಾಭ ನನಗಲ್ಲ, ನಿನಗೆ. ದೊಡ್ಡ ಮನೆತನಗಳೆರಡರ ನಡುವೆ ಒಡಕುಂಟಾದರೆ ನ್ಯಾಯಶೀಲರ ಮಾತಿನಿಂದ ಒಗ್ಗಟ್ಟುಂಟಾಗುತ್ತದೆ.

ದುರ್ಯೋಧನ—ಆದ್ದರಿಂದಲೇ ಸಲಹೆಯನ್ನು ಕೇಳಬೇಕೆಂದಿದ್ದೇನೆ.

ದ್ರೋಣ—ಪುತ್ರ, ಯಾರ ಸಲಹೆಯನ್ನು ಕೇಳಬೇಕೆಂದಿದ್ದೀಯೆ? ಭೀಷ್ಮನೋ, ಕರ್ಣನೋ, ಕೃಪನೋ ಅಥವಾ ಜಯದ್ರಥನೋ? ಅಶ್ವತ್ಥಾಮನೋ, ವಿದುರನೋ ಅಥವಾ ನಿನ್ನ ತಾಯಿತಂದೆಗಳ ಸಲಹೆಯನ್ನು ಕೇಳಬೇಕೆಂದಿದ್ದೀಯೋ— ಹೇಳಪ್ಪ.

ದುರ್ಯೋಧನ—ಅಲ್ಲ, ಅವರೊಬ್ಬರದೂ ಅಲ್ಲ! ನಮ್ಮ ಮಾವನ ಸಲಹೆಯನ್ನು ಕೇಳಬೇಕೆಂದಿದ್ದೇನೆ.

ದ್ರೋಣ—ಏನು ? ಶಕುನಿಯ ಸಲಹೆಯನ್ನೇ ? (ವಿಮುಖವಾಗಿ ಸ್ವಗತ) ಕೆಲಸ ಕೆಟ್ಟಿತು !

ದುರ್ಯೋಧನ—(ಶಕುನಿಯ ಕಡೆ ತಿರುಗಿ) ಮಾವ, ಬಾ ಇಲ್ಲಿ. ಗೆಳೆಯ ಕರ್ಣ, ನೀನೂ ಬಾ-

ದ್ರೋಣ—(ಸ್ವಗತ) ಆಗಲಿ. ಈಗ ಒಂದುಪಾಯ ಮಾಡುತ್ತೇನೆ. (ಶಕುನಿಯನ್ನು ಕುರಿತು) ವತ್ಸ ಗಾಂಧಾರರಾಜ, ಇಲ್ಲಿ ಬಾ ಸ್ವಲ್ಪ.

ಶಕುನಿ—ಊ. ಇದೋ ಬಂದೆ. (ಎಂದು ಸೆಟೆದು ನಿಲ್ಲುವನು.)

ದ್ರೋಣ—ವತ್ಸ, ಮುಪ್ಪಿಗೆ ಮುನಿಸು ಜಾಸ್ತಿ. ಈ ಮುದಿಹಾರುವನ ಮತಿಹೀನತೆಯನ್ನು ಮನ್ನಿಸು. ಆಲಂಗಿಸುತ್ತೇನೆ ಬಾ. ನನ್ನ ಒರಟು ಮಾತುಗಳನ್ನು ಮರೆತುಬಿಡು. (ಎಂದು ತೋಳುಗಳನ್ನು ಚಾಚುವನು.)

ಶಕುನಿ—(ಆತ್ಮಗತ) ಆಹ ! ಆಚಾರ್ಯನೆಷ್ಟು ಘಾಟಿ ! ತನ್ನ ಕೆಲಸವನ್ನು ತೂಗಿಸಿಕೊಳ್ಳಲು ನನ್ನ ತಲೆ ಸವರುತ್ತಿದಾನೆ. (ಎಂದು ತಿರಸ್ಕಾರದಿಂದ ದ್ರೋಣನ ಕಡೆ ನೋಡಿ ಅವನ ತೋಳಿಗೆ ಸಿಗದೆ ದುರ್ಯೋಧನನ ಬಳಿ ಸಾರುವನು.)

ಭೀಷ್ಮ—(ದ್ರೋಣನು ಹತಾಶನಾಗಿ ತನ್ನ ಆಸನದಲ್ಲಿ ಕುಳಿತುದನ್ನು ಕಂಡು ಕನಿಕರದಿಂದ) ಆಹ ! ಈ ದ್ರೋಣನು ತನ್ನ ಶಿಷ್ಯರ ಮೇಲಣ ವಾತ್ಸಲ್ಯ ದಿಂದ ಶಕುನಿಯಂಥವನನ್ನು ಬೇಡಿಕೊಳ್ಳಲೂ ಹೇಸಲಿಲ್ಲ, ಪಾಪ. ಎಷ್ಟು ಸಂತೈಸಿದರೂ ತನ್ನ ವಂಚಕಬುದ್ಧಿಯನ್ನು ಬಿಡನಲ್ಲಾ ಶಕುನಿ !?

ದುರ್ಯೋಧನ—ಮಾವ, ಪಾಂಡವರಿಗೆ ಅರ್ಧರಾಜ್ಯವನ್ನು ಕೊಡುವ ಸಂಬಂಧವಾಗಿ ನಿನ್ನ ಅಭಿಪ್ರಾಯವೇನು ?

ಶಕುನಿ—ನನ್ನ ಅಭಿಪ್ರಾಯವಿನ್ನೇನು !? ಕೊಡಬಾರದೆಂಬುದೇ !

ದುರ್ಯೋಧನ—ಮಾವ, ಒಪ್ಪಿಕೋ ; ಕೊಟ್ಟುಬಿಡೋಣ.

ಶಕುನಿ—ಅಯ್ಯ, ರಾಜ್ಯವನ್ನು ಕೊಡಬೇಕೆಂದಿದ್ದರೆ—ನಮ್ಮೊಡನಿನ್ನೇಕೆ ಮಂತ್ರಾಲೋಚನೆ ? ಅರ್ಧ ರಾಜ್ಯವೇಕೆ, ಎಲ್ಲವನ್ನೂ ಕೊಟ್ಟು ಕೈ ಮುಗಿದುಬಿಡು.

ದುರ್ಯೋಧನ—ಗೆಳೆಯ ಅಂಗರಾಜ, ನೀನೇಕೆ ಏನನ್ನೂ ಹೇಳುತ್ತಿಲ್ಲವಲ್ಲ ?

ಕರ್ಣ—ನಾನು ಹೇಳುವುದೇನಿದೆ ? ರಾಮಚಂದ್ರನಂತೆ ನೀನು ತಮ್ಮಂದಿರೊಡನೆ ಸೌಹಾರ್ದದಿಂದ ಬಾಳಿ ಬೆಳೆಯಲಿಚ್ಛಿಸಿದರೆ ನಾನದಕ್ಕಡ್ಡಿ ಬಾರೆ ; ಬೇಕು-ಬೇಡವೆನ್ನುವುದು ನಿನಗೆ ಸೇರಿದ್ದು. ಯುದ್ಧವಾದರೆ ನಿನಗೆ ಬೆಂಬಲಿಗರಾಗಿ ನಿಲ್ಲುವುದು ನಮ್ಮ ಕೆಲಸ.

ದುರ್ಯೋಧನ—(ಶಕುನಿಯನ್ನು ಕುರಿತು) ಮಾವ, ಪ್ರಬಲಶತ್ರುಗಳಿಂದ ಸುತ್ತುವರಿದ, ಬಾಳಲನುಕೂಲವಿಲ್ಲದ ಹಾಳು ರಾಜ್ಯವೊಂದನ್ನು ಹೇಳು ; ಪಾಂಡವರು ಅಲ್ಲಿದ್ದುಕೊಳ್ಳಲಿ ; ಕೊಟ್ಟುಬಿಡೋಣ.

ಶಕುನಿ—ಅಯ್ಯ, ನೋಡು ; ನಮ್ಮ ದೇಶದಲ್ಲಿ ಅಂಥ ರಾಜ್ಯವೇ ದೊರೆಯದು. ಪಾರ್ಥನಿಗಿಂತ ಬಲಿಷ್ಠರಿಲ್ಲ ! ಅಂದಮೇಲವರಿಗೆ ಶತ್ರುಗಳೆಲ್ಲಿ ಬಂದಾರು ? ಧರ್ಮರಾಯನು ರಾಜನೆಂದಮೇಲೆ ಬಂಜರಭೂಮಿಯೂ ನಂದನವಾದೀತು.

ದುರ್ಯೋಧನ—ಹಾಗಾದರೀಗೇನು ಮಾಡಲಿ ? ಕೇಳಿದ್ದನ್ನು ಕೊಡುವೆನೆಂದು ಗುರುಗಳ ಕೈಮೇಲಾಗಲೇ ಧಾರೆಯೆರೆದುಬಿಟ್ಟೆ. ನಾನು ಮಾಡಿದ ಪ್ರಮಾಣ ಗುರುಹಿರಿಯರೆಲ್ಲರ ಕಿವಿಗೂ ಬಿದ್ದಿದೆ. ಇದನ್ನು ರಾಜನೀತಿಭ್ರಷ್ಟತೆಯೆನ್ನಲಿ, ವಂಚನೆಯೆನ್ನಲಿ—ಏನುಬೇಕಾದರೆನ್ನಲಿ ; ನಾನು ಧಾರೆಯೆರೆದದ್ದು ಸತ್ಯವೆನ್ನುವಂತಾದರೆ ಸಾಕು.

ಶಕುನಿ—ನೀನೀಗ ಸುಳ್ಳು ಹೇಳಿದಂತಾಗಬಾರದಷ್ಟೇ ತಾನೆ ?

ದುರ್ಯೋಧನ—ಅಷ್ಟೆ !

ಶಕುನಿ—ಬಾ ಹಾಗಾದರೆ (ಎಂದು ದುರ್ಯೋಧನನೊಡಗೂಡಿ ದ್ರೋಣನ ಬಳಿಸಾರಿ) ಸ್ವಾಮಿ ಆಚಾರ್ಯರೇ, ದುರ್ಯೋಧನ ಮಹಾರಾಜನು ನಿಮ್ಮಲ್ಲಿ ವಿಜ್ಞಾಪಿಸಿಕೊಳ್ಳುತ್ತಾನೆ....

ದ್ರೋಣ—ವತ್ಸ ಗಾಂಧಾರರಾಜ, ಹೇಳು, ಅದೇನು ಹೇಳಪ್ಪ.

ಶಕುನಿ—ಐದು ರಾತ್ರಿಗಳೊಳಗೆ ಪಾಂಡವರ ಸುಳಿವು ತಿಳಿದರೆ ಅರ್ಧ ರಾಜ್ಯವನ್ನವರಿಗೆ ಖಂಡಿತ ಕೊಡುವನಂತೆ ! ಹೋಗಿ ಬೇಗ ಕರೆದು ತನ್ನಿ.

ದ್ರೋಣ—ಅಯ್ಯ, ಅದಲ್ಲ ಮಾತು. ಮತ್ತಷ್ಟು ಭಂಗ ಪಡಿಸಬೇಕೆಂದು ಹನ್ನೆರಡು ವರ್ಷಗಳಿಂದ ನೀವೆಷ್ಟು ಹುಡುಕಿಸಿದರೂ ಸಿಗದ ಆ ಪಾಂಡವರನ್ನು ನಾನು ಐದೇ ಐದು ರಾತ್ರಿಗಳ ಅವಧಿಯಲ್ಲಿ ಹುಡುಕಿ ಕರೆತ್ತರ

ಬೇಕೆ? ಅಷ್ಟೇಕೆ? ಕೊಡುವೆನೆಂದುದನ್ನು ಕೊಡುವುದಿಲ್ಲವೆಂದು ಬಾಯಿಬಿಟ್ಟು ಹೇಳಿಬಿಡುವುದು ಮೇಲಲ್ಲವೆ?

ಭೀಷ್ಮ—ಅಪ್ಪ, ದುರ್ಯೋಧನ, ನಿಷ್ಕಾಪಟ್ಯವೇ ಧರ್ಮ. ಹಾಗಿದ್ದರೆ ನಮಗೂ ಪ್ರೀತಿ. ನೋಡು ಮಗು, ವರ್ಷವಾಗಲಿ, ಒಂದು ಶತಮಾನವಾಗಲಿ, ನೀನವರನ್ನು ಕರೆತಂದು ರಾಜ್ಯವಿಭಾಗ ಮಾಡಿಕೋ. ಆ ಮೂಲಕ ನೀನು ಮಾಡಿದ ಪ್ರಮಾಣವನ್ನು ಸತ್ಯವೆನಿಸು. ಕುರುವಂಶದವರೆಂದಿಗೂ ಸತ್ಯಪ್ರತಿಜ್ಞರೆನಿಸಿಕೊಂಡು ಬಾಳಿದವರು.

ದುರ್ಯೋಧನ—ಹಾಗೆಂದೇ ನಾನೂ ನಿಶ್ಚಯಿಸಿದ್ದೇನೆ.

ದ್ರೋಣ—(ಆತ್ಮಗತ) ಕಳೆದೇ ಹೋದಳೆಂದಿದ್ದ ಸೀತೆಯ ಸುದ್ದಿಯನ್ನು ತರಲು ಸಮುದ್ರವನ್ನೇ ಉಲ್ಲಂಘಿಸಿದ ಆ ಹನುಮಂತನ ವೀರಸಾಹಸಗುಣ ನನ್ನಲ್ಲೂ ಸಮಾವೇಶವಾಗಬಾರದೇ ಎನಿಸುತ್ತಿದೆ—ಹಿಡಿದ ಕೆಲಸವನ್ನು ಕೈಗೂಡಿಸಬೇಕೆಂಬ ತವಕದಲ್ಲಿ! ನನಗೀಗ ಪಾಂಡವರ ಸುಳಿವೆಲ್ಲಿಂದ ಸಿಕ್ಕೀತು?!

(ಭಟನೊಬ್ಬನು ಪ್ರವೇಶಿಸುವನು.)

ಭಟ—(ಪ್ರವೇಶಿಸಿ) ವಿರಾಟನಗರದಿಂದ ದೂತನೊಬ್ಬನು ಬಂದಿದಾನೆ, ಪ್ರಭು.

ದುರ್ಯೋಧನ—ಬೇಗ ಒಳಕ್ಕೆ ಬರಮಾಡು.

ಭಟ—ಅಪ್ಪಣೆ. (ನಿಷ್ಕ್ರಮಿಸುವನು.)

ದೂತ—(ಪ್ರವೇಶಿಸಿ) ಮಹಾರಾಜರಿಗೆ ಜಯವಾಗಲಿ.

ದುರ್ಯೋಧನ—ವಿರಾಟೇಶ್ವರನು ಬಂದನೋ?

ದೂತ—ಆತನಿಗೆ ದುಃಖ ಕವಿದು ಮನಸ್ಸಿಗೆಳ್ಳಷ್ಟೂ ನೆಮ್ಮದಿಯಿಲ್ಲದುದರಿಂದ ಬರಲಾಗಲಿಲ್ಲ.

ದುರ್ಯೋಧನ—ಆತನಿಗೇನು ಬಂತು ದುಃಖ?

ದೂತ—ಮಹಾರಾಜರು ಅವಧರಿಸಬೇಕು: ಕೀಚಕ ಸಹೋದರರೆಂಬ ನೂರು ಜನ ಬಂಧುಗಳಿದ್ದರವನಿಗೆ. ಅವರನ್ನೆಲ್ಲ ಯಾರೋ ದುರಾತ್ಮನು ರಾತ್ರಿ ವೇಷ ಮರೆಸಿಕೊಂಡು ಬಂದು ತೋಳುಗಳಿಂದಲೇ ಔಕಿ ಸಾಯಿಸಿಬಿಟ್ಟಿದ್ದಾನೆ. ಶವಗಳ ಮೈಮೇಲೆ ಆಯುಧಗಳ ಘಾಯ ಒಂದಾದರೂ ಇಲ್ಲ.

ಭೀಷ್ಮ—ಆಯುಧಗಳ ಘಾಯ ಒಂದಾದರೂ ಇಲ್ಲವೆ? (ದ್ರೋಣನ ಕಡೆ ತಿರುಗಿ ಏಕಾಂತವಾಗಿ) ಆಚಾರ್ಯರೇ, ಪಂಚರಾತ್ರದ ಒಪ್ಪಂದವನ್ನೊಪ್ಪಿ ಕೊಂಡುಬಿಡಿ.

ದ್ರೋಣ—ಅದೇಕೆ ?

ಭೀಷ್ಮ—ಸ್ವಾಮಿ, ಅಪೂರ್ವ ಬಾಹುಬಲವುಳ್ಳ ಭೀಮಸೇನನ ಲೀಲೆ ಯಿದು. ಈ ನೂರು ಜನ ಕೌರವರ ಮೇಲಣ ಕೋಪವನ್ನು ಆ ನೂರ್ವರ ಮೇಲೆ ತೀರಿಸಿಕೊಂಡಿದ್ದಾನೆ.

ದ್ರೋಣ—ಅದು ತಮಗೆ ಹೇಗೆ ಗೊತ್ತು ?

ಭೀಷ್ಮ—ಇದೇನು ಪಂಡಿತಮಹಾಶಯರೆ, ನದಿಯುದ್ದಕ್ಕೂ ಅಲೆಯುತ್ತ ಚೆಲ್ಲಾಟಿಕ್ಕಾಗಿ ಆ ನದಿಯು ದಡಕ್ಕೆ ತಿವಿದಾಡಿದ ಕರುಗಳ ಕೊಂಬುಗಳ ಕಚ್ಚು ಗೂಳಿಗಳಿಗೆ ಗೊತ್ತಾಗದೇ ?

ದ್ರೋಣ—ಗೂಳಿಗಳೆಂದಿರಾ ? ಆಹ ! ನಮ್ಮ ಕೆಲಸ ನೆರವೇರಿ ದಂತೆಯೇ. (ದುರ್ಯೋಧನನ ಬಳಿ ಬಂದು) ಪುತ್ರ ದುರ್ಯೋಧನ, ಪಂಚ ರಾತ್ರದ ಒಪ್ಪಂದಕ್ಕೆ ಒಪ್ಪಿದೆ.

ದುರ್ಯೋಧನ—ಸರಿ ಹಾಗಾದರೆ.

ದ್ರೋಣ—ಓಹೋ ! ಯಜ್ಞಕ್ಕೆಂದು ಬಂದಿರುವ ದೊರೆಗಳೇ ಕೇಳಿ, ನೀವೆಲ್ಲ ಕಿವಿಗೊಟ್ಟು ಕೇಳಿ—ಕುರುರಾಜ ದುರ್ಯೋಧನನು, ಅಲ್ಲ, ಅಷ್ಟೇ ಅಲ್ಲ, ಅವನ ಮಾವನು ಸಹಿತ ಒಪ್ಪಿರುವನು—ಪಾಂಡವರ ಸುಳಿವು ತಿಳಿದು ಬಂದರೆ ಅವರಿಗೆ ರಾಜ್ಯಾರ್ಧವನ್ನು ಕೊಡುವನಂತೆ. (ಎಂದು ದುರ್ಯೋಧನನ ಕಡೆ ತಿರುಗಿ) ಹೌದೇನಪ್ಪ ?

ದುರ್ಯೋಧನ—ಖಂಡಿತ.

ದ್ರೋಣ—ಇನ್ನೂ ಎರಡು ಮೂರು ಸಲ ಈಗಲೇ ಆಲೋಚಿಸಿ ನೋಡು.

ಶಕುನಿ—ಈಗೇಕೆ ? ಸಮಯ ಬರಲಿ, ಆಲೋಚಿಸಿ ನೋಡೋಣ.

ದ್ರೋಣ—ಭೀಷ್ಮ, ಹೌದು ತಾನೇ ?

ಭೀಷ್ಮ—(ಸ್ವಗತ) ಆಚಾರ್ಯರ ಹರ್ಷ ಮಿತಿಮೀರಿ ಪ್ರಕಟವಾದರೆ ನಾವೀಗ ವಂಚಿಸಬೇಕೆಂದಿರುವ ದುರ್ಯೋಧನನು ಅದರ ಸುಳಿವನ್ನು ತಿಳಿದಲ್ಲಿ ನಮ್ಮನ್ನೇ ವಂಚಿಸುವನೋ ಎಂದು ನನಗೆ ಸಂಶಯವಾಗುತ್ತಿದೆ. (ಪ್ರಕಾಶ)

ಮಗು ದುರ್ಯೋಧನ, ವಿರಾಟನ ಮೇಲೆ ನನಗೆ ಒಳಗೊಳಗೇ ವೈರ : ಮೇಲಾಗಿ ನೀನು ಮಾಡಿದ ಯಜ್ಞಕ್ಕೆ ಅವನು ಬರಲಿಲ್ಲವೆಂದು ಅವನ ಮೇಲೆ ನನಗಿದ್ದ ಕೋಪ ಉಕ್ಕೇರಿದೆ ಆದ್ದರಿಂದ ನಡಿ, ಅವನ ಗೋಗ್ರಹಣ ಮಾಡೋಣ.

ದ್ರೋಣ—(ಪ್ರತ್ಯೇಕವಾಗಿ) ಅಯ್ಯ ಭೀಷ್ಮ, ಪಾಪ ವಿರಾಟೇಶ್ವರನು ನನ್ನ ಪ್ರಿಯಶಿಷ್ಯನಲ್ಲವೇ ?! ಅವನ ಗೋಗ್ರಹಣ ಮಾಡುವುದೇಕೆ ?

ಭೀಷ್ಮ—(ಮರೆಯಾಗಿ) ಋಜುಬುದ್ಧಿಯ ಬ್ರಾಹ್ಮಣ, ರಥಶಬ್ದವನ್ನು ಕೇಳಿದೊಡನೆಯೇ ಕೆರಳುವರು ಪಾಂಡವರು. ಅವರಿಗೂ ಕೃತಜ್ಞತೆಯೆಂಬುದಿದೆ. ಗೋಗ್ರಹಣದಿಂದ ನಮ್ಮ ಇಷ್ಟಾರ್ಥ ಸಿದ್ಧಿಸುವುದು.

ಭಟ—(ಪ್ರವೇಶಿಸಿ) ಮಹಾಪ್ರಭು, ತಾವು ಯಜ್ಞಶಾಲೆಯಿಂದ ಅರಮನೆಗೆ ಹಿಂತಿರುಗಲು ರಥಗಳು ಸಿದ್ಧವಾಗಿವೆ.

ದುರ್ಯೋಧನ—ನಡೆಯಿರಿ, ಅದೇ ರಥಗಳನ್ನೇರಿ ವಿರಾಟನ ಗೋಗ್ರಹಣ ಮಾಡೋಣ. ಯಜ್ಞಸಮಯವೆಂದು ಭಂಡಾರದಲ್ಲಿ ತೆಪ್ಪಗಿದ್ದ ನನ್ನ ಗದೆ ಮತ್ತೆ ಕೈಗೆ ಬರಲಿ.

ದ್ರೋಣ—ಹಾಗಾದರೆ ನನ್ನ ರಥವನ್ನು ತನ್ನಿ.

ಶಕುನಿ—ನನಗಾನೆಯನ್ನು ತನ್ನಿ.

ಕರ್ಣ—ಭಾರವನ್ನು ವೇಗವಾಗಿ ಎಳೆಯುವ ಕುದುರೆಗಳನ್ನು ನನ್ನ ರಥಕ್ಕೆ ಕಟ್ಟಿ ಸಜ್ಜುಗೊಳಿಸಿ.

ಭೀಷ್ಮ—ನನ್ನ ಮನಸ್ಸು ವಿರಾಟನಗರಿಯ ಕಡೆಗೇ ಹಾತೊರೆಯುತ್ತಿದೆ. ತ್ವರೆ ಮಾಡಿ, ಧನುಸ್ಸನ್ನು ತನ್ನಿ.

ದುರ್ಯೋಧನ—(ಭೀಷ್ಮನನ್ನು ಕುರಿತು) ನೀವು ಬಿಲ್ಲನ್ನೆಸೆದಿಲ್ಲೇ ಇರಿ. ನಿಮ್ಮ ಆಜ್ಞಾವಿಧೇಯರು ನಾವಿಲ್ಲವೆ !?

ದ್ರೋಣ—ಪುತ್ರ ದುರ್ಯೋಧನ, ನಮ್ಮಿಬ್ಬರಿಗೂ ಯುದ್ಧದಲ್ಲಿ ನಿನ್ನ ಪರಾಕ್ರಮವನ್ನು ನೋಡುವುದೆಂದರೆ ಬಹಳ ಇಷ್ಟ ! ಬರುತ್ತೇವೆ.

ದುರ್ಯೋಧನ—ಪೂಜ್ಯರಿಷ್ಟದಂತಾಗಲಿ.

ದ್ರೋಣ—ವತ್ಸ ಗಾಂಧಾರರಾಜ, ಈ ಗೋಗ್ರಹಣದಲ್ಲಿ ನಿನ್ನದಲ್ಲವೆ ಮುಂದಾಳುತನ?!

ಶಕುನಿ—ಆಹ ! ಎಷ್ಟು ಒಳ್ಳೆಯ ಮಾತಿದು !

ದೃಶ್ಯ ೨

(ಸ್ಥಳ: ವಿರಾಟನಗರಿ)

ಭಟ—(ಪ್ರವೇಶಿಸಿ) ಹೋ! ಹೋ! ವಿರಾಟೇಶ್ವರ ಮಹಾರಾಜನಿಗೆ ನಿವೇದಿಸಿರಿ: ಪ್ರಚ್ಛನ್ನಕಿರಾತರಾದ ವಿಗಡ ಕೌರವರು ನಮ್ಮ ಗೋವುಗಳನ್ನು ಕದ್ದೊಯ್ಯುತ್ತಿದ್ದಾರೆ.

ಕಾಂಚುಕೀಯ—(ಪ್ರವೇಶಿಸುತ್ತ) ಕೌರವರೇನು ?

ಭಟ—ಅಜ್ಜ, ಹೌದೌದು.

ಕಾಂಚುಕೀಯ—ಒಡಹುಟ್ಟಿದವರಿಗೇ ದ್ರೋಹ ಬಗೆದ ಅವರ ಅಯೋಗ್ಯತೆಗಿದು ಸರಿಯಾಗಿದೆ. ಯುದ್ಧ ಕವಚಗಳನ್ನು ತೊಟ್ಟು, ಬಿಲ್ಲು ಬಾಣಗಳನ್ನು ಹಿಡಿದು, ರಥವೇರಿ, ಸೊಕ್ಕಿ, ನಮ್ಮ ರಾಜನ ಮೇಲಣ ವೈರವನ್ನು ಅವರು ಗೋವುಗಳ ಮೇಲೆ ಕಾರುತ್ತಿದ್ದಾರೆ! ಜಯಸೇನ, ಮಹಾರಾಜರಿಗಿಂದು ಹುಟ್ಟಿದ ಹಬ್ಬ! ವರ್ಧಂತ್ಯುತ್ಸವದಲ್ಲಿ ತೊಡಗಿರುವಾಗ ಅವರಿಗೆ ಈ ಸುದ್ದಿಯನ್ನು ತಿಳಿಸಿದರೆ ಕಾಲಾಕಾಲವಿವೇಚನೆಯಿಲ್ಲವೆಂದು ಕೋಪಗೊಳ್ಳುವರು. ಆಗಲಿ, ಆ ಮಂಗಳ ಕಾರ್ಯ ಮುಗಿದ ಮೇಲೆ ಅರಿಕೆ ಮಾಡಿಕೊಳ್ಳುತ್ತೇನೆ, ತಾಳು.

ಭಟ—ಅಜ್ಜ, ಇದು ತಲೆಹೋಗುವ ಕೆಲಸ; ಜಾಗ್ರತೆ ತಿಳಿಸು (ನಿಷ್ಕ್ರಮಿಸುವನು.)

ಕಾಂಚುಕೀಯ—ಆಗಲಿ, ಇದೋ ಹೊರಟೆ. (ನಿಷ್ಕ್ರಮಿಸುವನು.)

ರಾಜ—(ಚಿಂತಾಕ್ರಾಂತನಾಗಿ ಪ್ರವೇಶಿಸಿ) ರಥಚಕ್ರಧ್ವನಿಗೆ ಹೆದರಿ, ಚದುರಿದ ಎಳೆಗರುಗಳಿಂದೊಡಗೂಡಿದ ನನ್ನ ಗೋವೃಂದವನ್ನೊಯ್ದರೆ ?! ಗಂಧ ಸವರಿಕೊಂಡು, ಹೊನ್ನಕಂಕಣ ತೊಟ್ಟು, ಮಾಂಸಖಂಡಗಳಿಂದುಬ್ಬಿ ಕಪ್ಪಕಾಣಿಕೆಯನ್ನು ತಿನ್ನುವ ಈ ನನ್ನ ಕೈಗೆ ಸ್ವಲ್ಪವಾದರೂ ನಾಚಿಕೆಯಿಲ್ಲ! ಜಯಸೇನ, ಜಯಸೇನ !

ಭಟ—(ಪ್ರವೇಶಿಸಿ) ಜಯವಾಗಲಿ ಮಹಾರಾಜರಿಗೆ !

ರಾಜ—ಸಾಕಿನ್ನೇಕೆ ಆ 'ಮಹಾರಾಜ' ಶಬ್ದ. ನನ್ನ ಕ್ಷಾತ್ರ ನೀಗಿ ಹೋಯ್ತು. ರಣವಾರ್ತೆಯನ್ನು ವಿವರಿಸು.

ಭಟ—ಅಪ್ರಿಯವಾದುದನ್ನು ವಿವರಿಸಬಾರದು. ಒಟ್ಟಿನಲ್ಲಿ ಹೇಳು ವುದಾದರೆ, ಬಣ್ಣಬಣ್ಣದ ಹಸುಗಳು ರಥಚಕ್ರದಿಂದೆದ್ದ ರಣಧೂಳಿ ಯಿಂದೊಂದೇ ಬಣ್ಣವಾಗಿ, ಬಾರುಗೋಲೇಟು ಬಿದ್ದೆಡೆಗಳಲ್ಲಿ ಅವು ಮತ್ತೆ ಬಣ್ಣಬಣ್ಣವಾದವು.

ರಾಜ—ಹಾಗಾದರೆ, ಧನುಸ್ಸನ್ನು ತಾ ; ರಥವನ್ನು ಕಟ್ಟು ; ಯಾವ ನಿಗೆ ಭಕ್ತಿಯಿದೆಯೋ ಅವನು ಬೇಕಾದರೆ ನನ್ನನ್ನು ಹಿಂಬಾಲಿಸಿ ಬರಲಿ. ಗೋವುಗಳಿಗಾಗಿ ರಣಚೂಣಿಯಲ್ಲಿ ನಡೆಸಿದ ಹೋರಾಟವೆಂದಿಗೂ ವ್ಯರ್ಥ ವಾಗದು. ಗೋಸೆರೆಯನ್ನು ಬಿಡಿಸಿದರೆ ಧರ್ಮ ಬಂತು ; ಅದು ಸಾಧ್ಯ ವಾಗದೆ, ಸತ್ತರೆ ಹೆಸರು ಬಂತು !

ಭಟ—ಅಪ್ಪಣೆ. (ನಿಷ್ಕ್ರಮಿಸುವನು.)

ರಾಜ—(ಆತ್ಮಗತ) ದುರ್ಯೋಧನನಿಗೆ ನನ್ನ ಮೇಲೇಕಿಷ್ಟು ವೈರ ? ಆಹ ! ನಾನು ಯಜ್ಞಕ್ಕೆ ಬರಲಿಲ್ಲವೆಂದಿರಬೇಕು. ನಾನು ಹೋಗುವುದಾ ದರೂ ಹೇಗೆ ? ಕೀಚಕರ ಸಾವಿನಿಂದ ನಾನು ಕಂಗಾಲಾಗಿದ್ದೇನೆ. ಅಥವಾ ನಾನು ಪಾಂಡವ ಪಕ್ಷಪಾತಿಯೆಂದೋ ? ಆದುದಾಗಲಿ, ಹೋರಾಡುತ್ತೇನೆ. ಹಸ್ತಿನಾಪುರದಲ್ಲಿದ್ದೆನೆಂದು ಹೇಳಿಕೊಂಡು ಬಂದು ನಮ್ಮಲ್ಲಿ ಸೇರಿಕೊಂಡಿರುವ ಆ ಸ್ವಾಮಿಗಳಿಗೆ ದುರ್ಯೋಧನನ ಶೀಲಸ್ವಭಾವ ಗೊತ್ತಿರಬಹುದು. ಆದರೆ ಅವರೊಂದು ದಿನವಾದರೂ ದುರ್ಯೋಧನನನ್ನು ದೂಷಿಸಿಲ್ಲ. ಆಗಲಿ, ಕರೆದು ಕೇಳಿಬಿಡುತ್ತೇನೆ. ಯಾರಲ್ಲಿ ?

ಭಟ—(ಪ್ರವೇಶಿಸಿ ರಾಜನ ಕೈಗೆ ಧನುಸ್ಸನ್ನಿತ್ತು) ಮಹಾಪ್ರಭು.

ರಾಜ—ಸ್ವಾಮಿಗಳನ್ನು ಬರಹೇಳು.

(ಭಟನು ನಿಷ್ಕ್ರಮಿಸುವನು. ಸ್ವಾಮಿಗಳ ವೇಷದ ಧರ್ಮರಾಯನು ಪ್ರವೇಶಿಸುವನು.)

ರಾಜ—ಪೂಜ್ಯರೇ, ಶರಣು. (ಎಂದು ನಮಸ್ಕರಿಸುವನು.)

ಸ್ವಾಮಿ—ಸ್ವಸ್ತಿ.

ರಾಜ—ಸ್ವಾಮಿ, ಈ ಪೀಠದಲ್ಲಿ ಕುಳಿತುಕೊಳ್ಳಿ.

ಸ್ವಾಮಿ—(ಕುಳಿತು) ಅಯ್ಯ ರಾಜ, ಈ ನಿನ್ನ ಯುದ್ಧೋದ್ಯೋಗಕ್ಕೆ ಕಾರಣವೇನು ? ಇಷ್ಟು ಸಂಪತ್ತಿನಿಂದ ನಿನಗೆ ಸಂತೃಪ್ತಿಯಿಲ್ಲವೋ ? ಅಥವಾ

ಸೊಕ್ಕಿದವರನ್ನಿಕ್ಕಿ ಮೆಟ್ಟಲೆಂದೋ? ಅಥವಾ ಮದೋನ್ಮತ್ತರ ಕಾಲ್ತುಳಿತಕ್ಕೆ ಸಿಕ್ಕಿದವರನ್ನು ಬಿಡಿಸಲೆಂದೋ?

ರಾಜ—ಸ್ವಾಮಿ, ಗೋಗ್ರಹಣದಿಂದ ನನಗವಮಾನವಾಗಿದೆ.

ಸ್ವಾಮಿ—ಯಾರಿಂದ?

ರಾಜ—ಧೃತರಾಷ್ಟ್ರನ ಮಕ್ಕಳಿಂದ.

ಸ್ವಾಮಿ—(ಆತ್ಮಗತ) ಅಯ್ಯೋ! ಅನ್ಯಾಯ. ರಕ್ತಸಂಬಂಧವೆಂಬುದು ಜಿತೇಂದ್ರಿಯರ ಮನಸ್ಸನ್ನೂ ಕಲಕಿಬಿಡುತ್ತದೆ! ಆಹ! ಈ ಅಪರಾಧವನ್ನು ವೈರಪ್ರಿಯರಾದ ಕೌರವರು ಮಾಡಿರುವರಾದರೂ ನಾವೇ ತಪ್ಪಿತಸ್ಥರೆನಿಸುತ್ತಿದೆ.

ರಾಜ—ಸ್ವಾಮಿ, ಏನನ್ನೋ ಚಿಂತಿಸುತ್ತಿರುವಿರಿ?

ಸ್ವಾಮಿ—ಚಿಂತೆಯಿನ್ನೇನು; ನನಗವರದೇ ಚಿಂತೆ!

ರಾಜ—ಇನ್ನು ಕೌರವರ ಹುಟ್ಟಡಗಿಸಿಬಿಡುತ್ತೇನೆ. ಅವರ ಈ ಅಲ್ಲದಾಟವನ್ನೆಲ್ಲ ಶಕ್ತನಾದರೂ ಸಾತ್ತ್ವಿಕನಾದ ಧರ್ಮರಾಯನು ಸಹಿಸಿಕೊಂಡಿದ್ದಾನು; ನಾನು ಸಹಿಸಿಯೇನೇ?

ಸ್ವಾಮಿ—(ಆತ್ಮಗತ) ನೆಲೆಗೆಟ್ಟು ನೆಲದ ಮೇಲೆ ಮಲಗಿದ್ದು, ಕೈಹಿಡಿದ ಹೆಂಡತಿಗಾದ ಅವಮಾನವನ್ನು ಸಹಿಸಿದ್ದು, ವೇಷಧರಿಸಿ ಭಂಗಪಟ್ಟು ಹೆರವರ ಮನೆಯ ಊಳಿಗಕ್ಕೆ ನಿಂತಿದ್ದು—ಎಲ್ಲವೀಗ ಸಾರ್ಥಕವಾಯಿತು, ಲೋಕಕ್ಕೆ ನಾನು ಕ್ಷಮಾಶೀಲನೆಂದು ಮನವರಿಕೆಯಾದುದರಿಂದ.

ಭಟ—(ಪ್ರವೇಶಿಸಿ) ಮಹಾಪ್ರಭು.

ರಾಜ—ದುರ್ಯೋಧನನ ಕುತಂತ್ರವೇನು?

ಭಟ—ದುರ್ಯೋಧನನೊಬ್ಬನೇ ಏನು? ಭೂಲೋಕದ ರಾಜರೆಲ್ಲ ಬಂದುಬಿಟ್ಟಿದಾರೆ. ದ್ರೋಣ, ಭೀಷ್ಮ, ಜಯದ್ರಥ, ಶಲ್ಯ, ಕರ್ಣ, ಶಕುನಿ, ಕೃಪ—ಇವರ ಧ್ವಜಗಳನ್ನು ನೋಡಿಯೇ ತತ್ತರಿಸಿ ಹೋದೆವು, ಬಾಣಗಳಿಂದಲ್ಲ.

ರಾಜ—(ನಿಂತು ಕೈಮುಗಿದು) ಏನೆಂದೆ? ನನ್ನ ಪೂಜ್ಯಗುರುಗಳಾದ ಭೀಷ್ಮಾಚಾರ್ಯರೂ ದಯಮಾಡಿಸಿರುವರೇ?

ಸ್ವಾಮಿ—(ಸ್ವಗತ) ಅವಮಾನಿತನಾಗಿದ್ದರೂ ವಿರಾಟೇಶ್ವರನು ಸದಾ

ಚಾರವನ್ನು, ಮೀರಲಿಲ್ಲ! ಆ ಕುರುಕುಲ ಪಿತಾಮಹನೇಕೆ ಬಂದಿರುವನೋ?! ನಾವು ಪ್ರತಿಜ್ಞೆ ಮಾಡಿದ್ದ ಗಡು ಮುಗಿಯಿತೆಂದು ನಮಗೆ ನೆನಪು ಮಾಡಿಕೊಡಲಿರಬಹುದು!

ರಾಜ—ಜಯಸೇನ, ಸೂತನನ್ನು ಕರೆ.

ಭಟ—ಅಪ್ಪಣೆ. (ನಿಷ್ಕ್ರಮಿಸುವನು.)

ಸೂತ—(ಪ್ರವೇಶಿಸಿ) ಆಯುಷ್ಮಂತನಿಗೆ ಜಯವಾಗಲಿ.

ರಾಜ—ರಥವನ್ನು ಶೀಘ್ರವಾಗಿ ತಾ. ಶ್ಲಾಘ್ಯನಾದ ರಣಾತಿಥಿಯೊಬ್ಬನು ದೊರಕಿದ್ದಾನೆ. ಆ ಭೀಷ್ಮಾಚಾರ್ಯರನ್ನು ಬಾಣಗಳಿಂದ ತಣಿಸುತ್ತೇನೆ; ಗೆಲ್ಲುವೆನೆಂಬುದು ಈಡೇರದ ಹಂಬಲ.

ಸೂತ—ಅಪ್ಪಣೆ! ಆದರೆ........ಆಯುಷ್ಮಂತನೇ, ರಿಪುಸೈನ್ಯವನ್ನು ಧ್ವಂಸಮಾಡುವುದರಲ್ಲಿ ಪ್ರಖ್ಯಾತವಾದ ಆ ನಿನ್ನ ರಥವನ್ನು ಉತ್ತರಕುಮಾರನೇರಿಹೋದ. ರಥವಿದ್ಯೆಯನ್ನು ಮೆರೆಯಲವನಿಗೆ ಬಹಳ ಆಸೆ.

ರಾಜ—ಏನು? ಕುಮಾರನು ರಣರಂಗಕ್ಕೆ ಹೋಗಿಬಿಟ್ಟನೆ?

ಸೂತ—ಮಹಾರಾಜರು ಪ್ರಸನ್ನರಾಗಿ ಕೇಳಬೇಕು. ರಥವನ್ನು ಸಿದ್ಧಪಡಿಸಿ .ಸೂತಸಮುದಾಚಾರವನ್ನನುಸರಿಸಿ ನಾನೂ ಅದರ ಪಕ್ಕದಲ್ಲೇ ನಿಂತಿದ್ದೆ. ಆದರೆ, ಕುಮಾರನು ನನ್ನನ್ನು ಬಿಟ್ಟು, ಬೃಹನ್ನಳೆಯನ್ನು ಸಾರಥಿಯನ್ನಾಗಿ ನೇಮಿಸಿಕೊಂಡು ಹೊರಟೇಬಿಟ್ಟ! ಕುಮಾರನು ಹಾಗೆ ಮಾಡಿದ್ದು ಅವಳನ್ನು ಗೇಲಿ ಮಾಡಲೆಂದೋ ಅಥವಾ ಆ ಬೃಹನ್ನಳೆಗೆ ಆ.ಕೌಶಲವಿದೆಯೋ ನನಗೆ ತಿಳಿಯದು.

ಸ್ವಾಮಿ—ರಾಜ, ಹಾಗಾದರೆ ಗಾಬರಿಪಡಬೇಡ. ಬೃಹನ್ನಳೆಯು ಆ ರಥದಲ್ಲಿ ಕುಳಿತು ಹೋಗಿದ್ದ ಪಕ್ಷಕ್ಕೆ—ಅದರ ಗಾಲಿಗಳಿಂದೆದ್ದ ಧೂಳಿನಿಂದ ರಣಗತ್ತಲೆಯನ್ನು ಕವಿಸಿ, ಹಗೆಗಳನ್ನು ಚಕ್ರಧ್ವನಿಯಿಂದಲೇ ತಡೆದು ಚಕಿತಗೊಳಿಸಿ, ಬಾಣವನ್ನು ಹೊಡದಿದ್ದರೂ ಬರೀ ರಥವೇ ಶತ್ರುಗಳನ್ನು ಗೆದ್ದು ಬರುವುದು, ಹೆದರಬೇಡ.

ಭಟ—(ಪ್ರವೇಶಿಸಿ) ಮಹಾರಾಜರಿಗೆ ಜಯವಾಗಲಿ. ಕುಮಾರನ ರಥ ಸ್ಮಶಾನದ ಕಡೆ ತಿರುಗಿ, ಅಲ್ಲಿ ಸ್ವಲ್ಪಕಾಲ ತಂಗಿ, ಕುದುರೆಗಳಿಗೆ ದಣಿವಾರಿಸಲಿರಬೇಕು, ಮತ್ತೆ ರಣರಂಗದ ಕಡೆ ನುಗ್ಗಿತು.

ರಾಜ—ಮುಂದೇನಾಯಿತು. ಬೇಗ ಹೇಳು.

ಭಟ—ಒಡನೆಯೇ ಶತ್ರುಸೇನೆಯ ಆನೆಗಳ ಕಪ್ಪು ಮೈ ಕೆಂಪಾಯಿತು; ನೂರಾರು ಬಾಣ ತೂರಿ ಪೂರಾಯ ಘಾಯ ಹೊಂದದ ಒಂದು ಕುದುರೆಯಾಗಲಿ, ಒಬ್ಬ ಯೋಧನಾಗಲಿ ಇಲ್ಲ. ಬಿದ್ದ ಬಾಣಗಳ ಮೆದೆಗಳಡ್ಡವಾಗಿ ಶರಪರಿಕರ ತುಂಬಿದ ಶತ್ರುಗಳ ಗಾಡಿಗಳು ನಡೆಗೆಟ್ಟು ನಿಂತು ಬಿಟ್ಟವು. ಬೃಹನ್ನಳೆಯ ಬಿಲ್ಲಿನಿಂದ ಬಾಣಗಳ ಮಾರಿಮಳೆ ಭೋರ್ಗರೆದು ಸುರಿಯುತ್ತಿದೆ.

ಸ್ವಾಮಿ—(ಆತ್ಮಗತ) ಅದು ಅಗ್ನಿದೇವನು ಅರ್ಜುನನಿಗೆ ಕೊಟ್ಟ ಅಕ್ಷಯತೂಣೀರದ ಮಹಿಮೆ!

ರಾಜ—ಶತ್ರುಪಕ್ಷದ ವಾರ್ತೆಯೇನಾದರೂ ಗೊತ್ತೇನು?

ಭಟ—ಅದನ್ನು ನಾನು ಕಂಡರಿಯೆ! ಕಣ್ಣಾರೆ ಕಂಡ ಚಾರರು ಹೇಳುತ್ತಾರೆ: ಆ ಧನುರ್ಘೋಷವನ್ನು ದ್ರೋಣರು ಕೇಳಿ "ಇದು ಅದೇ" ಎಂದು ಹಿಂತಿರುಗಿದರಂತೆ; ಭೀಷ್ಮರು ತಮ್ಮ ಧ್ವಜದಲ್ಲಿ ನಟ್ಟ ಬಾಣವನ್ನು ನಿಟ್ಟಿಸಿ "ಇನ್ನಾಯಿತು" ಎಂದು ಕೈಯಲ್ಲಿದ್ದ ಬಿಲ್ಲನ್ನು ಕೆಳಗೆಸೆದರಂತೆ. ಕರ್ಣನೂ ಬಾಣಗಳಿಂದ ಭಂಗಪಟ್ಟ. ಮಿಕ್ಕ ಭೂಪತಿಗಳೋ ಇದೆಲ್ಲ ಏನಿರಬಹುದೆಂದು ಬಿಲ್ಲುಂಬೆರಗಾದರು. ಆದರೆ ಆ ಭಯಂಕರ ರಣರಂಗದಲ್ಲಿ ಅರಿಯದ ಹುಡುಗ ಅಭಿಮನ್ಯುವೊಬ್ಬನು ಭಯವನ್ನರಿಯದೆ ಹೋರಾಡುತ್ತಿರುವನಂತೆ.

ಸ್ವಾಮಿ—ಏನೇನು? ಅಭಿಮನ್ಯುವೂ ಬಂದಿರುವನೋ? ಅಯ್ಯ ರಾಜ, ಎರಡು ಹಿರಿಯ ವಂಶಗಳ ವಿದ್ಯುದಾಲಿಂಗನದಿಂದ ಹುಟ್ಟಿದ ಉರಿವ ಬೆಂಕಿಯವನು. ಅವನ ಮುಂದೆ ಬೃಹನ್ನಳೆಯಾಟ ನಡೆಯುವುದಿಲ್ಲ! ಇನ್ನೊಬ್ಬ ಸಾರಥಿಯನ್ನು ಕಳಿಸು.

ರಾಜ—ಎಂದೆಂದಿಗೂ ಹಾಗೆ ತಿಳಿಯಬೇಡಿ ಸ್ವಾಮಿ. ಪರಶುರಾಮನ ಗಂಡುಗೊಡಲಿ ಯಾವನ ಕವಚವನ್ನು ಭೇದಿಸಲಾರದಾಯಿತೋ ಆ ಭೀಷ್ಮನನ್ನು ಮತ್ತು ಮಂತ್ರವೇ ಆಯುಧವಾದ ದ್ರೋಣನನ್ನು; ಕರ್ಣ ಜಯದ್ರಥಾದಿ ಉಳಿದೆಲ್ಲ ರಾಜರನ್ನೂ ಹಿಮ್ಮೆಟ್ಟಿಸಿದ ನಮ್ಮ ಕುಮಾರನು ಅಭಿಮನ್ಯುವಿನ ಸೊಕ್ಕಡಗಿಸಲಾರನೇ? ಅವರಪ್ಪ ದೊಡ್ಡವನೆಂದ ಮಾತ್ರಕ್ಕೆ ನನ್ನ ಮಗ

ಹೆದರಿಬಿಡುವನೆ? ಹಾಗೂ ಒಂದು ಪಕ್ಷ ಆಪತ್ತೊದಗಿದರೆ ಸ್ನೇಹಕ್ಕೆ ತಕ್ಕ ಸಮಾನ ವಯಸ್ಸು ನನ್ನ ಮಗನನ್ನು ರಕ್ಷಿಸುತ್ತದೆ.

ಭಟ—ಮಹಾಪ್ರಭು, ಆ ರಥದ ವರ್ತನೆಯೋ ವಿಚಿತ್ರ. ಬಿಗಿಹಿಡಿದರೆ ಬುಗುರಿಯಂತೆ ತಿರುಗುವುದು, ಬಿಟ್ಟರೆ ನಿಟ್ಟೋಟ ಓಡುವುದು! ಶತ್ರು ಸಿಕ್ಕಿದರೂ ಸುಗ್ಗಿ ಸುರಿಮಾಡದು, ನೋಯಿಸದು. ಸುತ್ತುಮುತ್ತಣ ಭೂಮಿ ತತ್ತರಿಸುವಂತೆ ಹರಿದಾಡಿ, ಆ ರಥವು ಕುಮಾರನಿಗೆ ಅಣಕಯುದ್ಧದ ಶಿಕ್ಷಣ ವನ್ನು ಕೊಡುತ್ತಿರುವಂತಿದೆ.

ರಾಜ—ಹೋಗು, ಮತ್ತಷ್ಟು ವೃತ್ತಾಂತವನ್ನು ತಿಳಿದು ಬಾ.

ಭಟ—ಅಪ್ಪಣೆ. (ನಿಷ್ಕ್ರಮಿಸಿ ಪ್ರವೇಶಿಸಿ) ಜಯವಾಗಲಿ ಮಹಾರಾಜ ನಿಗೆ; ವಿಜಯವಾಗಲಿ ವಿರಾಟೇಶ್ವರನಿಗೆ. ಪ್ರಭೂ, ತಮಗೊಂದು ಸಂತೋಷದ ಸಮಾಚಾರವನ್ನು ಅರಿಕೆಮಾಡಿಕೊಳ್ಳುತ್ತೇನೆ; ಕೌರವರು ಗೋಗ್ರಹಣ ಮಾಡಲಾರದೆ ಬೆಂಗೊಟ್ಟೋಡಿದರು.

ಸ್ವಾಮಿ—ಅಯ್ಯಾ, ಸುದೈವದಿಂದ ನಿನಗಭ್ಯುದಯವಾಯ್ತು!

ರಾಜ—ಹಾಗಲ್ಲ ಸ್ವಾಮಿ. ಇದೆಲ್ಲ ತಮ್ಮ ಅಭ್ಯುದಯವೆಂದೇ ಭಾವಿಸು ತ್ತೇನೆ. ಆಹ! ಈಗ ನನ್ನ ಮುದ್ದು ಕುಮಾರನೆಲ್ಲಿರುವನೋ?!

ಭಟ—ಕುಮಾರನು ತಾನು ಕಣ್ಣಾರೆ ಕಂಡ ಯೋಧರ ಸಾಹಸ ಕಾರ್ಯಗಳನ್ನು ಪುಸ್ತಕದಲ್ಲಿ ಬರೆದುಕೊಳ್ಳುತ್ತಿದ್ದಾನೆ.

ರಾಜ—ಆಹ! ನನ್ನ ಮಗನೆಷ್ಟು ಶ್ಲಾಘನೀಯವಾದ ಕೆಲಸ ಮಾಡು ತ್ತಿದಾನೆ! ಆ ಬೃಹನ್ನಳೆಯೆಲ್ಲಿ?

ಭಟ—ಪ್ರಿಯವೃತ್ತಾಂತವನ್ನರುಹಲು ಅಂತಃಪುರಕ್ಕೆ ಹೋದಳು.

ರಾಜ—ಆಕೆಯನ್ನಿಲ್ಲಿಗೆ ಬೇಗ ಬರಹೇಳು.

ಭಟ—(ನಿಷ್ಕ್ರಮಿಸುವನು.)

ಬೃಹನ್ನಳೆ—(ಪ್ರವೇಶಿಸಿ) ಪ್ರಭುಗಳಿಗೆ ಜಯವಾಗಲಿ.

ಭಟ—(ಪ್ರವೇಶಿಸಿ) ಮಹಾಪ್ರಭು........(ಎಂದು ಅವಾಕ್ಕಾಗಿ ನಿಲ್ಲು ವನು.)

ರಾಜ—(ಭಟನನ್ನು ಕುರಿತು) ಹಿಂದೆಂದೂ ತೋರದ ಈ ನಿನ್ನ ಹರ್ಷಕ್ಕೆ ಕಾರಣವೇನು? ಏಕಿಷ್ಟು ವಿಸ್ಮಯ?

ಭಟ—ಪ್ರಭು, ನಂಬಲಿಕ್ಕೆ ಆಗದಂಥ ಅದ್ಭುತಪ್ರಿಯವಾರ್ತೆ! ಅಭಿಮನ್ಯು ಸೆರೆಸಿಕ್ಕಿದನಂತೆ.

ಸ್ವಾಮಿ—ಬೃಹನ್ನಳೆ, ಸಮಾಚಾರವೇನು ?

ಬೃಹನ್ನಳೆ—ಅವನನ್ನು ಸೆರೆ ಹಿಡಿದವರಾರೋ ನನಗೆ ತಿಳಿಯದು. ಅಭಿಮನ್ಯು ಬಲಶಾಲಿ, ಯುದ್ಧಕಲೆಯಲ್ಲಿ ಸುಶಿಕ್ಷಿತ. ತಂದೆಗಳ ದುರದೃಷ್ಟದ ಫಲವಾಗಿ ಈ ದುರ್ಗತಿ ಅವನಿಗೆ ಒದಗಿರಬೇಕು.

ರಾಜ—(ಭಟನ ಕಡೆ ತಿರುಗಿ) ಅವನನ್ನು ಸೆರೆಹಿಡಿದುದು ಹೇಗೆ ?

ಭಟ—ನಿರ್ಭೀತಿ ನಿಶ್ಶಂಕೆಯಿಂದ ರಥದ ಬಳಿ ಹೋಗಿ ತೋಳುಗಳಿಂದಲೇ ರಥದಿಂದ ಬರಸೆಳೆದು ಸೆರೆಹಿಡಿದು ತಂದಿದಾನೆ.

ರಾಜ—ಯಾರು ?

ಭಟ—ಮಹಾಪ್ರಭು, ತಾವು ಯಾವನನ್ನು ಅಡಿಗೆಯ ಕೆಲಸಕ್ಕೆ ನೇಮಿಸಿಕೊಂಡಿರುವಿರೋ ಅವನು !

ಬೃಹನ್ನಳೆ—(ಸ್ವಗತ) ಓಹೋ ! ಅವನು ಅಣ್ಣ ಭೀಮ. ಹಾಗಾದರೆ ಅವನು ಅಭಿಮನ್ಯುವನ್ನು ಸೆರೆಹಿಡಿದು ತರಲಿಲ್ಲ. ಆ ನೆಪದಲ್ಲಿ ತಬ್ಬಿಕೊಂಡು ಕರೆತಂದಿದಾನೆ.

ರಾಜ—ಹೋಗಿ, ಅಭಿಮನ್ಯುವನ್ನು ಸತ್ಕರಿಸಿ ಗೌರವದಿಂದ ಕರೆತನ್ನಿ.

ಸ್ವಾಮಿ—ನೀನವನನ್ನು ಸತ್ಕರಿಸಿ ಗೌರವದಿಂದ ಕಂಡರೆ, ಯಾದವ ಮತ್ತು ಪಾಂಡವರ ಮನೆತನಕ್ಕೆ ಸೇರಿದವನಾದ್ದರಿಂದ ಅವನಿಗೆ ನೀನು ಹೆದರಿಬಿಟ್ಟೆಯೆಂದು ಜನರಾಡಿಕೊಳ್ಳುತ್ತಾರೆ. ಆದ್ದರಿಂದ ಅವನನ್ನು ನೀನು ಅತಾತ್ಸಾರದಿಂದ ಕಾಣುವುದು ಒಳ್ಳೆಯದು.

ರಾಜ—ಆ ಯಾದವರ ಚಿಣ್ಣನನ್ನು ತಾತ್ಸಾರದಿಂದ ಕಾಣುವುದೇ ? ಸಾಧ್ಯವಿಲ್ಲ. ಅವನು ನಮ್ಮ ಧರ್ಮರಾಯನ ಮಗ. ಅವನಿಗೂ ನನ್ನ ಮಗನ ವಯಸ್ಸೆ ! ಹಲವು ತಲೆಮಾರಿನಿಂದ ದ್ರುಪದನಿಗೂ ನಮಗೂ ನಂಟಿರುವುದರಿಂದ ಅಭಿಮನ್ಯು ನನಗೆ ಮೊಮ್ಮಗನಿಗೆ ಸಮ ; ಇಷ್ಟರಲ್ಲೇ ಅಳಿಯನಾದರೂ ಆಗಬಹುದು ! ನಾನು ಹೆಣ್ಣು ಹೆತ್ತವನಲ್ಲವೆ ? ! ಈ ಎಲ್ಲ ದೃಷ್ಟಿವೈಭವದಿಂದ ಅವನು ನಮ್ಮ ಮಾನ್ಯ ಅತಿಥಿ. ಎಲ್ಲಕ್ಕಿಂತ ಮಿಗಿಲಾಗಿ ಪಾಂಡವರು ನಮಗೆ ಕೇವಲ ಆಪ್ತರಲ್ಲವೆ ? !

ಸ್ವಾಮಿ—ನಿನ್ನ ಮಾತೆಲ್ಲ ನಿಜವೇ ; ಆದರೆ, ಜನಾಪವಾದಕ್ಕೆ ಆಸ್ಪದ ಕೊಡಬಾರದೆಂದು ಹಾಗೆ ಹೇಳಿದೆ.

ರಾಜ—ಇಲ್ಲಿಗವನನ್ನು ಈಗ ಕರೆತರುವವರಾರು ?

ಸ್ವಾಮಿ—ಬೃಹನ್ನಳೆಯೇ ಕರೆತರಲಿ.

ರಾಜ—ಬೃಹನ್ನಳೇ, ಅಭಿಮನ್ಯುವನ್ನು ಕರೆದುಕೊಂಡು ಬಾ.

ಬೃಹನ್ನಳೆ—ಮಹರಾಜನಪ್ಪಣೆ. (ಆತ್ಮಗತ) ಅರ್ಜುನನೀಗಲಾದರೂ ಮಗನನ್ನು ಕಣ್ತುಂಬ ನೋಡಲಿ ; ನೋಡಿ ಬಿಗಿದಪ್ಪಲಿ ; ಅಪ್ಪಿ ಆನಂದ ಬಾಷ್ಪಗಳನ್ನು ಸುರಿಸಲಿ ; ನನ್ನೆದುರಿಗವನು ತನ್ನ ಮಗನನ್ನು ಮುದ್ದಿಸಲು ನಾಚುತ್ತಾನೆ.

ರಾಜ—ಸ್ವಾಮಿ, ನನ್ನ ಮಗನ ಶೌರ್ಯವನ್ನು ನೋಡಿದಿರಾ ? ಭೀಷ್ಮಾದಿಗಳು ಭಂಗಪಟ್ಟು ಬೆಂಗೊಟ್ಟೋಡಿದರು ; ಅಭಿಮನ್ಯು ಸೆರೆಸಿಕ್ಕಿದ ; ಹೆಚ್ಚು ಮಾತೇಕೆ ? ಉತ್ತರಕುಮಾರನು ಇಡೀ ಪೃಥ್ವಿಯನ್ನೇ ಗೆದ್ದಂತಾಗಿದೆ.

* * * *

(ಭೀಮಸೇನನು ದೂರದಲ್ಲಿ ಪ್ರವೇಶಿಸುವನು.)

ಭೀಮಸೇನ—ಅಂದು ಅರಗಿನ ಮನೆ ಹತ್ತಿಕೊಂಡಾಗ ಅಣ್ಣ ತಮ್ಮಂದಿರೈವರನ್ನೂ, ತಾಯನ್ನೂ ಈ ತೋಳುಗಳ ಮೇಲೇ ಎತ್ತಿಕೊಂಡು ಹೋದೆ. ಆದರೆ ಇನ್ನೂ ಹುಡುಗನಾಗಿರುವ ಅಭಿಮನ್ಯುವೊಬ್ಬನನ್ನು ಇಂದು ರಥದಿಂದಿಳಿಸಿ ತರುವ ಹೊತ್ತಿಗೆ ಅಂದಿನ ಶ್ರಮಕ್ಕೆ ಇಂದಿನದು ಸಮ ಎನಿಸಿ ಬಿಟ್ಟಿತು ನನಗೆ.

(ತೆರೆಯ ಮರೆಯಲ್ಲಿ)

ಇತ್ತ ಇತ್ತ ಬಾ, ಕುಮಾರ.

(ಬೃಹನ್ನಳೆಯು ಅಭಿಮನ್ಯುವಿನೊಡನೆ ಪ್ರವೇಶಿಸಿ ವಿರಾಟನಿಗೆ ಮರೆಯಾಗಿ ದೂರದಲ್ಲಿ ಭೀಮನೊಡನೆ ಸಂಧಿಸುತ್ತಾಳೆ.)

ಅಭಿಮನ್ಯು—(ಭೀಮನನ್ನು ನೋಡಿ) ಬಲಿಷ್ಟನಾದಿವನು ನನ್ನನ್ನು ತನ್ನ ದೊಂದೇ ತೋಳಿನಿಂದ ಸುತ್ತಿ ಎತ್ತಿ ತಂದರೂ ಎಳ್ಳಷ್ಟಾದರೂ ನೋಯಿಸಲಿಲ್ಲ. ಯಾರಿರಬಹುದಿವನು ? ! ವಿಶಾಲವಾದೆದೆ, ಮಾಂಸ ತುಂಬಿದ ಭುಜ, ತೋರವಾದ ತೊಡೆ, ಕಡುಬಡವಾದ ನಡು, ಎಷ್ಟು ಬಲ ! ಎಷ್ಟು ಚೆಲುವು ! !

ಬೃಹನ್ನಳೆ—ಇತ್ತ ಇತ್ತ ಬಾ, ಕುಮಾರ. (ಭೀಮನನ್ನು ಕುರಿತು ಪಿಸುಮಾತಿನಲ್ಲಿ ಪ್ರತ್ಯೇಕವಾಗಿ) ಇವನನ್ನಿಲ್ಲಿಗೆ ತಂದು ನೀನು ಎಂತಹ ಕೆಲಸ ಮಾಡಿದೆ?! ಹೋರಿದ ಮೊದಲ ಯುದ್ಧದಲ್ಲೇ ಸೋತನೆಂಬ ಅಪಕೀರ್ತಿಯವನಿಗೆ ತಟ್ಟಿತು. ಮುದ್ದುಮಗನನ್ನಗಲಿ ಸುಭದ್ರೆಯೆನ್ನೆಷ್ಟು ಮಮ್ಮಲ ಮರುಗುವಳೋ! ಅಪಜಯ ಹೊಂದಿದನೆಂದು ಕೃಷ್ಣನು ಕೋಪಿಸಿಕೊಳ್ಳುವನು. ಮಾತಾಡಿ ಪ್ರಯೋಜನವೇನು, ನೀನು ನಿನ್ನ ಬಾಹುಬಲವನ್ನು ಬಹಳ ಅಪವ್ಯಯ ಮಾಡಿದೆ.

ಭೀಮಸೇನ—(ಸಾಂತ್ವನ ಧ್ವನಿಯಿಂದ) ಅರ್ಜುನ—

ಬೃಹನ್ನಳೆ—(ನೊಂದು) ಇನ್ನೇನಿನ್ನೇನು?! ಇವನು ಅರ್ಜುನನ ಮಗನಾದುದು ಸಾರ್ಥಕವಾಯಿತು.

ಭೀಮಸೇನ—(ಅಪವಾರಿಸಿ) ಅವನನ್ನು ಸೆರೆಹಿಡಿದುದರಿಂದಾದ ಅನ್ಯಾಯಗಳನ್ನು ಬಲ್ಲೆ. ಆದರೆ....ಶತ್ರುಗಳ ಕೈಯಲ್ಲಿ ಪುತ್ರನಿದ್ದರೆ ಯಾವನು ತಾನೇ ನೋಡಿ ಸಹಿಸಿಯಾನು? ದುಃಖದಿಂದ ನವೆಯುತ್ತಿರುವ ದ್ರೌಪದಿಯು ಇವನನ್ನು ನೋಡಿಯಾದರೂ ಸಮಾಧಾನ ತಂದುಕೊಳ್ಳಲೆಂದೆತ್ತಿ ತಂದೆ.

ಬೃಹನ್ನಳೆ—(ಅಪವಾರಿಸಿ) ಅಣ್ಣ, ಇವನೊಡನೆ ಮಾತನಾಡ ಬೇಕೆಂದು ನನಗೆ ಬಹಳ ಆಶೆಯಾಗಿದೆ. ಮೊದಲಿವನನ್ನು ನೀನು ಸ್ವಲ್ಪ ಮಾತನಾಡಿಸು.

ಭೀಮಸೇನ—ಆಗಲಿ. (ಅಭಿಮನ್ಯುವಿನ ಕಡೆ ನಡೆದು) ಅಭಿಮನ್ಯೂ.

ಅಭಿಮನ್ಯು—ಏನೇನು! ಅಭಿಮನ್ಯುವೆಂದಾ?!

ಭೀಮಸೇನ—(ಬೃಹನ್ನಳೆಯನ್ನು ಕುರಿತು) ನನ್ನ ಮೇಲಿವನು ಸಿಟ್ಟನ್ನು ತ್ತಾನೆ; ನೀನೇ ಮಾತನಾಡಿಸಪ್ಪ.

ಬೃಹನ್ನಳೆ—ಅಭಿಮನ್ಯು—

ಅಭಿಮನ್ಯು—ಏನು? ನಾನು ನಿನಗೆ ಅಭಿಮನ್ಯುವೋ? ಕ್ಷತ್ರಿಯೋತ್ತಮನನ್ನು ಹೀನರು ಹೆಸರು ಹಿಡಿದು ಕೂಗುತ್ತಿದ್ದಾರೆ! ಇದೇ ಏನು ನಿಮ್ಮೂರಿನ ನಡತೆ? ಅಥವಾ ಸೆರೆ ಸಿಕ್ಕಿದವನೆಂದು ಅವಮಾನ ಮಾಡುತ್ತಿರುವಿರೋ?

ಬೃಹನ್ನಳೆ—(ತಬ್ಬಿಕೊಳ್ಳುವಂತೆ ಬಳಿಸಾರಿ) ಅಭಿಮನ್ಯು, ನಿಮ್ಮ ತಾಯಿ

ಸುಖವಾಗಿದ್ದಾಳೇನಯ್ಯ ?

ಅಭಿಮನ್ಯು—(ತಬ್ಬಿಗೆ ಸಿಕ್ಕದೆ ಹಿಂದಕ್ಕೆ ಸರಿದು) ಏನೇನು ?! ತಾಯ ಸುದ್ದಿಯೇ ? ನೀನೇನು ಧರ್ಮರಾಜನೋ, ಭೀಮಸೇನನೋ ಅಥವಾ ಧನಂಜಯನೋ ? ಯಾರು ನೀನು ? ತಂದೆಯಂತೆ ಮೇಲೆ ಬಿದ್ದು ತಾಯ ಸುದ್ದಿ ಕೇಳುತ್ತಾನೆ !

ಬೃಹನ್ನಳೆ—ಅಭಿಮನ್ಯು, ಆ ದೇವಕಿಯ ಮಗ ಕೇಶವನು ಕುಶಲವೇ ?

ಅಭಿಮನ್ಯು—ಏನಿದು ? ಪೂಜ್ಯ ಶ್ರೀಕೃಷ್ಣನನ್ನೂ ಹೆಸರು ಹಿಡಿದೇ ವಿಚಾರಿಸುತ್ತಿದ್ದಾನೆ ?! ಹೌದು ಹೌದು, ನೀನಿಷ್ಟು ಸಲಿಗೆಯಿಂದ ಕೇಳಿದ ಮೇಲೆ ಬಹಳ ಕುಶಲಿಯಾಗಿದ್ದಾನೆ.

(ಭೀಮ ಬೃಹನ್ನಳೆ—ಇಬ್ಬರೂ ಪರಸ್ಪರ ನೋಡಿ ನಗುವರು.)

ಅಭಿಮನ್ಯು—ಏನ್ರೋ ? ನೀವಿಬ್ಬರೂ ನನ್ನನ್ನು ಗೇಲಿ ಮಾಡಿ ನಗುವಂತಿದೆ.

ಬೃಹನ್ನಳೆ—ಛೀ ! ಛೀ ! ಎಲ್ಲಾದರೂ ಉಂಟೆ ? ಅರ್ಜುನನನ್ನು ತಂದೆಯೆಂದುಕೊಂಡು, ಕೃಷ್ಣನನ್ನು ಮಾವನೆಂದುಕೊಂಡು, ಶಸ್ತ್ರವಿದ್ಯಾ ಪಾರಂಗತನೆನಿಸಿಕೊಂಡ ನೀನು ಈ ಹರೆಯದಲ್ಲಿ ಹೀಗೆ ಸೋತುದು ನಿನಗೆ ತರವೆ ? ಪಾಪ !

ಅಭಿಮನ್ಯು—ಸಾಕು ನಿಲ್ಲಿಸು ! ಆತ್ಮಪ್ರಶಂಸೆ ಮಾಡಿಕೊಳ್ಳುವುದು ನಮ್ಮ ಕುಲಕ್ಕೆ ಬಂದಿಲ್ಲ. ಸೋತು ಸತ್ತವರ ಮೈಗೆ ನಾಟಿರುವ ಬಾಣಗಳನ್ನು ನೋಡು ಹೋಗು ! ಅವುಗಳ ಮೇಲೆ ಬೇರೆಯವರ ಹೆಸರೊಂದಾದರೂ ಕಾಣದು.

ಬೃಹನ್ನಳೆ—(ಆತ್ಮಗತ) ಹೌದು ! ಮಗನು ಹೇಳುತ್ತಿರುವುದು ನಿಜ. ರಥಿಕರಲ್ಲಿ, ರಾವುತರಲ್ಲಿ, ಮದಿಸಿದಾನೆಯ ದಳದಲ್ಲಿ, ಕಾಲಾಳ ಪಡೆಯಲ್ಲಿ, ಈ ಶರನಿಪುಣನಿಂದ ಏಟು ತಿನ್ನದವರಿಲ್ಲ. ನಾನು ರಥವನ್ನು ಸರಕ್ಕನೆ ತಿರುಗಿಸಿಕೊಳ್ಳದಿದ್ದರೆ ನನಗೂ ಅದೇ ಗತಿಯಾಗಿ ಮೈಯೆಲ್ಲಾ ಹುಣ್ಣಾಗುತ್ತಿತ್ತು. (ಪ್ರಕಾಶ) ಇದೆಲ್ಲ ಮಾತಿನ ಮಲ್ಲತನ ! ಹಾಗಿಲ್ಲದ್ದರೆ ಒಬ್ಬ ಕಾಲಾಳಿಗೇಕೆ ಸಿಕ್ಕಿಬಿದ್ದೆ ?

ಅಭಿಮನ್ಯು—ಅವನು ಕೈಯಲ್ಲೇನೂ ಆಯುಧವಿಲ್ಲದೆ ಹತ್ತಿರ ಬಂದುದರಿಂದ ನಾನು ಸುಮ್ಮನಿದ್ದು ಸಿಕ್ಕಿಬಿದ್ದೆ. ಅರ್ಜುನನು ನಮ್ಮಪ್ಪ ನೆಂಬುದು ನೆನಪಿದ್ದೂ, ಬರಿಗೈಯಲ್ಲಿ ಬಂದವನನ್ನು ಹೇಗೆ ಕೊಲ್ಲಲಿ ?

* * * *

ರಾಜ—ಅಭಿಮನ್ಯುವನ್ನು ಬೇಗ ಕರೆತನ್ನಿ.

ಬೃಹನ್ನಳೆ—ಕುಮಾರ, ಇತ್ತ ಬಾ. ಇದೋ ಮಹಾರಾಜರು.

ಅಭಿಮನ್ಯು—ಆ ! ಯಾರಿಗವನು ಮಹಾರಾಜ ?

ಬೃಹನ್ನಳೆ—ಛೇ ! ಹಾಗೆಲ್ಲ ಮಾತನಾಡಬಾರದು. ಪಕ್ಕದಲ್ಲೇ ಬ್ರಾಹ್ಮಣೋತ್ತಮ ಭಗವಾನ್ ಸ್ವಾಮಿಗಳಿದ್ದಾರೆ !

ಅಭಿಮನ್ಯು—ಸ್ವಾಮಿಗಳಿದ್ದಾರಲ್ಲವೆ ?! (ಸನ್ಯಾಸೀವೇಷದ ಧರ್ಮ ರಾಯನನ್ನು ಕಂಡು ಕೈಮುಗಿದು) ಪೂಜ್ಯರೇ ನಮಸ್ಕಾರ.

ಸ್ವಾಮಿ—ಬಾ ಮಗು, ಬಾ. (ಆಶೀರ್ವಾದಹಸ್ತವನ್ನೆತ್ತಿ) ಆತ್ಮಾಭಿ ಮಾನ, ಧೃತಿ, ವಿನಯ, ಸ್ವಜನರಲ್ಲಿ ದಯ, ಮಾಧುರ್ಯ, ಬಿಲ್ವಿದ್ಯೆಯಲ್ಲಿ ಸಿದ್ಧಿ, ಪರಾಕ್ರಮ—ಈ ಗುಣಗಳೆಲ್ಲ ನಿನ್ನ ತಂದೆಗಳಲ್ಲಿ ಒಬ್ಬನಾದ ಅರ್ಜುನ ನಿಂದ ನಿನಗೆ ಲಭಿಸಲಿ ; ಮಿಕ್ಕ ನಾಲ್ವರಿಂದ ನಿನಗಿಷ್ಟವಾದ ಗುಣಗಳನ್ನು ಪಡೆ.

ರಾಜ—ಬಾ, ಬಾ ಪುತ್ರ (ಅಭಿಮನ್ಯು ನಮಸ್ಕರಿಸದೆ ಸೆಟೆದು ನಿಲ್ಲಲು) ನನಗೇಕೆ ನಮಸ್ಕರಿಸಲೊಲ್ಲೆ ? (ಸ್ವಗತ) ಈ ಕ್ಷತ್ರಿಯಕುಮಾರನು ಸೊಕ್ಕಿರು ವನು. ಆಗಲಿ, ನಾನಿವನ ಸೊಕ್ಕನ್ನಿಳಿಸುತ್ತೇನೆ ! (ಪ್ರಕಾಶ) ಇವನನ್ನು ಹಿಡಿದು ತಂದವರಾರು ?

ಭೀಮಸೇನ—ಮಹಾರಾಜ, ಅವನನ್ನು ಹಿಡಿದು ತಂದವನು ನಾನು.

ಅಭಿಮನ್ಯು—'ನಿರಾಯುಧನಾಗಿ' ಎಂದು ಸೇರಿಸಿ ಹೇಳು.

ಭೀಮಸೇನ—ಶಾಂತಂ ಪಾಪಂ ! ನಾನೆಲ್ಲಿಯಾದರೂ ಅಂತಹ ಸುಳ್ಳು ಮಾತಾಡಿಯೇನೆ ?! (ತನ್ನ ತೋಳ್ಗಳನ್ನೆತ್ತಿ ತೋರಿ) ಈ ತೋರವಾದ ತೋಳು ಗಳೇ ನನ್ನ ಸಹಜಾಯುಧಗಳು. ನಾನು ಯುದ್ಧ ಮಾಡುವುದು ಕೇವಲ ಇವುಗಳಿಂದಲೇ ! ಕೈಲಾಗದವರಲ್ಲವೇ ಕೈಯಲ್ಲಿ ಕೈದುಗಳನ್ನು ಹಿಡಿಯು ವುದು ?

ಅಭಿಮನ್ಯು—ಅಯ್ಯ, ಸಾಕು. ನನ್ನ ತಂದೆ ಮಧ್ಯಮನು ಈ ಮಾತು ಗಳನ್ನಾಡಿದರೆ ಚಂದ. ಅವನಿಗಾದರೋ ತನ್ನ ತೋಳೇ ಅಕ್ಷೌಹಿಣೀಸೇನೆ! ಅವನದು ಅಸಹಾಯಶೌರ್ಯ.

ಸ್ವಾಮಿ—ಪುತ್ರ, ಆ ಮಧ್ಯಮನೆಂಬವನು ಯಾರು ?

ಅಭಿಮನ್ಯು—ಕೇಳಿ ಸ್ವಾಮಿ, ನಾನು ತಮಗೆ ಇದಿರುವಾದಿಸ ಬಾರದು; ತಾವು ಬ್ರಾಹ್ಮಣರು. ಹೀಗೆ ಬೇರೆಯವರಾರಾದರೂ ಕೇಳಿದ್ದರೆ....

ರಾಜ—ಸರಿ ಹಾಗಾದರೆ ! ಈಗ ನಾನು ಕೇಳುತ್ತೇನೆ ಹೇಳು : ಆ ಮಧ್ಯಮನೆಂಬವನು ಯಾವನು ?

ಅಭಿಮನ್ಯು—ಕೊರಳಿಗೆ ತೋಳನ್ನು ಸುತ್ತಿ ಯಾವನು ಜರಾಸಂಧ ನನ್ನು ಅನಾಮತ್ತಾಗಿ ಎತ್ತಿ ಕುಕ್ಕಿ "ಇದು ಕೃಷ್ಣನ ಕೈಲಾಗಲಿಲ್ಲ" ವೆನಿಸಿ ದನೋ ಅವನು ಮಧ್ಯಮ !

ರಾಜ—ನೀನು ಸೆಣಸುವೆಯೆಂದು ನನಗೆ ರೋಷವಿಲ್ಲ. ನಿನ್ನ ರೋಷದಿಂದ ನನಗೆ ಸಂತೋಷವೇ. ನಾನೀಗ ಹೇಗೆ ಮಾತನಾಡಿ ನಿನಗೆ ಸತ್ಕಾರ ಮಾಡಲಿ ? ಹೇಳು. ನಿನ್ನಂಥ ಮುದ್ದು ವೀರನು ನನ್ನ ಎದುರಿ ಗಿರುವಾಗ ಹೇಗೆ ಹೋಗೆಂದು ಬಿಡಲಿ.

ಅಭಿಮನ್ಯು—ನನ್ನ ಕಾಲುಗಳಿಗೆ ಸಂಕೋಲೆಯನ್ನು ಹಾಕಿಸು. ಸೆರೆ ಸಿಕ್ಕಿದವನಿಗೆ ಮಾಡಬೇಕಾದ ಸತ್ಕಾರವಿನ್ನೇನಿದೆ ? ತೋಳ ಬಲಕ್ಕೆ ಸಿಕ್ಕಿ ಬಿದ್ದು ಇಲ್ಲಿಗೆ ಬಂದ ನನ್ನನ್ನು ತನ್ನ ತೋಳ ಬಲದಿಂದಲೇ ಭೀಮನು ಇಲ್ಲಿಂದ ಬಿಡಿಸಿಕೊಂಡು ಹೋಗುವನು.

(ಉತ್ತರನು ಪ್ರವೇಶಿಸುತ್ತಾನೆ.)

ಉತ್ತರ—(ಸ್ವಗತ) ಸುಳ್ಳಿನ ಭಕ್ತರ ಸುಳ್ಳು ಹೊಗಳಿಕೆಗೆ ಪಾತ್ರನಾಗು ವುದಕ್ಕಿಂತ ನೀಚವಾದುದಿನ್ನೊಂದಿಲ್ಲ. ಜನ ನನ್ನನ್ನೇಕೆ ಹೊಗಳುತ್ತಿದೆ ? ಯುದ್ಧದಿಂದ ಹೇಗೋ ಪಾರಾದ ನಾನು ಈ ಪ್ರಶಂಸೆಯಿಂದ ಒಳ ಗೊಳಗೇ ನಾಚುತ್ತಿದ್ದೇನೆ. (ಬಳಿ ಬಂದು, ಸ್ವಾಮಿಗಳನ್ನು ಕುರಿತು) ಸ್ವಾಮಿ, ನಮಸ್ಕಾರ.

ಸ್ವಾಮಿ—ಸ್ವಸ್ತಿ.

ಉತ್ತರ—ಅಪ್ಪಾಜಿ, ನಮಸ್ಕಾರ.

ರಾಜ—ಬಾರಪ್ಪ ಬಾ. ಆಯುಷ್ಮಂತನಾಗು ಮಗು. ಶೌರ್ಯ ತೋರಿದ ಯೋಧರಿಗೆಲ್ಲ ಸಂಭಾವನೆ ಕೊಟ್ಟಾಯಿತೇ ?

ಉತ್ತರ—ಆಯಿತು. ಆದರೆ ಶೂರಶ್ರೇಷ್ಠನೊಬ್ಬನಿಗೆ ಮಾತ್ರ ಇನ್ನೂ ಸಂಭಾವನೆ ಕೊಡುವುದುಳಿದಿದೆ.

ರಾಜ—ಪುತ್ರ, ಯಾರಿಗೆ ?

ಉತ್ತರ—(ಬೃಹನ್ನಳೆಯ ಕಡೆ ತೋರಿ) ಇದೋ, ಈ ಧನಂಜಯನಿಗೆ.

ರಾಜ—ಏನೀತನು ಧನಂಜಯನೇ ?

ಉತ್ತರ—ಹೌದು ! ಸ್ಮಶಾನದಿಂದ ಧನುಸ್ಸನ್ನೂ, ಅಕ್ಷಯತೂಣೀರವನ್ನೂ ತಂದು ಭೀಷ್ಮ ಮುಂತಾದವರನ್ನು ಬಡಿದೋಡಿಸಿ ನಮ್ಮನ್ನು ರಕ್ಷಿಸಿದವನಿವನೇ !

ಬೃಹನ್ನಳೆ—ಅಲ್ಲ ! ಮಹಾರಾಜರೇ, ಅಲ್ಲ ! ಭೀಷ್ಮಾದಿಗಳನ್ನು ಬಡಿದೋಡಿಸಿದವನು ತಾನೆಂದು ತನಗೇ ತಿಳಿಯದೀ ಕುಮಾರನಿಗೆ. ಇನ್ನೂ ಅರಿಯದ ಬಾಲಕ, ಬಹಳ ಸಂಭ್ರಮ ! ಅದ್ಭುತ ಕಾರ್ಯವನ್ನು ತಾನೇ ಮಾಡಿ ಇನ್ನೊಬ್ಬರೆನ್ನುತ್ತಿದ್ದಾನೆ.

ಉತ್ತರ—ಸುಳ್ಳು ! ಸಂಶಯಪಡಬೇಡಿ. ಸಾಕ್ಷಿ ತೋರಿಸುತ್ತೇನೆ. ಗಾಂಡೀವದ ಹೆದೆ ಉಜ್ಜಿ ಉಜ್ಜಿ ಈ ಮಹನೀಯನ ಮುಂಗೈ ಕರೆಗಟ್ಟಿದೆ. ತೊಟ್ಟ ಬಳೆಗಳನ್ನು ಸರಿಸಿ ನೋಡಿ. ಹನ್ನೆರಡು ವರ್ಷ ಕಳೆದಿದ್ದರೂ ಅದಿನ್ನೂ ಅಳಿದಿಲ್ಲ.

ಬೃಹನ್ನಳೆ—ಬಳೆಗಳನ್ನು ಸರಿಸಿ ಸರಿಸಿ ಆದ ಕರೆಯಿದು.

ರಾಜ—ಎಲ್ಲಿ ನೋಡೋಣ. (ಎಂದು ಕೈ ಹಿಡಿಯಲು ಕೈ ನೀಡುವನು.)

ಬೃಹನ್ನಳೆ—ರುದ್ರಬಾಣಗಳು ಚುಂಬಿಸಿದ ಮೈಯ ಭಾರತವೀರಾರ್ಜುನನು ನಾನಾದರೆ, ಇವನು ಮಹಾನುಭಾವ ಯುಧಿಷ್ಠಿರ, ಇವನು ಮಹನೀಯ ಭೀಮ.

ರಾಜ—ಅಯ್ಯ ಧರ್ಮಜ, ವೃಕೋದರ, ಧನಂಜಯ, ಏಕೆ ನನ್ನನ್ನು ನೀವು ನಂಬಲಿಲ್ಲ ? (ಅರ್ಜುನನನ್ನು ಕುರಿತು) ಆಗಲಿ ಆಗಲಿ, ಕಾಲ ಬರಲಿ; ಬೃಹನ್ನಳೇ, ನೀನು ಒಳಗೆ ಹೋಗು.

ಬೃಹನ್ನಳೆ—ಮಹಾರಾಜರ ಅಪ್ಪಣೆ. (ಎಂದು ಹೊರಡುವುದರಲ್ಲಿರಲು)

ಸ್ವಾಮಿ—ಅರ್ಜುನ, ಬೇಡ. ಹೋಗಬೇಕಾದುದಿಲ್ಲ. ನಮ್ಮ ಪ್ರತಿಜ್ಞೆಯ ಗಡು ತೀರಿತು.

ಅರ್ಜುನ—ಅಣ್ಣನ ಅಪ್ಪಣೆ.

ರಾಜ—ಶೂರರೂ, ಸತ್ಯಸಂಧರೂ, ಪ್ರತಿಜ್ಞಾಪರಿಪಾಲಕರೂ ಆದ ಪಾಂಡವರು ನನ್ನ ಮನೆಯಲ್ಲಿ ಕಾಲಿಟ್ಟದ್ದರಿಂದ ನನ್ನ ಕುಲವೇ ಪಾವನವಾಯಿತು.

ಅಭಿಮನ್ಯು—ಇವರೆಲ್ಲ ನನ್ನ ಪೂಜ್ಯ ತಂದೆಗಳು. ಆದ್ದರಿಂದಲೇ ನಾನು ಜರೆದಾಗ ಕೆರಳಲಿಲ್ಲ; ನಸುನಗುತ್ತಲೇ ನನ್ನನ್ನು ಕೀಟಲೆ ಮಾಡುತ್ತಿದ್ದರು. ತಂದೆಗಳ ದರ್ಶನಲಾಭವನ್ನು ದೊರಕಿಸಿಕೊಟ್ಟುದರಿಂದ ಈ ಗೋಗ್ರಹಣವು ಮಂಗಳದಲ್ಲಿ ಮುಗಿಯಿತು. (ಭೀಮಸೇನನನ್ನು ಕುರಿತು) ತಿಳಿಯದೆ ನಿಮಗೆ ನಾನು ನಮಸ್ಕರಿಸಲಿಲ್ಲ. ನಿಮ್ಮ ಮಗನ ಅಪರಾಧವನ್ನು ಮನ್ನಿಸಿ ಪ್ರಸನ್ನರಾಗಬೇಕು.

ಭೀಮಸೇನ—ಬಾರಪ್ಪ,ಮುದ್ದು ಕಂದ! ಪಿತೃಸದೃಶಪರಾಕ್ರಮಿಯಾಗು. ಪುತ್ರ, ನಿನ್ನ ತಂದೆಗೆ ನಮಸ್ಕರಿಸಪ್ಪ. (ಎಂದು ಅರ್ಜುನನನ್ನು ತೋರುವನು.)

ಅಭಿಮನ್ಯು—ಅಪ್ಪಾಜಿ, ನಮಸ್ಕಾರ.

ಅರ್ಜುನ—(ತಬ್ಬಿ) ಆಹ ! ಮಗನ ಮೈಯನ್ನು ತಬ್ಬುವ ಸುಖವೆಷ್ಟು ಹೃದಯಾಹ್ಲಾದಿ ! ಹನ್ನೆರಡು ವರ್ಷಗಳ ಹಿಂದೆ ಕಳೆದುಕೊಂಡ ಈ ಸುಖ ಇಂದು ಲಭ್ಯವಾಯಿತು. ಮಗು, ವಿರಾಟೇಶ್ವರನಿಗೆ ನಮಸ್ಕರಿಸು.

ಅಭಿಮನ್ಯು—(ತಲೆಬಾಗಿ) ನಮಸ್ಕಾರ.

ರಾಜ—ಬಾ ಕಂದ, ಬಾ. ಧರ್ಮರಾಯನ ಧೈರ್ಯ, ಭೀಮನ ಬಲ, ಅರ್ಜುನನ ನೈಪುಣ್ಯ, ನಕುಲ ಸಹದೇವರ ಕಾಂತಿ ಮತ್ತು ರೂಪ, ಜಗತ್ಪ್ರಿಯನಾದ ಕೃಷ್ಣನ ಕೀರ್ತಿ—ಇವನ್ನು ಪಡೆ. (ಆತ್ಮಗತ) ಅರ್ಜುನ ಮತ್ತು ಉತ್ತರೆಯರ ಹತ್ತಿರ ಸಂಬಂಧವು ನನ್ನನ್ನು ಬಾಧಿಸುತ್ತಿದೆ ! ಈಗೇನು ಮಾಡಲಿ ? ಇರಲಿ ಹೊಳೆಯಿತು—ಯಾರಲ್ಲಿ ?

ಭಟ—(ಪ್ರವೇಶಿಸಿ) ಮಹಾರಾಜರಿಗೆ ಜಯವಾಗಲಿ.

ರಾಜ—ನೀರನ್ನು ತಾ.

ಭಟ—ಅಪ್ಪಣೆ. (ನಿಷ್ಕ್ರಮಿಸಿ ಪ್ರವೇಶಿಸಿ) ಇದೋ ನೀರು.

ರಾಜ—(ನೀರಿನ ಕಲಶವನ್ನು ಕೈಗೆ ತೆಗೆದುಕೊಂಡು ಧಾರೆಯೆರೆಯುವ ನಂತೆ ಮುಂದೆ ಬಂದು) ಅರ್ಜುನ, ಗೋಗ್ರಹಣದಲ್ಲಿ ನೀನು ಗಳಿಸಿಕೊಟ್ಟ ವಿಜಯಕ್ಕೆ ಪ್ರತಿಯಾಗಿ ಉತ್ತರೆಯನ್ನು ಧಾರೆಯೆರೆದು ಕೊಡುತ್ತೇನೆ; ಪರಿಗ್ರಹಿಸು.

ಸ್ವಾಮಿ—ಈಗ ನಾವು ತಲೆತಗ್ಗಿಸಬೇಕಾಯಿತು.

ಅರ್ಜುನ—(ಸ್ವಗತ) ನನ್ನ ಶೀಲವನ್ನಿವನು ತೂಗಿ ನೋಡುತ್ತಿದ್ದಾನೋ ? (ಪ್ರಕಾಶ) ಅಯ್ಯ ದೊರೆಯೆ, ನಾನು ನಿನ್ನ ಅಂತಃಪುರದವರನ್ನೆಲ್ಲಾ ನನ್ನ ತಾಯಂದಿರೆಂದು ಪೂಜ್ಯ ಬುದ್ಧಿಯಿಂದ ಪ್ರೀತಿಸುತ್ತಿದ್ದೇನೆ. ನೀನು ಕೊಡುವ ಉತ್ತರೆಯನ್ನು ನನ್ನ ಮಗನಿಗಾಗಿ ಸ್ವೀಕರಿಸುತ್ತೇನೆ.

ಸ್ವಾಮಿ—ಈಗ ನಾವು ತಲೆಯೆತ್ತುವಂತಾಯ್ತು !

ರಾಜ—ಆಗಲಿ. ನಾವೀಗ ಉತ್ತರನನ್ನು ಭೀಷ್ಮನ ಬಳಿ ಕಳಿಸೋಣ. ಧರ್ಮರಾಜ, ಭೀಮ, ಧನಂಜಯ, ಬನ್ನಿ ಹೋಗೋಣ.

ದೃಶ್ಯ ೩

(ಸ್ಥಳ : ಕೌರವನ ಅರಮನೆ. ದುರ್ಯೋಧನ, ಕರ್ಣ, ಶಕುನಿ ಕುಳಿತಿರುವರು.)

ಸೂತ—(ಪ್ರವೇಶಿಸಿ) ಒಡೆಯ, ಸೆರೆಹಿಡಿದರು, ಅಭಿಮನ್ಯುವನ್ನು ಸೆರೆ ಹಿಡಿದುಬಿಟ್ಟರು. (ಎಂದು ಉಸಿರುಗರೆಯುವನು.)

ದುರ್ಯೋಧನ—(ಜಗ್ಗನೆದ್ದು) ಸೂತ, ಹೇಳು ! ಅಭಿಮನ್ಯುವನ್ನು ಸೆರೆಹಿಡಿದವರು ಯಾರು ? ನಾನೀಗಲೇ ಬಿಡಿಸಿಕೊಂಡು ಬರುತ್ತೇನೆ. ಅವನ ತಂದೆಗಳ ಮೇಲೆ ನನಗೆ ದಾಯಾದ ಮಾತ್ಸರ್ಯವಿರುವುದರಿಂದ, ಅವನು ಸೆರೆಸಿಕ್ಕಿದನೆಂದರೆ ಜನರು ದೂಷಿಸುವುದು ನನ್ನನ್ನು ತಾನೇ ? ಮೇಲಾಗಿ ಅವನು ಮೊದಲು ನನಗೆ ಮಗ, ಆಮೇಲೆ ಪಾಂಡವರಿಗೆ ; ದೊಡ್ಡವರ ಜಗಳದಲ್ಲಿ ಮಕ್ಕಳದೇನು ತಪ್ಪು ? ! (ಎಂದು ಕುಳಿತುಕೊಳ್ಳುವನು.)

ಕರ್ಣ—ನಿನಗೆ ಮತ್ತು ನಿನ್ನ ಪ್ರೀತಿಗೆ ತಕ್ಕ ಮಾತಿದು. ಆದರೆ ನೀನವನನ್ನು ರಕ್ಷಿಸಬೇಕಾದುದು ಸ್ವಜನನೆಂಬ ದೃಷ್ಟಿಯಿಂದಲ್ಲ. ಅವನು ನಿನಗೆ ಜಯವಾಗಲೆಂದು ರಣಮುಖದಲ್ಲಿ ತರುಣಸಹಜೋತ್ಸಾಹದಿಂದ ಹೋರಾಡಿ ವಿಪತ್ತಿ

ಗೊಳಗಾದ. ಆದರೂ ಆ ಅಭಿಮನ್ಯುವನ್ನು ನಾವು ಪರಿರಕ್ಷಿಸಲಿಲ್ಲವೆಂದಮೇಲೆ ಬಿಲ್ಲನ್ನೆಸೆದು ವಲ್ಕಲವನ್ನುಡುವುದು ಲೇಸು.

ಶಕುನಿ—ಇದಕ್ಕೇಕಿಷ್ಟು ಗಲಿಬಿಲಿ ?! ಸೌಭದ್ರನನ್ನು ರಕ್ಷಿಸುವವರು ಹಲವರಿದ್ದಾರೆ. ಅರ್ಜುನನ ಮಗನೆಂದು ತಿಳಿದು ಬಂದೊಡನೆಯೇ ಅಥವಾ ಈ ದಿನ ಯುದ್ಧರಂಗಕ್ಕೆ ಕೃಷ್ಣನು ಬಂದಿಲಿಲ್ಲವೆಂಬುದು ನೆನಪಾದೊಡನೆಯೇ ವಿರಾಟೇಶ್ವರನೇ ಅವನನ್ನು ಬಿಟ್ಟುಬಿಡಬಹುದು. ಅಥವಾ ಸಬಲ ಶತ್ರುಗಳನ್ನೆಲ್ಲಾ ಸದೆಬಡಿದು ಭೀಮನೇ ಅವನನ್ನು ಬಿಡಿಸಿಕೊಳ್ಳಬಹುದು.

(ದ್ರೋಣ ಭೀಷ್ಮರು ಪ್ರವೇಶಿಸುವರು.)

ದ್ರೋಣ—ಸೂತ, ಅಭಿಮನ್ಯುವನ್ನು ಸೆರೆಹಿಡಿದರೆಂದೆಯಾ ? ಹೇಗೆ ಹಿಡಿದರು ? ಅವನ ರಥವೇನಾದರೂ ಮಗುಚಿಕೊಂಡಿತೇ ? ಕುದುರೆಗಳು ತುಂಟಾಟವಾಡಿದವೋ ? ಚಕ್ರಗಳು ನೆಲದೊಳಕ್ಕೆ ಕುಸಿದವೋ ? ಬೆನ್ನಿಗೆ ಕಟ್ಟಿದ ಬತ್ತಳಿಕೆಗಳೆರಡೂ ಬರಿದಾದವೋ ? ಅಥವಾ ನೀನೇ ಅವನಿಗೆ ಪ್ರತಿಕೂಲನಾದೆಯೋ? ಅಥವಾ ನಾರಿ ಹರಿದು ಅವನ ಬಿಲ್ಲು ಬಂಜೆಯಾಯಿತೋ? ಯುದ್ಧದಲ್ಲಿ ರಥಿ-ಮಹಾರಥಿಗಳಿಗೂ ದುರದೃಷ್ಟದಿಂದ ಈ ವಿಪತ್ತುಗಳೊದಗಿ ಅವರು ಶತ್ರುಗಳ ಬಾಣದ ಬಾಯಿಗೆ ಹೀಗೆ ತುತ್ತಾಗುವುದುಂಟು. ಆದರೆ ಅಭಿಮನ್ಯುವಿಗೆ ಶರವಿದ್ಯೆ ಕರಗತವಾಗಿತ್ತಲ್ಲಾ !

ಸೂತ—ಆಯುಷ್ಮಂತ, ಧನುರ್ವಿದ್ಯೆಯೆನ್ನುವುದು ಅತಿ ಕಠಿನ ಮತ್ತು ಅಪಾಯಮಯ. ಆ ವಿಚಾರ ತಮಗೆ ತಿಳಿಯದೇ ? ನೀವೀಗ ಹೇಳಿದ ತೊಂದರೆಗಳೊಂದೂ ಅಭಿಮನ್ಯುವಿಗೆ ಸಂಭವಿಸಲಿಲ್ಲ. ಆ ಮಹಾರಥನ ಬಿಲ್ಲಿಂದ ಬಾಣಗಳ ಪ್ರವಾಹವೇ ಹೊಮ್ಮುತ್ತಿತ್ತು ; ನನ್ನ ರಥವೋ ವಿಷ್ಣು ಬಿಟ್ಟ ಚಕ್ರಾಯುಧದಂತಿತ್ತು. ಆದರೆ ಕಾಲಾಳೊಬ್ಬನು ಬಂದು ಅವನನ್ನು ಹಿಡಿದುಬಿಟ್ಟ !

ಸರ್ವರೂ—ಏನು ? ಕೇವಲ ಒಬ್ಬ ಕಾಲಾಳೆ ? ಅವನು ಹೇಗಿದ್ದ ?

ಸೂತ—ನಾನೀಗ ಏನು ಹೇಳಲಿ ? ಅವನ ರೂಪವನ್ನೋ, ಪರಾಕ್ರಮವನ್ನೋ ?

ಭೀಷ್ಮ—ಸ್ತ್ರೀಯರನ್ನು ವರ್ಣಿಸಲು ಹೇಳಬೇಕಾದ್ದು ರೂಪವನ್ನು. ಪುರುಷರನ್ನು ವರ್ಣಿಸಲು ಪರಾಕ್ರಮವನ್ನು ಹೇಳಬೇಕು. ಆದ್ದರಿಂದ ಅವನ ಪರಾಕ್ರಮವನ್ನು ಹೇಳು.

ಸೂತ—ಆಯುಷ್ಮಂತನೇ (ಎಂದು ವರ್ಣಿಸಲುದ್ಯುಕ್ತನಾಗುವುದರೊಳಗೆ)

ದುರ್ಯೋಧನ—ಯಾವನನ್ನೋ ಹೊಗಳುವುದಕ್ಕೇಕಿಷ್ಟು ಗರ್ವ ನಿನಗೆ? ಉ, ಹೋಗಲಿ; ಹೇಳು : ಅವನು ವೇಗದಲ್ಲಿ ಸಾಕ್ಷಾತ್ ವಾಯು ದೇವನೇ ಆದರೂ ನನಗೇನೂ ಭಯವಿಲ್ಲ.

ಸೂತ—ಮಹಾರಾಜ, ಕೇಳಬೇಕು : ಅವನು ಕುದುರೆಗಳನ್ನು ವಿಹಾರಿಸುವ ವೇಗದಲ್ಲಿ ನುಗ್ಗಿ ಬಂದು, ತೋಳನ್ನು ಚಾಚಿ ಅಭಿಮನ್ಯುವಿನ ರಥಕ್ಕೆ ಕೈಹಾಕಿದ. ಕುದುರೆಗಳು ಕೊರಳೆತ್ತಿ ತುಯ್ದೆಳೆದವಾದರೂ ರಥ ಲವಲೇಶವಾದರೂ ಅಲುಗದೆ ನಿಂತಿತು.

ಭೀಷ್ಮ—ಹಾಗಾದರಿನ್ನೇಕೆ ನಮ್ಮ ಕೈಯಲ್ಲಾಯುಧಗಳು ? ಬಿಸಾಡಿ!

ಸರ್ವರೂ—ಏಕೆ ?

ಭೀಷ್ಮ—ತೋಳೊಂದರಿಂದ, ವೇಗವಾಗಿ ಚಲಿಸುವ ರಥವೂ ಅಲುಗದೇ ನಿಂತಿತೆಂದಮೇಲೆ ಭೀಮನ ತೊಡೆಯ ಮೇಲೆ ಅಭಿಮನ್ಯುವಿರುವನೆಂದು ತಿಳಿಯಿರಿ. ಹಿಂದೆ ಒಂದು ಸಲ ಜಯದ್ರಥನು ದ್ರೌಪದಿಯನ್ನು ಅಪಹರಿಸಿಕೊಂಡು ರಥದಲ್ಲಿ ಹೋಗುತ್ತಿದ್ದಾಗ ಬರಿಯ ಕಾಲ್ನಡಿಗೆಯ ಭೀಮಸೇನನು ಹೀಗೇ ಅಲ್ಲವೇ ಆ ರಥವನ್ನು ತಡೆದು ಅವನನ್ನು ಹಿಡಿದುದು.

ದ್ರೋಣ—ಭೀಷ್ಮರು ಹೇಳಿದ್ದು ನಿಜ. ಬಾಲ್ಯದಿಂದಲೂ ಅವನಿಗೆ ವಿದ್ಯೆಯನ್ನು ಕಲಿಸಿರುವ ನನಗೆ ಅವನ ವೇಗವೆಂತಹುದೆಂಬುದು ಗೊತ್ತು. ಬಾಣಗಳ ಮನೆಯಲ್ಲೊಂದು ಸಲ, ಅವನು ಕಿವಿಯವರಿಗೂ ಎಳೆದು ಬಾಣವನ್ನು ಬಿಟ್ಟ. ಆಗ ನಾನು 'ನಿನ್ನ ತಲೆಯುಲುಗಿತು' ಎಂದು ಹೇಳಿದೆ. ಒಡನೆಯೇ ಭೀಮನು ಆ ಬಾಣಕ್ಕಿಂತಲೂ ವೇಗವಾಗಿ ಓಡಿ, ಅದು ಗುರಿತಾಗುವುದಕ್ಕೆ ಮೊದಲೇ ಅದನ್ನು ಹಿಡಿದು ತಂದ.

ಶಕುನಿ—ಆಹ ! ಎಂಥ ಹಾಸ್ಯಾಸ್ಪದವಾದ ಮಾತಿದು ?! ಬಲವಂತರಿನ್ನಾರೂ ಲೋಕದಲ್ಲಿಲ್ಲವೋ ?! ಬೇಕಾದವರೆಂದಾಕ್ಷಣಕ್ಕೇ ಬಾಯಿಗೆ ಬಂದಂತೆ ಹೊಗಳುವುದೆ ? ನಿಮಗೆ ಪ್ರಪಂಚದಲ್ಲೆಲ್ಲಾ ಪಾಂಡವರೇ ತುಂಬಿದಂತೆ ಕಾಣುತ್ತಿರುವುದೋ ?!

ಭೀಷ್ಮ—ಗಾಂಧಾರರಾಜ, ನಾವು ಹೇಳುತ್ತಿರುವುದೆಲ್ಲ ಕೇವಲ ಕಟ್ಟುಕಥೆಯೇ ? ನೋಡು, ನಾವಾದರೋ ಬಿಲ್ಲು ಬಾಣಗಳನ್ನು ಹಿಡಿದು ರಥದಲ್ಲಿ

ಕುಳಿತು ರಣಕ್ಕೆ ಹೋಗುತ್ತೇವೆ ! ಆದರೆ ತಮ್ಮ ಬರಿಯ ತೋಳ್ಗಳನ್ನೇ ನೆಚ್ಚಿ ಸಮರಾಂಗಣಕ್ಕೆ ಹೋಗುವಂಥವರು ಇಬ್ಬರೇ : ಒಬ್ಬ ಬಲರಾಮ, ಇನ್ನೊಬ್ಬ ಭೀಮ.

ಶಕುನಿ—ಸಾಹಸಪ್ರಿಯರಾದ ನಾವೆಲ್ಲರೂ ಒಮ್ಮೆಗೇ ಉತ್ತರನೊಬ್ಬನಿಂದ ಭಂಗಪಟ್ಟು ಬೆಂಗೊಟ್ಟೋಡಿ ಬಂದೆವು. ಆದರೆ ನಿಮ್ಮಲ್ಲಿ ಕೆಲವರು ಅವನು ಅರ್ಜುನನೇ ಎನ್ನುವಿರಾಗಬಹುದು !

ದ್ರೋಣ—ಅಯ್ಯ ಗಾಂಧಾರರಾಜ, ಆ ವಿಷಯದಲ್ಲಿ ನಿನಗಿನ್ನೂ ಸಂದೇಹವಿದೆಯೇನು ? ಸೆಳೆದು ಬಿಟ್ಟರೆ ಬರಸಿಡಿಲಿನಂತೆ ಮೊರೆಯುವ ಧನುಸ್ಸನ್ನೆಂದಿಗಾದರೂ ಉತ್ತರನು ರಣರಂಗದಲ್ಲಿ ಹಿಡಿದೆಳೆದಾನೇ ? ಕ್ಷಣಾರ್ಧದಲ್ಲಿ ಶರಜಾಲವನ್ನು ಕರೆದು, ಬಿಸಿಲಿಗೆ ಮರೆಮಾಡಿ, ಸೂರ್ಯನು ಮುಳುಗಿದನೆಂಬಂತೆ ಮಾಡುವುದು ಉತ್ತರನಿಂದ ಸಾಧ್ಯವೇ ?

ಭೀಷ್ಮ—ದುರ್ಯೋಧನ, ಆ ಗಾಂಡೀವ ಧನುಸ್ಸು ಹೇಳುತ್ತಿರುವುದು ನಿನಗರ್ಥವಾಗುತ್ತಿಲ್ಲವೆ ? ಅದರ ತಿರುವಾಯಿಂದ ಬಂದ ಬಾಣ ಪುಂಖಾಕ್ಷರಗಳಿಂದ ಸ್ಪಷ್ಟವಾಗಿ ಹೇಳುತ್ತಿದೆ: 'ಶರಸಂಧಾನ ಮಾಡಿದವನು ಅರ್ಜುನ' ಎಂದು. ಆದರೆ ಈ ಶಕುನಿಯದಕ್ಕೆ ಕಿವಿಗೊಡುತ್ತಿಲ್ಲ. ಹೋಗಲಿ, ನಿನಗೂ ಅರ್ಥವಾಗುತ್ತಿಲ್ಲವೇ ?

(ಸೂತನು ಪ್ರವೇಶಿಸುವನು.)

ಸೂತ—(ಭೀಷ್ಮನನ್ನು ಕುರಿತು) ಜಯವಾಗಲಿ ಆಯುಷ್ಮಂತನೇ, ನೀನೀಗ ಶಾಂತಿಕರ್ಮವನ್ನು ಮಾಡಿಸಬೇಕಾಗಿದೆ.

ಭೀಷ್ಮ—ಏಕೆ ?

ಸೂತ—ಅದನ್ನು ನೀನು ಮೊದಲು ಮಾಡಿಸಬೇಕು : ಏಕೆಂದರೆ ನಿನ್ನ ಧ್ವಜವು ಬಾಣದೇಟಿನಿಂದ ಹರಿದಿದೆ. ಇದೋ, ಇಲ್ಲಿದೆ ಆ ಬಾಣ ! ಇದರ ಹಿಳುಕಿನ ಗರಿಯಲ್ಲಿ ಯಾರದೋ ಹೆಸರು ಬರೆದಿದೆ ನೋಡು.

ಭೀಷ್ಮ—ಎಲ್ಲಿ ? ಅದನ್ನಿಲ್ಲಿ ತಾ.

(ಸೂತನು ಕೊಡುವನು.)

ಭೀಷ್ಮ—(ತೆಗೆದುಕೊಂಡು ನೋಡಿ) ವತ್ಸ ಗಾಂಧಾರರಾಜ, ಮುಪ್ಪಿನಿಂದ ಮಂಜಾಗಿದೆ ನನ್ನ ಕಣ್ಣು ! ಈ ಬಾಣದ ಮೇಲೆ ಬರೆದಿರುವುದೇನು

ಓದು. (ಎಂದದನ್ನು ಶಕುನಿಯು ಕೈಗೆ ಕೊಡುವನು.)

ಶಕುನಿ—(ತೆಗೆದುಕೊಂಡು) ಅರ್ಜುನ (ಎಂದು ಓದಿ ಅದನ್ನು ಬಿಸಾಡುವನು. ಅದು ಹೋಗಿ ದ್ರೋಣನ ಪಾದಗಳ ಬಳಿ ಬೀಳುತ್ತದೆ.)—

ದ್ರೋಣ—(ಬಾಣವನ್ನು ಕೈಗೆತ್ತಿಕೊಂಡು ಅದನ್ನು ಸಂಬೋಧಿಸಿ) ಬಾ ಮಗು, ಬಾರಪ್ಪ! (ಎಂದದನ್ನು ಮುದ್ದಿಸಿ) ಅಜ್ಜ ಭೀಷ್ಮರಿಗೆ ವಂದಿಸಲೆಂದು ನನ್ನ ಶಿಷ್ಯನಾದ ಅರ್ಜುನನು ಬಿಟ್ಟ ಬಾಣ, ಕ್ರಮವರಿತು ಅವರಿಗೆ ಮೊದಲು ವಂದಿಸಿ, ಈಗ ನನ್ನನ್ನು ವಂದಿಸಲೆಂದು ಬಂದು ಕಾಲ್ಗಳ ಬಳಿ ನೆಲದ ಮೇಲೆ ಬಿದ್ದಂತಿದೆ.

ಶಕುನಿ—ಅರ್ಜುನನೆಂಬ ಯಾವನೋ ಒಬ್ಬ ಯೋಧನು ಬಿಟ್ಟ ಬಾಣವಿದಾಗಿರಬಹುದು. ಆದ್ದರಿಂದ ಇದರ ಜೊತೆಗೆ ಉತ್ತರನ ಲಿಖಿತ ಪ್ರಮಾಣವೇನಾದರೂ ಇದ್ದರೆ ಅದನ್ನು ತೋರಿಸಿರಿ.

ದುರ್ಯೋಧನ—(ದ್ರೋಣನ ಕಡೆ ತಿರುಗಿ) ಪಾಂಡವರಿಗೆ ರಾಜ್ಯವನ್ನು ಕೊಡಿಸಲೆಂದು ಸುಳ್ಳನ್ನೇನಾದರೂ ಹೇಳುತ್ತಿರುವಿರೋ?! ಹಾಗಾದರೆ ನಾನು ಧರ್ಮರಾಯನನ್ನು ಕಣ್ಣಾರೆ ಕಂಡ ಮೇಲೆಯೇ ಅರ್ಧರಾಜ್ಯವನ್ನು ಕೊಟ್ಟೇನು!

(ಭಟನೊಬ್ಬನು ಪ್ರವೇಶಿಸುತ್ತಾನೆ.)

ಭಟ—ಮಹಾರಾಜರಿಗೆ ಜಯವಾಗಲಿ. ವಿರಾಟನಗರದಿಂದ ದೂತನೊಬ್ಬನು ಬಂದಿದ್ದಾನೆ.

ದುರ್ಯೋಧನ—ಕರೆದು ತಾ.

ಭಟ—ಅಪ್ಪಣೆ. (ಎಂದು ನಿಷ್ಕ್ರಮಿಸುವನು.)

(ಉತ್ತರನು ಪ್ರವೇಶಿಸುತ್ತಾನೆ.)

ಉತ್ತರ—ಪ್ರಯಾಣ ಮಾಡಿದ ದಾರಿ ಸ್ವಲ್ಪವಾದರೂ, ರಥಾಶ್ವಗಳ ವೇಗ ಅತಿಯಾದರೂ, ಹಸ್ತಿನಾವತಿಗೆ ಬಂದು ತಲುಪುವದಿಷ್ಟು ತಡವಾಯಿತು. ಅರ್ಜುನನ ಬಾಣಗಳಿಂದ ಸತ್ತುಬಿದ್ದ ಆನೆಗಳ ಶವಗಳಡ್ಡವಾಗಿ, ದಾರಿ ದುರ್ಗಮವಾಗಿ, ಕುದುರೆಗಳು ಕಾಲಿಡುವುದೇ ಬಹಳ ಪ್ರಯಾಸವಾಯಿತು. (ಮುಂದೆ ಬಂದು ಕೈಮುಗಿದು) ಆಚಾರ್ಯ, ಪಿತಾಮಹ ಮೊದಲಾದ ಸರ್ವರಾಜಮಂಡಲಕ್ಕೂ ನಮಸ್ಕಾರ.

ಸರ್ವರೂ—ಆಯುಷ್ಮಂತನಾಗು.

ದ್ರೋಣ—ಮಾನ್ಯ ವಿರಾಟೇಶ್ವರನೇನು ಹೇಳಿ ಕಳಿಸಿದಾನೆ ?

ಉತ್ತರ—ಆ ಪೂಜ್ಯನಲ್ಲ ನನ್ನನ್ನು ಕಳಿಸಿದವನು !

ದ್ರೋಣ—ಹಾಗಾದರೆ ನಿನ್ನನ್ನು ಕಳಿಸಿದವರಾರು ?

ಉತ್ತರ—ಪೂಜ್ಯ ಧರ್ಮರಾಯನು.

ದ್ರೋಣ—ಧರ್ಮರಾಯನೇನೆಂದು ಹೇಳಿ ಕಳಿಸಿದಾನೆ ?

ಉತ್ತರ—ಕೇಳಿ : "ಉತ್ತರೆಯು ನನಗೆ ಸೊಸೆಯಾದಳು. ನಿಮ್ಮೆಲ್ಲರಾಗಮನವನ್ನೇ ನಿರೀಕ್ಷಿಸುತ್ತಿದ್ದೇನೆ. ವಿವಾಹವೆಲ್ಲಿ ನಡೆಯಬೇಕೆಂದು ನೀವು ನಿಶ್ಚಯಿಸುವಿರಿ ? ಇಲ್ಲೋ ಅಥವಾ ಅಲ್ಲೋ ?" ಎಂದು ಕೇಳಬಾರೆಂದು ಹೇಳಿಕಳಿಸಿದಾನೆ.

ಶಕುನಿ—ಅಲ್ಲೇ, ಅಲ್ಲೇ ನಡೆಯಲಿ !

ದ್ರೋಣ—(ದುರ್ಯೋಧನನನ್ನು ಕುರಿತು) ಈಗೆಲ್ಲ ನಿಸ್ಸಂಶಯವಾಯಿತಲ್ಲಾ ! ? ನೀನು ಹೇಳಿದ ಐದು ರಾತ್ರಿಗಳು ಇನ್ನೂ ಕಳೆದಿಲ್ಲ. ಧರ್ಮದಿಂದ ವಾಗ್ದಾನ ಮಾಡಿದ ಭಿಕ್ಷೆಯನ್ನೀಗ ಧರ್ಮದಿಂದಲೇ ಕೊಟ್ಟುಬಿಡು.

ದುರ್ಯೋಧನ—ಆಗಲಿ.

ಶಕುನಿ—ಆಗಲಿ, ಆಗಲಿ !

ದೂತವಾಕ್ಯ

(ಮಂತ್ರಶಾಲೆಯಲ್ಲಿ ದುರ್ಯೋಧನ.)

ದುರ್ಯೋಧನ—ಪ್ರಾಪ್ತವಾಗಿರುವ ರಣೋತ್ಸವವನ್ನು ಒಮ್ಮೆಗೇ ನೆನೆದುದರಿಂದ, ನನ್ನ ಮನಸ್ಸಿನಲ್ಲಿದ್ದ ರೋಷವೆಲ್ಲ ಮಾಯವಾಯಿತೋ ಎಂಬಂತೆ ನನಗಿಂದು ಸುಮ್ಮಾನವಾಗಿದೆ. ಪಾಂಡವಸೈನ್ಯವನ್ನು ಪ್ರವೇಶಿಸಿ ಮದ್ದಾನೆಗಳ ಒನಕೆಯ ತೋರದ ದಂತಗಳನ್ನು ಬುಡಸಹಿತ ಕೀಳುವಷ್ಟು ಹುಮ್ಮಸ್ಸು ನನಗೆ.

ಕಾಂಚುಕೀಯ— ಮಹಾರಾಜರಿಗೆ ಜಯವಾಗಲಿ. ತಮ್ಮ ಅಪ್ಪಣೆಯಂತೆ ರಾಜಮಂಡಲವನ್ನೆಲ್ಲ ಕರೆತಂದಿದ್ದೇನೆ.

ದುರ್ಯೋಧನ—ಒಳ್ಳೆಯದು. ಬರಹೇಳು.

ಕಾಂಚುಕೀಯ—ಅಪ್ಪಣೆ. (ನಿಷ್ಕ್ರಮಿಸುವನು.)

(ದ್ರೋಣಾದಿ ಮಹನೀಯರು ದುರ್ಯೋಧನನಿರುವ ಮಂತ್ರಶಾಲೆಯನ್ನು ಪ್ರವೇಶಿಸುವರು.)

ದುರ್ಯೋಧನ— ಆಚಾರ್ಯರೇ, ನಮಸ್ಕಾರ; ಬನ್ನಿ, ಈ ಕೂರ್ಮಾಸನದಲ್ಲಿ ಕುಳಿತುಕೊಳ್ಳಿ. ಅಜ್ಜ, ನಮಸ್ಕಾರ; ದಯಮಾಡಿ ಈ ಸಿಂಹಾಸನದಲ್ಲಿ ಮಂಡಿಸಿ. ಮಾವ, ಶರಣು; ಇದೋ ಈ ಚರ್ಮಾಸನವನ್ನಲಂಕರಿಸು. ವೈಕರ್ಣ ಮತ್ತು ವರ್ಷದೇವರೇ, ಬನ್ನಿ, ತಾವಿಬ್ಬರೂ ಕುಳಿತುಕೊಳ್ಳಿ. ಗೆಳೆಯ ಕರ್ಣ, ಏಕೆ ಹಿಂತೆಗೆಯುತ್ತಿರುವೆ? ಬಾ, ಕುಳಿತುಕೊಳ್ಳೋಣ. (ಎಂದು ಕುಳಿತುಕೊಳ್ಳುವರು. ಎಲ್ಲರೂ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳುವರು.) ವೈಕರ್ಣ ವರ್ಷದೇವರೆ, ಈಗ ಹೇಳಿ: ನನಗೆ ಹನ್ನೊಂದಕ್ಷೌಹಿಣೀ ಸೈನ್ಯಬಲವಿದೆಯಲ್ಲಾ, ಅದಕ್ಕೆ ಯಾರು ಸೇನಾಧಿಪತಿಗಳಾಗಲರ್ಹರು ?

ವೈಕರ್ಣ ವರ್ಷದೇವರು—ಈ ಸಂಬಂಧವಾಗಿ ಗಾಂಧಾರರಾಜನ ಅಭಿಪ್ರಾಯವೇನು ಕೇಳಿ.

ದುರ್ಯೋಧನ—(ಶಕುನಿಯ ಕಡೆ ನೋಡಿ) ಆಗಲಿ; ಮಾವ, ಹೇಳು,

ನಿನ್ನ ಅಭಿಪ್ರಾಯವೇನು ?

ಗಾಂಧಾರರಾಜ—ಭೀಷ್ಮರಿರುವಾಗ ಸೇನಾಧಿಪತಿಗಳಾಗಲಿನ್ನಾರಿಗೆ ತಾನೆ ಯೋಗ್ಯತೆಯಿದೆ ?

ದುರ್ಯೋಧನ—ಚೆನ್ನಾಗಿ ಹೇಳಿದೆ ಮಾವ. ಆಗಲಿ, ಹಾಗೆಯೇ ಆಗಲಿ. ಭೀಷ್ಮಾಚಾರ್ಯರೇ ಸೇನಾಧಿಪತಿಯಾಗಿರಲಿ. ನನಗೂ ಅದೇ ಇಷ್ಟ. ಚಂಡಮಾರುತದಿಂದ ಮಥಿತವಾದ ಮಹಾಸಾಗರದ ಘೋಷಕ್ಕೆ ಹೊಯ್ಕಯ್ಯಾಗಿ ಮೊರೆಯುವ ಸೈನಿಕರ ಜಯಜಯಧ್ವನಿ, ರಣಭೇರಿಗಳ ಘೋರನಿನಾದ, ಶಂಖಗಳ ಮಹಾಶಬ್ದ, ಇವುಗಳ ಮಧ್ಯೆ ಗಾಂಗೇಯರ ಉತ್ತಮಾಂಗದ ಮೇಲೆ ಅಭಿಷೇಕದ ಜಲ ಬೀಳಲಿ. ಅದರ ಜೊತೆಜೊತೆಯಲ್ಲೇ ಶತ್ರುರಾಜರ ಮನಸ್ಸೂ ಮುರಿದು ಬೀಳಲಿ.

ಕಾಂಚುಕೀಯ—(ಪ್ರವೇಶಿಸಿ) ಮಹಾರಾಜರಿಗೆ ಜಯವಾಗಲಿ. ಪಾಂಡವಶಿಬಿರದಿಂದ ದೂತನಾಗಿ ಪುರುಷೋತ್ತಮ ನಾರಾಯಣನು ಬಂದಿದಾನೆ.

ದುರ್ಯೋಧನ—ಬಾಯಿಮುಚ್ಚು, ಬಾದರಾಯಣ. ಕಂಸಭೃತ್ಯನಾದ ದಾಮೋದರನು ನಿನಗೆ ಪು-ರು-ಷೋ-ತ್ತ-ಮನಾದನೋ ? ಆ ದನಗಾಹಿಯು ನಿನಗೆ ಪು-ರು-ಷೋ-ತ್ತ-ಮನೋ ? ! ಅರಸರ ಬಳಿ ಆಳಿನ ನಡೆವಳಿಯಿದು ಚೆನ್ನಾಯಿತು ! ನಿನ್ನ ಮಾತಿನಲ್ಲದೆಷ್ಟು ಗರ್ವ ? ಹೋಗು ಹಾಳಾದವನೇ !

ಕಾಂಚುಕೀಯ—ಮಹಾರಾಜರು ಪ್ರಸನ್ನರಾಗಬೇಕು. ಗಾಬರಿಯಲ್ಲಿ ಸಮುದಾಚಾರವನ್ನು ಮರೆತೆ. (ಕಾಲಿಗೆ ಬೀಳುವನು.)

ದುರ್ಯೋಧನ—ಗಾಬರಿಯೋ ? ! ಆಹ! ಮನುಷ್ಯರಿಗೆಂದಿಗೂ ಗಾಬರಿ ತಪ್ಪಿದ್ದಲ್ಲ. ಏಳೇಳು.

ಕಾಂಚುಕೀಯ—ಒಡೆಯ, ಅನುಗೃಹೀತನಾದೆ.

ದುರ್ಯೋಧನ—ಪ್ರಸನ್ನನಾದೆ. ಈಗ ಹೇಳು, ಯಾರವನು ಬಂದಿರುವ ದೂತ ?

ಕಾಂಚುಕೀಯ—ಕೇಶವನೆಂಬೊಬ್ಬ ದೂತ ಬಂದಿದ್ದಾನೆ.

ದುರ್ಯೋಧನ—ಕೇ-ಶವನೆಂದೆಯಾ ? ಅದೀಗ ಸರಿ. ಅವನನ್ನು ನಡೆಸಿ

ಕೊಳ್ಳಬೇಕಾದುದು ಹಾಗೆ; ನೀನು ನಡೆದುಕೊಳ್ಳಬೇಕಾದುದು ಹೀಗೆ. (ರಾಜರ ಕಡೆ ತಿರುಗಿ) ಹೇಳಿ, ರಾಜರೇ, ದೂತನಾಗಿ ಬಂದಿರುವ ಕೇಶವನಿಗೆ ನಾವೇನು ಮಾಡುವುದು ಯೋಗ್ಯ? (ಆದ ಗುಜುಗುಜು ಶಬ್ದವನ್ನಾಲಿಸಿ) ಏನೆಂದಿರಿ? ಅರ್ಘ್ಯ ಕೊಟ್ಟು ಅವನನ್ನು ಪೂಜಿಸಬೇಕೆಂದಿರಾ? ಅದು ನನಗೆ ರುಚಿಸುವುದಿಲ್ಲ. ಅವನನ್ನು ಸೆರೆಹಿಡಿಯುವುದೇ ಸರಿಯೆಂಬುದು ನನ್ನ ಭಾವನೆ. ಕೃಷ್ಣನನ್ನು ಹಿಡಿದು ಕಟ್ಟಿದರೆ ಪಾಂಡವರ ಕಣ್ಣೇ ಇಂಗಿದಂತಾಗುತ್ತದೆ. ಪಾಂಡವರು ಗತಿ-ಮತಿರಹಿತರಾದರೆ ಇಡೀ ಭೂಮಂಡಲ ನಿಸ್ಸಪತ್ನವಾಗಿ, ನನ್ನದಾಗುತ್ತದೆ. ಇನ್ನೊಂದು ಮಾತು: ಕೇಶವನು ಬಂದಾಗ ಯಾರಾದರೂ ಎದ್ದು ನಿಂತರೆ ಅವರಿಗೆ ಹನ್ನೆರಡು ಹೊನ್ನುಗಳ ದಂಡ ಹಾಕುತ್ತೇನೆ—ಎಚ್ಚರಿಕೆಯಿಂದಿರಿ. (ಸ್ವಗತ) ಅವನು ಬಂದಾಗ, ನಾನು ಎದ್ದು ನಿಲ್ಲದಿರಲು ಏನುಪಾಯ ಮಾಡಲಿ? ತಿಳಿಯಿತು! ಬಾದರಾಯಣ, ದ್ರೌಪದಿಯ ಮುಂದಲೆಯನ್ನು ಹಿಡಿಪೆಳೆದುದನ್ನು ಬರೆದಿರುವ ಚಿತ್ರಪಟವನ್ನಿಲ್ಲಿ ತಾ. (ಅಪವಾರಿಸಿ) ಅದರಲ್ಲಿ ದೃಷ್ಟಿ ನೆಟ್ಟವನಂತೆ ನಟಿಸಿ, ಕೇಶವನು ಬಂದಾಗ ಮೇಲೇಳುವುದಿಲ್ಲ.

ಕಾಂಚುಕೀಯ—ಮಹಾರಾಜರಪ್ಪಣೆ. (ನಿಷ್ಕ್ರಮಿಸಿ ಪ್ರವೇಶಿಸಿ) ಮಹಾರಾಜರಿಗೆ ಜಯವಾಗಲಿ. (ಪ್ರತ್ಯೇಕವಾಗಿ) ಇದೋ ಆ ಚಿತ್ರಪಟ.

ದುರ್ಯೋಧನ—(ಪ್ರತ್ಯೇಕವಾಗಿ) ಸುರುಳಿ ಬಿಚ್ಚಿ, ನನ್ನ ಮುಂದದನ್ನು ಹರಡು.

ಕಾಂಚುಕೀಯ—ಅಪ್ಪಣೆ. (ಹರಡಿ ನಿಷ್ಕ್ರಮಿಸುವನು.)

ದುರ್ಯೋಧನ—(ಸ್ವಗತ) ಆಹ! ಈ ಚಿತ್ರಪಟ ನೋಡಲದೆಷ್ಟು ಚೆನ್ನಾಗಿದೆ! ಇದೋ ದುಶ್ಶಾಸನನು ದ್ರೌಪದಿಯನ್ನು ಕೂದಲಿಗೆ ಕೈಹಾಕಿ ಹಿಡಿದಿದಾನೆ, ಅವಳಾದರೋ ದುಶ್ಶಾಸನನ ಸೆಳೆತಕ್ಕೆ ಸಿಕ್ಕಿ ದಿಗ್ಭ್ರಮೆಯಿಂದ ಕಣ್ಣರಳಿಸಿ ರಾಹುವಿನ ದವಡೆಗೆ ಸಿಕ್ಕಿದ ಚಂದ್ರಲೇಖೆಯಂತೆ ಶೋಭಿಸುತ್ತಿದಾಳೆ. ಇದೋ, ಎಲ್ಲ ರಾಜರ ಸಮಕ್ಷಮದಲ್ಲಿ ಅವಮಾನಿತಳಾದ ದ್ರೌಪದಿಯನ್ನು ದುರಾತ್ಮನಾದ ಭೀಮನು ಕಂಡು ಕೆರಳಿ ಸಭಾಸ್ತಂಭವನ್ನು ಕಣ್ಣಿಂದಲೇ ತೂಗಿ ನೋಡುತ್ತಿದಾನೆ; ರೋಷಾರುಣನೇತ್ರನಾದ ಅರ್ಜುನನು ನೆರೆದ ರಾಜಮಂಡಲವನ್ನೆಲ್ಲ ಹುಲ್ಲಿಗೆಣೆಮಾಡಿ ಗಾಂಡೀವದ ಹೆದೆಯನ್ನೆಳೆದು ಕಟ್ಟುತ್ತಿದಾನೆ. ನಕುಲಸಹದೇವರಿಬ್ಬರೂ ಮುಖ ಗಂಟಿಟ್ಟು, ಹಲ್ಲುಮುಡಿ

ಕಚ್ಚಿ, ಮರಣಭೀತಿಯನ್ನು ಬಿಟ್ಟು, ಹುಲಿಯ ಮೇಲೆರಗುವ ಹುಲ್ಲೆಯ ಮರಿಗಳಂತೆ, ನನ್ನ ತಮ್ಮನ ಮೇಲೆ ಬೀಳಲು ಬರುವಂತಿದಾರೆ. ಧರ್ಮರಾಯನಾದರೋ ತನ್ನ ಕಡೆಗಣ್ಣ ಕುಡಿನೋಟವನ್ನು ಚೆಲ್ಲಿ ಅವರನ್ನೆಲ್ಲ ತಡೆಯುತ್ತಿದ್ದಾನೆ. ಇದೋ ಇಲ್ಲಿ ಗಾಂಧಾರರಾಜನು ಧೂರ್ತತೆಯಿಂದ ದಾಳಗಳನ್ನು ಚಿಮ್ಮಿ, ಗರ್ವದಿಂದ ಗೇಲಿ ಮಾಡಿ, ನಕ್ಕು, ತನ್ನ ಅಟ್ಟಹಾಸದಿಂದ ಹಗೆಗಳ ಸೋದವನ್ನು ಮುದುಡುವಂತೆ ಮಾಡಿ, ಅಳುತ್ತಿರುವ ದ್ರೌಪದಿಯನ್ನು ತುಡುಗು ನೋಟದಿಂದ ನೋಡಿ, ಜೂಜಿನಲ್ಲಿ ಜಾಣನಾದ ಅವನು ನೆಲದ ಮೇಲೇನನ್ನೋ ಬರೆಯುತ್ತ, ಆಸನದಲ್ಲಿ ಓಲಾಡುತ್ತಿರುವನು. ಆಚಾರ್ಯರೂ, ಅಜ್ಜನೂ ಆ ದುರವಸ್ಥೆಯ ದ್ರೌಪದಿಯನ್ನು ನೋಡಿ ನಾಚಿ, ತಮ್ಮ ವಲ್ಲಿಯ ಸೆರಗಿನಿಂದ ಮುಖವನ್ನು ಮುಚ್ಚಿಕೊಂಡಿದಾರೆ. ಆಹ! ಈ ಚಿತ್ರಪಟವು ಬಣ್ಣ, ಭಾವ, ರೇಖೆಗಳ ವೈಶಿಷ್ಟ್ಯದಿಂದ ಉತ್ಕೃಷ್ಟವಾಗಿದೆ. ನನಗಂತೂ ಬಹಳ ಸಂತೋಷವಾಯಿತು. ಯಾರಲ್ಲಿ?

ಕಾಂಚುಕೀಯ—(ಪ್ರವೇಶಿಸಿ) ಮಹಾರಾಜರಿಗೆ ಜಯವಾಗಲಿ.

ದುರ್ಯೋಧನ—ಬಾದರಾಯಣ, ಹಕ್ಕಿಯ ಮೇಲೆ ಕುಳಿತು ಹಾರಾಡುವನೆಂಬೊಂದರಿಂದಲೇ ಮಲೆತಿರುವ ಆ ದೂತನನ್ನಿಲ್ಲಿಗೆ ಕರೆದು ತಾ.

ಕಾಂಚುಕೀಯ—ಅಪ್ಪಣೆ. (ನಿಷ್ಕ್ರಮಿಸುವನು.)

ದುರ್ಯೋಧನ—ಗೆಳೆಯ ಕರ್ಣ, ಪಾಂಡವರ ಮಾತನ್ನು ಮನ್ನಿಸಿ ಭೃತ್ಯನಂತೆ ಬಂದಿದ್ದಾನೆ ಇಂದು ಆ ಕೃಷ್ಣಹೃದಯದ ಕೃಷ್ಣ. ಹೆಣ್ಣಿನ ಮಾತಿನಂತೆ ಮೃದುವಾದ ಧರ್ಮರಾಯನ ಮಾತುಗಳನ್ನೀಗ ನೀನೂ ಕೇಳುವಿಯಂತೆ. ಕರ್ಣ, ನಿನ್ನ ಕರ್ಣಗಳೆರಡನ್ನೂ ಸರಿಪಡಿಸಿಕೋ!

(ತದನಂತರ ವಾಸುದೇವನೂ ಕಾಂಚುಕೀಯನೂ ದೂರದಲ್ಲಿ ಪ್ರವೇಶಿಸುವರು.)

ವಾಸುದೇವ—(ಸ್ವಗತ) ನಾನಿಂದು ಧರ್ಮರಾಯನ ಮಾತಿನಿಂದಲೂ, ಅರ್ಜುನನಲ್ಲಿ ನನಗಿರುವ ಸಹಜಸ್ನೇಹದಿಂದಲೂ, ದುರ್ಯೋಧನನಲ್ಲಿಗೆ ತರವಲ್ಲದ ಈ ದೂತಕಾರ್ಯವನ್ನು ನಿರ್ವಹಿಸಲು ಬಂದೆ: ದುರ್ಯೋಧನನಾದರೋ ಕದನಪ್ರಿಯ, ಹೇಳಿದ ಮಾತನ್ನು ಕೇಳನು. (ಎಂದು ನಿಟ್ಟುಸಿರಿಟ್ಟು) ದ್ರೌಪದಿಗಾದ ಅಪಮಾನವನ್ನು ನೋಡಿ ಭೀಮನ ಮನಸ್ಸಿನಲ್ಲೆದ್ದ ಕೋಪದ ದಳ್ಳುರಿಯಿಂದಲೂ, ಅರ್ಜುನನ ಬಾಣದ ಗರಿಯ ಬಿರುಗಾಳಿಯಿಂದಲೂ

ಕುರುವಂಶವನವಿನ್ನೇನು ಬೆಂದು ಬೂದಿಯಾಗುವುದು. (ತೆರೆಯ ಪಕ್ಕಕ್ಕೆ ನೋಡಿ) ಇದು ಸುಯೋಧನನ ಶಿಬಿರ. ಇಲ್ಲಿ ರಾಜರ ಬಿಡಾರಗಳು ಇಂದ್ರನಗರಿಯಂತೆ ಸ್ವಚ್ಛಂದವಿಹಿತವಾಗಿವೆ; ಶಸ್ತ್ರಶಾಲೆಗಳು ಬಹುವಿಧ ಯುದ್ಧ ಸಲಕರಣೆಗಳಿಂದ ವಿಸ್ತೀರ್ಣವಾಗಿವೆ; ಉತ್ತಮ ಜಾತಿಯ ಕುದುರೆಗಳು ಲಾಯಗಳಲ್ಲಿ ಕೆನೆಯುತ್ತಿವೆ; ಆನೆಗಳು ಘೀಳಿಡುತ್ತಿವೆ! ಈ ವಿಪುಲೈಶ್ವರ್ಯವೆಲ್ಲ ಸ್ವಜನಾವಮಾನದ ಕಾರಣದಿಂದ ಇನ್ನೇನು ಹಾಳಾಗುವುದರಲ್ಲಿದೆ! ದುರ್ಯೋಧನನು ದುಷ್ಟವಾದಿ,ಗುಣದ್ವೇಷಿ, ಕಡುಮೂರ್ಖ, ಸ್ವಜನನಿರ್ದಯಃ ಅವನು ನನ್ನನ್ನು ನೋಡಿದನೆಂದರೆ ಮಾಡಬೇಕಾದುದನ್ನೂ ಮಾಡನು. (ಪ್ರಕಾಶ) ಬಾದರಾಯಣ, ಒಳಗೆ ಹೋಗಲೋ?

ಕಾಂಚುಕೀಯ—ಮತ್ತೇನು, ಮತ್ತೇನು; ಪದ್ಮನಾಭನು ಪ್ರವೇಶಿಸಬೇಕು.

ವಾಸುದೇವ—(ಪ್ರವೇಶಿಸಿ) ಇದೇನು? ನನ್ನನ್ನು ನೋಡಿ ಕ್ಷತ್ರಿಯರೆಲ್ಲರೂ ಗಾಬರಿಗೊಂಡಂತಿದೆ! (ಪ್ರಕಾಶ) ಬೇಡಿ, ಗಾಬರಿಯಾಗಬೇಡಿ; ಸ್ವಸ್ಥರಾಗಿ ಕುಳಿತುಕೊಳ್ಳಿ.

ದುರ್ಯೋಧನ—ಏನೇನು? ಕೇಶವನನ್ನು ಕಂಡು ಕ್ಷತ್ರಿಯರೆಲ್ಲ ಗಾಬರಿಗೊಂಡರೆ?! ಬೇಡಿ. ಮೊದಲೇ ನಿಮಗೆ ನಾನು ತಿಳಿಸಿರುವ ದಂಡವನ್ನು ನೆನೆದುಕೊಳ್ಳಿ! ಇಲ್ಲಿಗೆಲ್ಲ ನಾನಲ್ಲವೇ ಒಡೆಯ?!

ವಾಸುದೇವ—(ಬಳಿ ಸಾರಿ) ಅಯ್ಯ ಸುಯೋಧನ, ಏನು ಕುಳಿತೆ?

ದುರ್ಯೋಧನ—(ಆಸನದಿಂದ ಬಿದ್ದು, ಸ್ವಗತ) ಕೇಶವನು ಬಂದಿರುವನೆಂಬುದು ಸ್ಪಷ್ಟವಾಯ್ತು. ಮನಸ್ಸನ್ನು ಗಟ್ಟಿಮಾಡಿ ಬಿಗಿಯಾಗಿ ಕುಳಿತಿದ್ದರೂ ಕೇಶವನ ಪ್ರಭಾವದಿಂದ ನಾನು ಆಸನದಿಂದುರುಳಿಬಿಟ್ಟೆನಲ್ಲಾ?! ಆಹ! ಈ ದೂತನು ಬಹು ಮಾಯಾವಿ. (ಪ್ರಕಾಶ) ಅಯ್ಯ, ದೂತ, ಇದೋ ಆಸನ; ಕುಳಿತುಕೋ.

ವಾಸುದೇವ—(ಎದ್ದು ನಿಂತ ದ್ರೋಣಾದಿಗಳನ್ನು ನೋಡಿ) ಆಚಾರ್ಯ, ಕುಳಿತುಕೊಳ್ಳಿ; ಗಾಂಗೇಯ ಪ್ರಮುಖರಾಜರೇ, ನಿಮಗಿಷ್ಟ ಬಂದಂತೆ ಕುಳಿತುಕೊಳ್ಳಿ. ನಾನೂ ಕುಳಿತುಕೊಳ್ಳುತ್ತೇನೆ. (ಕುಳಿತು ದುರ್ಯೋಧನನ ಮುಂದಿದ್ದ ಚಿತ್ರದ ಕಡೆ ಬಾಗಿ ನೋಡಿ, ಸ್ವಗತ) ಎಷ್ಟು ಚೆನ್ನಾಗಿದೆ ಈ

ವರ್ಣರಂಜಿತ ಚಿತ್ರಪಟ?! ಛೆ! ಅಲ್ಲ! ದ್ರೌಪದಿಯ ಕೂದಲನ್ನು ಹಿಡಿದೆಳೆದುದನ್ನು ಬರೆದಿರುವ ಚಿತ್ರವಲ್ಲಾ ಇದು?! ಹುಡುಗುಬುದ್ಧಿಯ ದುರ್ಯೋಧನನು ಸ್ವಜನಾವಮಾನವನ್ನೂ ಪರಾಕ್ರಮವೆಂದು ಭಾವಿಸಿ ನೋಡುತ್ತಿದ್ದಾನೆ. ಯಾವ ತಿಳಿಗೇಡಿ ತಾನೇ ತನ್ನ ತಪ್ಪನ್ನು ಹೀಗೆ ತುಂಬಿದ ಸಭೆಯಲ್ಲಿ ಪ್ರಕಟಪಡಿಸಿಕೊಂಡಾನು? (ದುರ್ಯೋಧನನನ್ನು ಕುರಿತು ಪ್ರಕಾಶ) ಆಃ ಸಾಕು! ಈ ಚಿತ್ರಪಟವನ್ನತ್ತ ತೆಗೆದಿರಿಸು.

ದುರ್ಯೋಧನ—(ಹತಪ್ರಭನಾಗಿ)ಬಾದರಾಯಣ, ಈ ಚಿತ್ರಪಟವನ್ನತ್ತ ತೆಗೆದಿರಿಸು.

ಕಾಂಚುಕೀಯ—ಅಪ್ಪಣೆ. (ತೆಗೆದುಕೊಂಡು ನಿಷ್ಕ್ರಮಿಸುವನು.)

ದುರ್ಯೋಧನ—(ಕೃಷ್ಣನನ್ನು ಕುರಿತು) (ಅಯ್ಯ, ದೂತ, ಯಮನ ಮಗ ಧರ್ಮರಾಯ, ವಾಯುಪುತ್ರ ಭೀಮ, ಇಂದ್ರತನಯ ಅರ್ಜುನ, ಅಶ್ವಿನೀಸುತರಾದ ನಕುಲಸಹದೇವರು—ಇವರೆಲ್ಲರೂ ಪರಿವಾರಸಹಿತ ಕುಶಲವಾಗಿರುವರೇ?)

ವಾಸುದೇವ—ಗಾಂಧಾರಿಯ ಮಗನಿಗೀ ಮಾತು ಒಪ್ಪುವುದು. ಹೌದು ಹೌದು! ಎಲ್ಲರೂ ಕುಶಲ. [“ನೀನು ನಿನ್ನ ರಾಜ್ಯದಲ್ಲಿ, ಶರೀರದಲ್ಲಿ ಹೊರಗೊಳಗೆ ಕುಶಲವೇ”] ಎಂದು ಯುಧಿಷ್ಠಿರಾದಿ ಪಾಂಡವರು ಕೇಳಿಪರು. ನಿನ್ನಲ್ಲಿ ಅವರದೊಂದು ವಿಜ್ಞಾಪನೆಯಿದೆ: ಅವರು ಮಹಾದುಃಖವನ್ನನುಭವಿಸಿದರು. ಮಾಡಿಕೊಂಡಿದ್ದ ಗಡುವೂ ತೀರಿತು. ಅವರಿಗೂ ಧರ್ಮವಾಗಿ ಬರಬೇಕಾದ ದಾಯಾದ್ಯವೇನಿದೆಯೋ ಅದನ್ನು ಹಂಚಿಬಿಡು: ಇದನ್ನೇ ಅವರು ನನ್ನ ಮೂಲಕ ಹೇಳಿಕಳಿಸಿರುವುದು.

ದುರ್ಯೋಧನ—ಏನೇನು? ದಾಯಾದ್ಯವಂತೋ? ನಮ್ಮ ಚಿಕ್ಕಪ್ಪನೊಂದು ಸಲ ಕಾಡಿನಲ್ಲಿ ಬೇಟೆಯಾಡುತ್ತಿದ್ದಾಗ ಏನೋ ಅಪರಾಧ ಮಾಡಿ ಮುನಿಶಾಪನನ್ನು ಪಡೆದ. ಅಂದಿನಿಂದೀಚೆಗೆ ಆತನು ಹೆಂಡಿರ ಮೇಲಣ ಆಶೆಯನ್ನೇ ಬಿಟ್ಟ. ಹೀಗಾಗಿ ಇನ್ನೊಬ್ಬರಿಗೆ ಹುಟ್ಟಿದಾ ಪಾಂಡವರಿಗೆ ಪಿತ್ರಾರ್ಜಿತವೆಲ್ಲಿ ಬಂತು?.

ವಾಸುದೇವ—ಪುರಾಶಾಸ್ತ್ರಪಂಡಿತನಾದ ನಿನ್ನನ್ನೊಂದು ಪ್ರಶ್ನೆ ಕೇಳುತ್ತೇನೆ: ನಿಮ್ಮ ತಾತ ವಿಚಿತ್ರವೀರ್ಯನು ವಿಷಯಲಂಪಟನಾಗಿ

ಕ್ಷಯರೋಗದಿಂದ ಸತ್ತಮೇಲೆ ಅವನ ಹೆಂಡತಿಯಾದ ಅಂಬಿಕೆಯಲ್ಲಿ ವ್ಯಾಸರಿಗೆ ಹುಟ್ಟಿದ ನಿಮ್ಮ ತಂದೆ ಆ ಧೃತರಾಷ್ಟ್ರನು ರಾಜ್ಯಕ್ಕೆ ಹೇಗೆ ಉತ್ತರಾಧಿಕಾರಿಯಾದ ? ಹೇಳು ! (ಅವಾಕ್ಕಾಗಿ ತಲೆ ಬಾಗಿಸಿದ ದುರ್ಯೋಧನನನ್ನು ಕುರಿತು ಮತ್ತೆ) ಆದ್ದರಿಂದ ಹಾಗೆಲ್ಲ ಮಾತನಾಡಬೇಡ. ಹೀಗೆಯೇ ಪರಸ್ಪರ ವಿರೋಧ ಹೆಚ್ಚಿ ತ್ವರೆಯಿಂದ ಕುರುಕುಲವು ನಾಮಾವಶೇಷವಾದೀತು. ಕೋಪವನ್ನೆಲ್ಲ ನುಂಗಿಕೊಂಡು ಯುಧಿಷ್ಠಿರಾದಿಗಳು ಪ್ರೀತಿಯಿಂದ ನಿನ್ನನ್ನು ಏನೆಂದು ಕೇಳಿಕೊಳ್ಳುತ್ತಿರುವರೋ ಅದನ್ನು ನೀನು ಮಾಡಿಕೊಡುವುದು ಮೇಲು.

ದುರ್ಯೋಧನ—ಅಯ್ಯ ದೂತ, ನಿನಗೆ ರಾಜ್ಯವ್ಯವಹಾರ ತಿಳಿಯದು : ರಾಜ್ಯವೆನ್ನುವುದು ರಿಪುಗಳನ್ನು ಜಯಿಸಿದ ಎದೆಗಾರಿಕೆಯ ರಾಜಪುತ್ರರು ಅನುಭವಿಸುವ ವಸ್ತು ; ಪ್ರಪಂಚದಲ್ಲದು ಬೇಡಿದರೆ ಸಿಗದು. ಮೇಲಾಗಿ ಅದು ದರಿದ್ರರಿಗೆ ಕೊಡುವ ವಸ್ತುವೂ ಅಲ್ಲ. ರಾಜರಾಗಲಾಕಾಂಕ್ಷೆಯಿದ್ದರೆ ಬೇಗ ಸಾಹಸವನ್ನು ತೋರಲಿ. ಹಾಗಿಲ್ಲದಿದ್ದರೆ ಆತ್ಮಶಾಂತಿಗಾಗಿ ಮುನಿಗಳು ನೆಲೆಸಿರುವ ಆಶ್ರಮಕ್ಕೆ ಹೋಗಲಿ.

ವಾಸುದೇವ—ಅಯ್ಯ ಸುಯೋಧನ, ಸಾಕು. ಬಂಧುಗಳ ಬಗ್ಗೆ ಒರಟು ಮಾತುಗಳನ್ನಾಡಬೇಡ. ನೋಡು, ಪೂರ್ವಾರ್ಜಿತಪುಣ್ಯದಿಂದ ಪ್ರಾಪ್ತವಾದ ಸಾಮ್ರಾಜ್ಯಸಂಪತ್ತಿರುವಾಗ ಸ್ನೇಹಿತರನ್ನೂ, ಬಂಧುಗಳನ್ನೂ ಯಾವನು ವಂಚಿಸುವನೋ ಅವನ ಶ್ರಮವೆಲ್ಲ ನಿಷ್ಫಲ.

ದುರ್ಯೋಧನ—ಕಂಸನು ವಂಚಿತನಾದುದು ನಿನ್ನಿಂದಲ್ಲವೆ ? ಸಾಕು ಆತ್ಮಪ್ರಶಂಸೆ. ನನಗೆ ನಿನ್ನ ಶೌರ್ಯವೂ ಗೊತ್ತು. ಅಳಿಯನ ಸಾವಿನಿಂದ ಶೋಕಸಂತಪ್ತನಾದ ಮಗಧೇಶ್ವರನು ಕೋಪದಿಂದ ಕಿಡಿಕಿಡಿಯಾದೊಡನೆಯೇ, ನೀನು ಭಯಗ್ರಸ್ತನಾಗಿ ಪಲಾಯನ ಮಾಡಿದೆಯಲ್ಲಾ—ಆಗ ನಿನ್ನ ಶೌರ್ಯ ಪ್ರತಿಷ್ಠೆಯೆಲ್ಲಿ ಹೋಗಿತ್ತು ?

ವಾಸುದೇವ—ಅಯ್ಯ ಸುಯೋಧನ, ದೇಶ-ಕಾಲ-ಪರಿಸ್ಥಿತಿಗಳನ್ನು ನೋಡಿಕೊಂಡಲ್ಲವೇ ಶೌರ್ಯವನ್ನು ತೋರಿಸುವುದು ರಾಜನೀತಿಜ್ಞರು ? ನನ್ನನ್ನು ಗೇಲಿಮಾಡುವುದನ್ನಿನ್ನು ಬಿಡು. ಮೊದಲು, ನಾನು ಬಂದ ಕೆಲಸವನ್ನಿನ್ನು ಮಾಡಿಕೊಡು. ತಮ್ಮಂದಿರಲ್ಲಿ ಸ್ನೇಹವನ್ನು ತೋರು; ಅವರ

ದೋಷಗಳನ್ನೆಲ್ಲ ಮರೆತುಬಿಡು. ಬಂಧುಗಳೊಡನೆ ಮಧುರ ಸಂಬಂಧವು ಇಹಪರಗಳೆರಡಕ್ಕೂ ಶ್ರೇಯಸ್ಕರ.

ದುರ್ಯೋಧನ—ದೇವತೆಗಳ ಮಕ್ಕಳಾದ ಪಾಂಡವರಿಗೂ, ಮನುಷ್ಯರ ಮಕ್ಕಳಾದ ನಮಗೂ ಬಂಧುತ್ವವೆಲ್ಲಿ ಬಂತು! ಹೇಳಿದುದನ್ನೇ ಹೇಳುವುದನ್ನು ಬಿಡು. ನಿನ್ನ ಪುರಾಣ ಸಾಕು, ನಿಲ್ಲಿಸು.

ವಾಸುದೇವ—(ಸ್ವಗತ) ಸಾಮೋಪಾಯದಿಂದಿವನನ್ನು ಒಲಿಸಿಕೊಳ್ಳೋಣವೆಂದರೆ ತನ್ನ ಸ್ವಭಾವವನ್ನಿವನೆಲ್ಲಿ ಬಿಟ್ಟಾನು?! ಆಗಲಿ, ಬಿರುನುಡಿಯಿಂದಿವನನ್ನು ಬವಣೆಗೊಳಿಸುತ್ತೇನೆ. (ಪ್ರಕಾಶ) ಅಯ್ಯ ಸುಯೋಧನ, ಅರ್ಜುನನ ಬಲಪರಾಕ್ರಮವು ನಿನಗೆ ಗೊತ್ತಿಲ್ಲವೋ ?

ದುರ್ಯೋಧನ—ಗೊತ್ತಿಲ್ಲ !

ವಾಸುದೇವ—ಕೇಳು : ಕಿರಾತವೇಷಧಾರಿಯಾದ ಪರಶಿವನನ್ನು ಯುದ್ಧದಲ್ಲಿ ಪರಿತೋಷಗೊಳಿಸಿದ; ಖಾಂಡವವನವನ್ನು ಹುರಿದು ಮುಕ್ಕುತ್ತಿದ್ದ ಅಗ್ನಿದೇವನಿಗೆ ಮಳೆ ತಟ್ಟದಂತೆ ಬಾನನ್ನೆಲ್ಲ ಬಾಣಗಳಿಂದ ಮುಚ್ಚಿದ. ದೇವೇಂದ್ರನನ್ನು ಪೀಡಿಸುತ್ತಿದ್ದ ನಿವಾತಕವಚರನ್ನು ಲೀಲೆಯಿಂದಲೇ ಹುಟ್ಟಡಗಿಸಿ ಬಿಟ್ಟ. ಅಂದು ವಿರಾಟನಗರದಲ್ಲಿ ಭೀಷ್ಮಾದಿಗಳನ್ನು ತಾನೊಬ್ಬನೇ ಸೋಲಿಸಿದನಲ್ಲನೇ ಆ ಅರ್ಜುನ ?! ನಿನ್ನ ಸ್ವಂತ ಅನುಭವಕ್ಕೆ ಬಂದೊಂದು ವಿಚಾರವನ್ನು ಹೇಳಲೇನು ? ನೀನು ಘೋಷಯಾತ್ರೆಗೆಂದು ಹೋದಾಗ ನಿನ್ನನ್ನು ಚಿತ್ರಸೇನನು ಸೆರೆಹಿಡಿದೊಯ್ಯುತ್ತಿರಲು, ಬಾಯ್ಬಿಟ್ಟು ಮೊರೆಯಿಡುತ್ತಿದ್ದ ನಿನ್ನನ್ನು ಬಿಡಿಸಿಕೊಂಡವನು ಅರ್ಜುನನಲ್ಲವೆ ?! ಹೆಚ್ಚಿಗೆ ಮಾತೇಕೆ—ನನ್ನ ಮಾತನ್ನು ಕೇಳಿ ಅವರಿಗೆ ಅರ್ಧ ರಾಜ್ಯವನ್ನು ಕೊಡು. ಇಲ್ಲದಿದ್ದರೆ ಸಾಗರಪರ್ಯಂತ ಸಾಮ್ರಾಜ್ಯವನ್ನೆಲ್ಲ ಪಾಂಡವರು ಕಸಿದುಕೊಳ್ಳುವರು—ನೋಡುತ್ತಿರು.

ದುರ್ಯೋಧನ—ಏನೇನು ! ಕಸಿದುಕೊಳ್ಳುವರೇ ಪಾಂಡವರು ? ಭೀಮರೂಪವನ್ನು ಧರಿಸಿ ವಾಯುದೇವನೇ ಬಂದು ಯುದ್ಧದಲ್ಲಿ ಹೊಯ್ದಾಡಲಿ; ಪಾರ್ಥರೂಪದಲ್ಲಿ ಸಾಕ್ಷಾತ್ ದೇವೇಂದ್ರನೇ ಹೋರಾಡಲಿ. ನೋಡಿಕೊಳ್ಳುತ್ತೇನೆ. ಎಲೇ ಒಣಟುಮಾತಿನ ಮಲ್ಲ, ನಮ್ಮ ತಂದೆಯನುಭವದಲ್ಲಿದ್ದ ಮತ್ತು ನನ್ನ ಶೌರ್ಯದಿಂದ ಸುರಕ್ಷಿತವಾಗಿರುವ ಸ್ವರಾಜ್ಯದಲ್ಲಿ

ಅವರಿಗೆ ಒಂದು ಹುಲ್ಲುಕಡ್ಡಿಯನ್ನೂ—ನಿನ್ನ ಮಾತನ್ನು ಕೇಳಿ—ನಾನು ಕೈಯೆತ್ತಿ ಕೊಡುವುದಿಲ್ಲ.

ವಾಸುದೇವ—ಎಲೆ, ಕುರುಕುಲಕಲಂಕ ಭೂತ, ಅಪಯಶೋಲುಬ್ಧ, ನಮ್ಮ ಮಾತು ನಿನಗೆ ಹುಲ್ಲಿಗೆ ಸಮವಾಯಿತೇ ?

ದುರ್ಯೋಧನ—ಲೋ ಗೊಲ್ಲ, ನಿನ್ನ ಮಾತು ಹುಲ್ಲಲ್ಲದೆ ಮತ್ತೇನು? ಕೊಲ್ಲಬಾರದ ಹೆಣ್ಣನ್ನು ಕೊಂದೆ. ಕುದುರೆ ಗೋವೃಷಭಗಳ ವಧೆ ಮಾಡಿದೆ. ಕೊನೆಗೆ ಮಲ್ಲರನ್ನು ಕೊಲೆ ಮಾಡಿದೆ. ಇಲ್ಲಿಗೆ ಬಂದು ಈಗ ಸಾಧುಗಳೊಡನೆ ಬಾಯ್ಬಡಿಯುವೆಯೋ ನೀನು ?

ವಾಸುದೇವ—ಎಲೋ ಸುಯೋಧನ, ನನ್ನನ್ನು ಬೈಯುತ್ತಿರುವೆಯಾ ನೀನು ?

ದುರ್ಯೋಧನ—ಇಲ್ಲ, ಅದು ಬೈಗುಳಲ್ಲ ; ನಿನ್ನ ಬಗ್ಗೆ ಅದೆಲ್ಲ ವಾಸ್ತವ ವಿಚಾರ.

ವಾಸುದೇವ—ಛೆ ! ಬೇಡ ನಾನಿಲ್ಲಿರುವುದು ! ಕೂಡಲೇ ಹೋಗುತ್ತೇನೆ.

ದುರ್ಯೋಧನ—ಹೋಗು, ಹೋಗು. ದನಗಳ ಗೊರಸಿನ ಧೂಳಿಂದ ಕೈಮೈಯನ್ನೆಲ್ಲ ಬೂದಿಮಾಡಿಕೊಂಡು ದನದ ಕೊಟ್ಟಿಗೆಗೆ ಹೋಗು. ಇಲ್ಲಿ ನಿನ್ನ ಕಾಲವೆಲ್ಲ ವ್ಯರ್ಥವಾಯಿತು.

ವಾಸುದೇವ—ಆಗಲಿ, ಅದಕ್ಕೇನು ! ಆದರೆ ಕಳಿಸಿದ ಸಂದೇಶವನ್ನು ತಿಳಿಸದೆ ನಾನು ಹೋಗುವುದಿಲ್ಲ. ಕೇಳು ಯುಧಿಷ್ಠಿರನ ಸಂದೇಶವನ್ನು.

ದುರ್ಯೋಧನ—ಆಃ ! ನನ್ನೊಡನೆ ಮಾತನಾಡುವಷ್ಟು ಯೋಗ್ಯತೆ ನಿನಗೆಲ್ಲಿ ಬಂತು ? ನನ್ನ ತಲೆಯ ಮೇಲೆ ಅರಳಿದ ಬಿಳಿಯ ಸತ್ತಿಗೆಯಿದೆ ! ಬ್ರಾಹ್ಮಣಶ್ರೇಷ್ಠರ ಕೈಯಿಂದ ಬಿದ್ದ ಪುಣ್ಯತೀರ್ಥದಿಂದ ನನ್ನ ನೆತ್ತಿ ನೆಂದಿದೆ. ಹೀಗಿದ್ದು, ನನ್ನ ಸಾಮಂತರಾಜರ ಅನುಚರರಿಗೆ ಸಮನಾದ ನಿನ್ನಂಥವರೊಡನೆ ನಾವು ಮಾತನಾಡುವುದಿಲ್ಲ !

ವಾಸುದೇವ—ಮಾತನಾಡುವುದಿಲ್ಲವಲ್ಲವೆ ನನ್ನೊಡನೆ ಸುಯೋಧನನು? ಎಲೋ ಶಠ, ಬಾಂಧವದ್ವೇಷಿ, ಒರಚುಗಣ್ಣ ಕಾಗೆ, ಕೋಡಗ, ನಿನ್ನಿಂದೀ ಕುರುವಂಶವೆಲ್ಲ ಸ್ವಲ್ಪಕಾಲದಲ್ಲೇ ನಾಶವಾಗುವುದಲ್ಲಾ ! ಎಲೆಲೇ ರಾಜರಿರಾ, ನಾನು ಹೋಗುತ್ತೇನೆ. (ಎಂದು ನಿಷ್ಕ್ರಮಿಸುತ್ತಿರಲು)—

ದುರ್ಯೋಧನ—ಏನು ? ಕೇಶವನು ಹೊರಟುಬಿಟ್ಟನಲ್ಲಾ ! ದುಶ್ಶಾಸನ, ದುರ್ಮರ್ಷಣ, ದುರ್ಮುಖ, ದುರ್ಬುದ್ಧಿ, ದುಷ್ಟೇಶ್ವರ, ದೂತನ ಮೇರೆ ಮರ್ಯಾದೆಯನ್ನು ಮೀರಿ ನಡೆದುಕೊಂಡ ಕೇಶವನನ್ನು ಹಿಡಿದು ಕಟ್ಟಿರಿ. ಏನು ? ಕೈಲಾಗವೆ ? ದುಶ್ಶಾಸನ, ನಿನಗೂ ಸಾಧ್ಯವಿಲ್ಲವೆ ? ಇವನಿಂದಲೂ ಸಾಧ್ಯವಿಲ್ಲ ; ಮಾವ, ಈ ಕೇಶವನನ್ನು ಹಿಡಿದುಕಟ್ಟು. ಏನು ? ಅವನೂ ಹಿಮ್ಮುಖವಾಗಿ ಬಿದ್ದನಲ್ಲಾ ! ಆಗಲಿ, ನಾನೇ ಹಗ್ಗಗಳಿಂದ ಕಟ್ಟುತ್ತೇನೆ. (ಎಂದು ಕೃಷ್ಣನ ಬಳಿ ಸಾರುವನು.)

ವಾಸುದೇವ—ಇದೇನು ? ದುರ್ಯೋಧನನು ನನ್ನನ್ನು ಕಟ್ಟಬೇಕೆಂದಿದಾನೆ! ಆಗಲಿ, ಸುಯೋಧನನ ಸಾಮರ್ಥ್ಯವನ್ನು ನೋಡಿಯೇ ಬಿಡುತ್ತೇನೆ. (ವಿಶ್ವರೂಪವನ್ನು ಧರಿಸುವನು.)

ದುರ್ಯೋಧನ—ಎಲೆ ದೂತ, ಸುತ್ತಲೂ ನಿನ್ನ ಸ್ವಂತ ಮಾಯೆಯನ್ನೋ ದೈವ ಮಾಯೆಯನ್ನೋ ಬೇಕಾದ ಹಾಗೆ ಸೃಜಿಸು ; ನಿವಾರಿಸಿಕೊಳ್ಳಲು ಸಾಧ್ಯವಿಲ್ಲವೆಂಬ ದೇವಾಸ್ತ್ರಗಳನ್ನು ಬೇಕಾದರೂ ಪ್ರಯೋಗಿಸಿ ಹೊಯ್ದಾಡು : ಕುದುರೆ, ಆನೆ, ವೃಷಭಗಳನ್ನು ಬೀಳಿಸಿ ಜಂಭ ಕೊಚ್ಚಿಕೊಳ್ಳುವ ನಿನ್ನನ್ನಿಂದು ನೆರೆದೀ ರಾಜರ ಮಧ್ಯೆ ಹಿಡಿದು ಕಟ್ಟುತ್ತೇನೆ. ಆಃ ! ನಿಲ್ಲೀಗ ! ಏನಿದು ? ಕೃಷ್ಣನು ಕಾಣುವುದಿಲ್ಲ ! ಇದೋ ಇಲ್ಲಿದಾನೆ ಕೇಶವ ! ಅಹ ! ಎಷ್ಟು ಕುಳ್ಳನಾಗಿಬಿಟ್ಟ ! ಎಲೋ ನಿಲ್ಲೀಗ ! ಇದೇನು, ಮತ್ತೆ ಕಾಣದಾದ ಕೇಶವನು ! ಇದೋ ಇಲ್ಲಿದಾನೆ ಕೇಶವ ! ಎಲೆಲೆ, ಎಷ್ಟೆತ್ತರವಾದ ! ಆಹ ಮತ್ತೆ ಮಾಯವಾದನಲ್ಲ! ಇದೋ ಇಲ್ಲಿ ! ಅಲ್ಲಿ ! ಎಲ್ಲೆಲ್ಲೂ, ಮಂತ್ರಶಾಲೆಯ ತುಂಬ ಕೇಶವರೇ ಕಾಣುತ್ತಿರುವರಲ್ಲಾ ! ಏನು ಮಾಡಲೀಗ ? ಆಗಲಿ, ತಿಳಿಯಿತು. ಎಲೈ ರಾಜರಿರಾ, ನೀವೊಬ್ಬೊಬ್ಬರೂ ಒಬ್ಬೊಬ್ಬ ಕೇಶವನನ್ನು ಕಟ್ಟಿ. ಏನಿದು ? ರಾಜರು ತಮ್ಮನ್ನು ತಾವೇ ಕಟ್ಟಿಕೊಂಡು ಕೆಳಗುರುಳುತ್ತಿದಾರೆ ! ಆಗಲಿ, ಎಲೋ ಮಾಯಗಾರ, ಆಗಲಿ ! ನನ್ನ ಬಿಲ್ಲಿನ ಬಾಯಿಂದ ಸುರಿದ ಸರಳುಗಳಿಂದ ನಿನ್ನ ಮೈ ಛಿದ್ರವಾಗುವುದು. ನೆತ್ತರು ಸೋರುವ ವ್ರಣಗಳಿಂದಲಂಕೃತವಾದ ನಿನ್ನ ದೇಹವನ್ನು ಪಾಂಡವರು ಕಂಡು, ಕಣ್ಣೀರು ತುಂಬಿ, ನಿಟ್ಟುಸಿರಿಟ್ಟು ನಿನ್ನನ್ನು ತಮ್ಮ ಶಿಬಿರಕ್ಕೊಯ್ಯುತ್ತಾರೆ. ನೋಡುತ್ತಿರು. (ಎಂದು ನಿಷ್ಕ್ರಮಿಸುವನು.)

ವಾಸುದೇವ—ಆಗಲಿ! ಪಾಂಡವರು ಮಾಡಬೇಕಾದುದನ್ನು ನಾನೇ ಮಾಡಿ ಮುಗಿಸಿಬಿಡುತ್ತೇನೆ. ಓ! ಸುದರ್ಶನ, ಬಾಯಿಲ್ಲಿ!

(ಸುದರ್ಶನನ ಪ್ರವೇಶ)

ಸುದರ್ಶನ—ಭಗವಂತನ ವಾಣಿಯನ್ನು ಕೇಳಿ ಅವನ ಅಪಾರ ಕೃಪಾ ಬಲದಿಂದ ಅಡ್ಡಿಯಾದ ಕಾರ್ಮೋಡಗಳನ್ನೆಲ್ಲಾ ಚದುರಿಸಿ ನಿರ್ಧಾವಿಸಿ ಬಂದಿದೇನೆ. ಕಮಲಾಯತಾಕ್ಷನು ಯಾರ ಮೇಲೆ ಕೋಪಗೊಂಡನೋ! ಯಾರ ನೆತ್ತಿಯ ಮೇಲೆ ನಾನೀಗ ಭೋರ್ಗರೆದೆರಗಬೇಕೋ! ಎಲ್ಲಿರುವನೋ ನಾರಾಯಣ ಭಗವಂತನು? ಅವ್ಯಕ್ತಕ್ಕೆ ಆದಿಸ್ವರೂಪನೂ, ಅಚಿಂತ್ಯಾತ್ಮನೂ ಆದ ಅವನು ಸದಾ ಲೋಕಸಂರಕ್ಷಣೋದ್ಯುಕ್ತನು. ಅವನು ಏಕೈಕನಾದರೂ ಹಲವು ದೇಹಗಳನ್ನು ಧರಿಸಿರುವ ಶ್ರೀಮಂತನು. ದ್ವೇಷಿಗಳ ಬಲವನ್ನು ನೆಲಸಮಗೊಳಿಸುವನು. (ಸುತ್ತಲೂ ನೋಡಿ) ಅರೇ, ಇದೋ ಭಗವಂತನು ಹಸ್ತಿನಾಪುರದ್ವಾರದಲ್ಲಿ ದೂತಕಾರ್ಯವನ್ನು ನಿರ್ವಹಿಸಿ ನಿಂತಿದಾನೆ. (ಎಂದು ಬಳಿಸಾರಿ) ಭಗವಂತ ನಾರಾಯಣನಿಗೆ ಜಯವಾಗಲಿ. (ನಮಸ್ಕರಿಸುವನು.)

ವಾಸುದೇವ—ಸುದರ್ಶನ, ಅಪ್ರತಿಹತ ಪರಾಕ್ರಮಶಾಲಿಯಾಗು.

ಸುದರ್ಶನ—ಅನುಗೃಹೀತನಾದೆ.

ವಾಸುದೇವ—ಒಳ್ಳೆಯದು. ನೀನು ಕೆಲಸವಿರುವ ಕಾಲಕ್ಕೆ ಸರಿಯಾಗಿ ಬಂದೆ.

ಸುದರ್ಶನ—ಏನು, ಏನದು ಕೆಲಸ? ಆಜ್ಞಾಪಿಸಬೇಕು, ಭಗವಂತನು ಆಜ್ಞಾಪಿಸಬೇಕು.

ವಾಸುದೇವ—ಅಯ್ಯಾ ಸುದರ್ಶನ, ಬಾಯಿಲ್ಲಿ; (ತೆರೆಯ ಕಡೆ ನೋಡಿ) ಎಲೋ ದುರ್ಯೋಧನ, ಸಾಗರವನ್ನಾಗಲಿ, ಅದರಾಚೆಗಿರುವ ಗಿರಿಕಂದರವನ್ನಾಗಲಿ, ವಾಯುಮಾರ್ಗವನ್ನು ಮೀರಿ ಗ್ರಹಗಳನ್ನಾಗಲಿ ಸಾರು—ಎಲೇ ಚಪಲಚಿತ್ತ, ನನ್ನ ಭುಜಬಲ ಸಂಗದಿಂದ ಸಂವರ್ಧಿತವೇಗವುಳ್ಳ ಈ ಚಕ್ರವೇ ನಿನಗೆ ಕಾಲಚಕ್ರವಾಗಲಿ.

ಸುದರ್ಶನ—ಎಲೋ ಸುಯೋಧನಹತಕ! (ಎಂದು ಮುನ್ನುಗ್ಗಿ ಮತ್ತೆ ನಿಂತು ಪುನರ್ವಿಚಾರಿಸಿ) ಇಲ್ಲ—ಪ್ರಸನ್ನನಾಗಬೇಕು, ಭಗವಂತ ನಾರಾಯಣನು ಪ್ರಸನ್ನನಾಗಬೇಕು. ಇವನೇ ಮೊದಲು ಸತ್ತನೆಂದರೆ, ಭೂಭಾರವನ್ನೆಲ್ಲ ತಗ್ಗಿ

ಸಲೆಂದು ಹುಟ್ಟಿರುವ ನಿನ್ನ ಶ್ರಮವೆಲ್ಲ ವ್ಯರ್ಥವಾಗುವುದು.

ವಾಸುದೇವ—ಸುದರ್ಶನ, ರೋಷದಲ್ಲಿ ಕಾರ್ಯಕ್ರಮವನ್ನು ಗಮನಿಸಲಿಲ್ಲ. ನೀನಿನ್ನು ನಿನ್ನ ಜಾಗಕ್ಕೆ ಹೋಗು.

ಸುದರ್ಶನ—ಭಗವಂತ ನಾರಾಯಣನ ಅಪ್ಪಣೆ. (ಎಂದು ಅಲ್ಲಿದ್ದವರನ್ನುದ್ದೇಶಿಸಿ) ಯಾವನೀ ಪುರುಷೋತ್ತಮನನ್ನು ಗೊಲ್ಲನೆಂದವನು? ಮೂರೇ ಹೆಜ್ಜೆಯಲ್ಲಿ ಮೂರು ಲೋಕವನ್ನೂ ಮೀರಿ ನಿಂತವನಲ್ಲವೇ ಈ ಮಹಾನುಭಾವನು ?! ನೀವೆಲ್ಲರೂ ಈ ಶರಣಾಗತವತ್ಸಲನಿಗೆ ಶರಣುಶರಣೆನ್ನಿರಿ. ನಾನಿನ್ನು ಹೋಗುತ್ತೇನೆ. (ಎಂದು ಅಕ್ಕಪಕ್ಕದಲ್ಲಿ ನೋಡುತ್ತಾನೆ. ನಾರಾಯಣನ ಶಾರ್ಙ್ಗಧನುಸ್ಸು, ಕೌಮೋದಕೀ ಗದೆ, ಪಾಂಚಜನ್ಯ ಶಂಖ, ನಂದಕ ಖಡ್ಗಗಳು ಪ್ರವೇಶಿಸುತ್ತವೆ. ಅವನ್ನು ಕುರಿತು) ಎಲೆಎಲೇ ಭಗವಂತ ನಾರಾಯಣನ ದಿವ್ಯಾಯುಧಗಳೇ, ಸ್ವಾಮಿಯ ರೋಷ ಪ್ರಶಾಂತವಾಯಿತು. ನೀವೆಲ್ಲ ಮತ್ತೆ ನಿಮ್ಮನಿಮ್ಮ ಜಾಗಕ್ಕೆ ಹೋಗಿ.(ಎಲ್ಲರೂ ನಿಷ್ಕ್ರಮಿಸುವರು.) ನಾನೂ ಹೋಗುತ್ತೇನೆ. (ಎನ್ನುವಷ್ಟರಲ್ಲೇ ಗರುಡನು ಪ್ರವೇಶಿಸುವನು.) ಓಹೋ ಗರುಡನೂ ಬಂದುಬಿಟ್ಟ. ಅಯ್ಯ, ಭಗವಂತನ ರೋಷ ಪ್ರಶಾಂತವಾಯಿತು. ಇನ್ನು ನಿನ್ನ ಬೀಡಿಗೆ ಹೋಗು. (ಗರುಡನು ನಿಷ್ಕ್ರಮಿಸುವನು.) ನಾನಿನ್ನು ಹೋಗುತ್ತೇನೆ. (ನಿಷ್ಕ್ರಮಿಸುವನು.)

ವಾಸುದೇವ—ಪಾಂಡವ ಶಿಬಿರಕ್ಕೆ ಹೊರಟೆ.

(ತೆರೆಯ ಮರೆಯಲ್ಲಿ)
ಬೇಡ, ಹೋಗಬೇಡ.

ವಾಸುದೇವ—ಅದೋ, ವೃದ್ಧರಾಜನ ಸ್ವರದಂತಿದೆ. ಎಲೆ ರಾಜ ಇದೋ ನಿಂತೆ. (ಧೃತರಾಷ್ಟ್ರನು ಪ್ರವೇಶಿಸುವನು.)

ಧೃತರಾಷ್ಟ್ರ—ಭಗವಂತ ನಾರಾಯಣನೆಲ್ಲಿ? ಆ ವಿಪ್ರಪ್ರಿಯ ಭಗವಂತನೆಲ್ಲಿ? ದೇವಕೀನಂದನ ಭಗವಂತನೆಲ್ಲಿ? (ಎಂದು ಬಳಿ ಬಂದ ಕೃಷ್ಣನನ್ನು ಸ್ಪರ್ಶಿಸಿ) ಎಲೆ ಶಾರ್ಙ್ಗಪಾಣಿ, ತ್ರಿದಶಾಧ್ಯಕ್ಷ, ನನ್ನ ಮಕ್ಕಳು ಮಾಡಿದ ಅಪರಾಧಕ್ಕಾಗಿ ಕ್ಷಮೆ ಬೇಡಿ, ನಿನ್ನ ಪಾದಗಳಲ್ಲೀಗ ನನ್ನ ತಲೆ ಬಾಗುತ್ತಿದೆ. (ಎಂದು ಕೃಷ್ಣನ ಕಾಲ್ಗಳ ಮೇಲೆ ಕುಸಿದು ಬೀಳುವನು.)

ವಾಸುದೇವ—ಏನನ್ಯಾಯ! ಪೂಜ್ಯನು ಕಾಲಿಗೆ ಬಿದ್ದನಲ್ಲಾ. ಎಳೆ-

ಎದ್ದೇಳಿ. (ಎಂದು ಹಿಡಿದೆತ್ತುವನು.)

ಧೃತರಾಷ್ಟ್ರ—ಅನುಗೃಹೀತನಾದೆ. ಇದೋ, ಅರ್ಘ್ಯಪಾದ್ಯಗಳನ್ನು ಸ್ವೀಕರಿಸಬೇಕು, ಭಗವಂತ.

ವಾಸುದೇವ—ಸರ್ವವನ್ನೂ ಸ್ವೀಕರಿಸುತ್ತೇನೆ. ನಿಮಗೆ ಮತ್ತಿನ್ನೇನು ಪ್ರಿಯವನ್ನು ಮಾಡಲಿ ?

ಧೃತರಾಷ್ಟ್ರ—ಭಗವಂತನು ಪ್ರಸನ್ನನಾದನೆಂದಮೇಲೆ ನನಗಿನ್ನೇನಾಗಬೇಕು ?!

ವಾಸುದೇವ—ತಾವು ಹೋಗಿ, ಮತ್ತೆ ನಿಮ್ಮನ್ನು ಬಂದು ನೋಡುತ್ತೇನೆ.

ಧೃತರಾಷ್ಟ್ರ—ಅಪ್ಪಣೆ, ಭಗವಂತ ನಾರಾಯಣನಪ್ಪಣೆ (ಎಂದು ನಿಷ್ಕ್ರಮಿಸುವನು. ನಾರಾಯಣನೂ ನಿಷ್ಕ್ರಮಿಸುವನು).

ದೂತ ಘಟೋತ್ಕಚ

(ಸ್ಥಾನ: ಕುರುಕ್ಷೇತ್ರದಲ್ಲಿ ಕೌರವರ ಯುದ್ಧಶಿಬಿರ. ಧೃತರಾಷ್ಟ್ರ, ಕಣ್ಣಿಗೆ ಬಟ್ಟೆ ಕಟ್ಟಿದ ಗಾಂಧಾರಿ, ದುಶ್ಶಲೆ, ಪ್ರತಿಹಾರಿಯರು ರಂಗದ ಮೇಲಿದ್ದಾರೆ.)

ದೂತ—(ಪ್ರವೇಶಿಸಿ) ವಿಜ್ಞಾನವಿಸ್ತಾರಿತ ವಿನಯಾಚಾರದೀರ್ಘ ಚಕ್ಷುಸ್ಸಿನ ಧೃತರಾಷ್ಟ್ರ ಪ್ರಭುಗಳಿಗೆ ಜಯವಾಗಲಿ. ಯೋಧ–ಸ್ಯಂದನ–ವಾಜಿ ವಾರಣ ಪರಿಪ್ಲುತ ಚತುರಂಗ ಸೇನೆಯನ್ನೆಲ್ಲ ಕ್ಷೋಭೆಗೊಳಿಸಿ ಅಭಿಮನ್ಯು ತನ್ನ ತಂದೆಯಾದ ಅರ್ಜುನನಷ್ಟು ಸಾಹಸವನ್ನು ತೋರಿದ. ಆದರೇನು! ನೂರಾರು ರಾಜರವನ ಮೇಲೆ ಒಮ್ಮೆಗೇ ನುಗ್ಗಿ ಅವನನ್ನು ಸುತ್ತುಗಟ್ಟಿ ಸ್ವರ್ಗಕ್ಕೇರಿಸಿಬಿಟ್ಟರು.

ಧೃತರಾಷ್ಟ್ರ—ಅಯ್ಯೋ! ಈ ಮಾತಾಡಿ ನನ್ನ ಕಿವಿಗಳನ್ನು ವ್ಯೆಲಿಗೆ ಮಾಡಿದವನಾರು? ನನಗೆ ಪ್ರಿಯವೆಂದು ಭಾವಿಸಿ ಈ ಅಪ್ರಿಯವಾರ್ತೆಯನ್ನು ಹೇಳುತ್ತಿರುವವನು ಯಾರವನು? ಶಿಶುವಧೆಯ ಪಾಪ ತಟ್ಟಿದ ನಮ್ಮ ವಂಶದ ಕ್ಷಯದ ವಿಷವಾರ್ತೆಯನ್ನು ನಿರ್ಭೀತಿಯಿಂದ ಘೋಷಿಸುತ್ತಿರುವ ಅವನು ಯಾರು?

ಗಾಂಧಾರಿ—ಈ ಕುಲಯುದ್ಧವು ಮಕ್ಕಳುಮರಿಗಳನ್ನೆಲ್ಲ ನುಂಗಿ ನೊಣೆದ ಹೊರತು ತಣ್ಣಗಾಗದೆಂಬುದು ಸ್ಪಷ್ಟ.

ಧೃತರಾಷ್ಟ್ರ—ಗಾಂಧಾರಿ, ಸ್ಪಷ್ಟವಾಗುವುದು; ನೋಡುತ್ತಿರು.

ಗಾಂಧಾರಿ—ಎಂದು, ಯಾವ ಘಳಿಗೆಯಲ್ಲಿ ಈ ಮಹಾಪ್ರಳಯವಾಗಿ ಬಿಡುವುದೋ ಎಂದು ಹೆದರುತ್ತಿದ್ದೇನೆ.

ಧೃತರಾಷ್ಟ್ರ—ಇಂದೇ, ಗಾಂಧಾರಿ. ಅಭಿಮನ್ಯುವಿನ ನಿಧನದಿಂದ ರೋಷಗೊಂಡ ಅರ್ಜುನನು ಗಾಂಡೀವವನ್ನು ಹಿಡಿದು ಜೇವೊಡೆದು ಸರ್ವನಾಶ ಮಾಡುತ್ತಾನೆ—ನೋಡುತ್ತಿರು; ಛಲತೊಟ್ಟ ಕೃಷ್ಣನು ರಥಾಶ್ವಗಳ ಕಡಿವಾಣವನ್ನು ಹಿಡಿದು ಬಾರುಗೋಲನ್ನು ಝಳಪಿಸುವುದೇ ತಡ! ಲೋಕವೆಲ್ಲ ನಾಶವಾಗಿ, ಶಾಂತಿ ಸ್ಥಾಪನೆಯಾಗುವುದು.

ಗಾಂಧಾರಿ—ವತ್ಸ ಅಭಿಮನ್ಯು, ಎಲ್ಲಿ ಹೋದೆಯಪ್ಪ?! ಪುರುಷ

ಕ್ಷಯಕಾರಕವಾದ ಈ ಹಾಳು ಕುಲಕಲಹದಲ್ಲಿ ನಿನ್ನ ಬಾಲಲೀಲೆ ಹೂಳಿ ಹೋಯ್ತೆ ? ಎಲ್ಲ ನಮ್ಮ ದುರದೃಷ್ಟ !

ದುಶ್ಶಲೆ—ಮುತ್ತೈದೆಯಾಗಿದ್ದ ಉತ್ತರೆಯ ವೈಧವ್ಯಕ್ಕೆ ಯಾವನು ಕಾರಣನೋ ಅವನು, ತನ್ನ ಹೆಂಡಿತಿಯನ್ನು ತಾನೇ ಮುಂಡೆ ಮಾಡಿದ.

ಧೃತರಾಷ್ಟ್ರ—ಈ ದುಃಖಸಾಗರಕ್ಕೂ ನಮಗೂ ಮಧ್ಯೆ ಸೇತುವೆ ಕಟ್ಟಿದವನಾರು ?

ಭಟ—(ಹೆದರಿ) ಮಹಾಸ್ವಾಮಿ, ನಾನು.

ಧೃತರಾಷ್ಟ—ನೀನು ಯಾರು ?

ಭಟ—ಮಹಾರಾಜ, ನಾನು ಜಯತ್ರಾತನಲ್ಲವೆ ?

ಧೃತರಾಷ್ಟ—ಓ ಜಯತ್ರಾತ, ಅಭಿಮನ್ಯುವನ್ನು ಕೊಂದು, ಬದುಕು ಬೇಡವಾದವನು ಯಾರು ? ಪಾಂಡವರೆಂಬ ಪಂಚಾಗ್ನಿಯವನನ್ನು ಸುಟ್ಟು ಬೂದಿ ಮಾಡದೆ ಬಿಡದು !

ಭಟ—ಮಹಾರಾಜ, ಅಭಿಮನ್ಯುವನ್ನು ಕೊಲ್ಲಲು ಬಹುಜನ ರಾಜರು ಸೇರಿಕೊಂಡಿದ್ದರು. ಅವರಲ್ಲೆಲ್ಲ ಮುಖ್ಯಪಾತ್ರ ಜಯದ್ರಥನದೇ ಇರಬಹು ದೆನ್ನುವರು.

ಧೃತರಾಷ್ಟ—ಅಯ್ಯೋ ! ಮುಖ್ಯಪಾತ್ರ ಜಯದ್ರಥನದಂತೇನು ?

ಭಟ—ಹೌದು, ಮಹಾರಾಜ !

ಧೃತರಾಷ್ಟ—ಅಯ್ಯೋ, ಜಯದ್ರಥನು ಸತ್ತ !

(ಅದನ್ನು ಕೇಳಿ ದುಶ್ಶಲೆಯು ರೋದಿಸುವಳು.)

ಧೃತರಾಷ್ಟ—ಯಾರು ಅಳುತ್ತಿರುವವಳು ?

ಪ್ರತೀಹಾರಿ—ಮಹಾರಾಜ, ರಾಜಕುಮಾರಿ ದುಶ್ಶಲೆ.

ಧೃತರಾಷ್ಟ—ಮಗಳೇ, ಸಾಕು; ಅಳಬೇಡ. ನೀನು ದೀರ್ಘಸುಮಂಗಲಿ ಯಾಗಿರುವುದು ನಿನ್ನ ಗಂಡನಿಗೆ ಬೇಡವಾಯ್ತು ! ಅವನು ಗಾಂಡೀವಿಯ ಬಾಣ ಗಳಿಗೆ ತನ್ನನ್ನು ತಾನೇ ಗುರಿಮಾಡಿಕೊಂಡ !

ದುಶ್ಶಲೆ—ಅಪ್ಪ, ನನಗೆ ಅಪ್ಪಣೆ ಕೊಡು; ನಾನು ಸೊಸೆಯಾದ ಉತ್ತರೆಯ ಹತ್ತಿರ ಹೋಗುತ್ತೇನೆ.

ಧೃತರಾಷ್ಟ್ರ—ಮಗಳೇ, ಹೋಗಿ ಹೇಳುವುದಾದರೂ ಏನಿದೆ ?

ದುಶ್ಶಲೆ—ಇಂದಿನಿಂದ ಮುಂದೆಯೆಂದೆಂದೂ ಅವಳಂತೆ ನಾನೂ ತಲೆಯ ಮೇಲೆ ಸೆರಗೆಳೆದುಕೊಳ್ಳುತ್ತೇನೆಂದು ಹೇಳುವೆನಪ್ಪ.

ಗಾಂಧಾರಿ–ಬಿಡಿತೆನ್ನು ಪುತ್ರಿ; ಬೇಡಮ್ಮ, ಅಮಂಗಳವನ್ನಾಡಬೇಡ. ನಿನ್ನ ಗಂಡನು ನೂರುಕಾಲ ಬಾಳಲಿ.

ದುಶ್ಶಲೆ—ನನಗಷ್ಟು ಅದೃಷ್ಟವೆಲ್ಲಿಯದಮ್ಮಾ? ಕೃಷ್ಣಪರಮಾತ್ಮನ ಸಹಾಯವಿರುವ ಧನಂಜಯನನ್ನು ಕೆಣಕಿ ಬದುಕಬಲ್ಲವರಾರು?!

ಧೃತರಾಷ್ಟ—ಪಾಪ, ದುಶ್ಶಲೆಯಾಡಿದ್ದು ನಿಜ! ಕೃಷ್ಣನ ಎಂಟು ತೋಳುಗಳನ್ನು ತಲೆಗಿಂಬು ಮಾಡಿ, ಅವನ ತೊಡೆಯ ಮೇಲೇ ಬೆಳೆದವನಲ್ಲವೇ ಅಭಿಮನ್ಯು?! ಪಾನಪ್ರಿಯ ಬಲರಾಮನಿಗೆ ಮತ್ತುಬರಿಸುವ ಎರಡನೆಯ ಮಧುಪೆಂಪರೆ—ಅಭಿಮನ್ಯುವಲ್ಲವೆ?! ದೇವೇಂದ್ರ ಸಮಧೀರರಾದ ಪಾಂಡವರಿಗೆ ಮುದ್ದುಮಗನವನಲ್ಲವೆ! ಅಂಥವನನ್ನು ಕೊಂದು ಯಾರು ತಾನೇ ಬಹುಕಾಲ ಬದುಕಿದ್ದಾರು? ಜಯತ್ರಾತ, ಆ ಅವಸ್ಥೆಯಲ್ಲಿದ್ದ ಮಗನನ್ನು ಕಂಡು ಅರ್ಜುನನೇನು ಮಾಡಿದ?

ಭಟ—ಮಹಾರಾಜ, ಅರ್ಜುನನೆದುರಿನಲ್ಲಿ ಈ ಕೃತ್ಯ ನಡೆಯಿತೆಂದು ಭಾವಿಸಿದಿರಾ?

ಧೃತರಾಷ್ಟ—ಏನು? ಹಾಗಾದರಾ ಸಮಯಕ್ಕೆ ಅರ್ಜುನನಲ್ಲಿರಲಿಲ್ಲವೇನು?

ಭಟ—ಇರಲಿಲ್ಲ, ಮಹಾಪ್ರಭು.

ಧೃತರಾಷ್ಟ—ಸಮಾಚಾರವೇನು?

ಭಟ—ಸಂಶಪ್ತಕರು ಹೂಡಿದ ಉಪಾಯದಿಂದ ಧನಂಜಯನು ಕೃಷ್ಣನನ್ನು ಕೂಡಿಕೊಂಡು ಅವರ ಬೆನ್ನಟ್ಟಿ ರಣರಂಗದಿಂದ ಬಹಳ ದೂರವಾಗಿದ್ದ. ಕುಮಾರ ಅಭಿಮನ್ಯು ತನ್ನ ಹುಡುಗುಹುಮ್ಮಸ್ಸಿನಿಂದ ಮುಂದಾಗುವ ಅಪಾಯವನ್ನರಿಯಲಾರದೆ ರಣರಂಗಕ್ಕೆ ದುಮ್ಮಿಕ್ಕಿದ.

ಧೃತರಾಷ್ಟ—ಪಾಪ! ಏಕಾಕಿಯಾದನನನ್ನು ಕೊಂದುಬಿಟ್ಟರೆ? ಅರ್ಜುನನಿಲ್ಲದಾಗ ಆ ರೀತಿ ಮುನ್ನುಗ್ಗಿದನೆಂದ ಮೇಲೆ ಅವನು ಹಾಗೆ ಕೊಲೆಯಾದನೆಂಬುದರಲ್ಲಿ ಆಶ್ಚರ್ಯವೇನು? ಯಾರಾದರೂ ಹುಲಿಯಿರುವ ಗವಿಗೆ ತಲೆಯಿಟ್ಟಾರೆ? ಈಗಲ್ಲಿ ಉಳಿದ ಪಾಂಡವರೇನು ಮಾಡುತ್ತಿದ್ದಾರೆ?

ಭಟ—ಶವವನ್ನಿನ್ನೂ ಚಿತೆಯ ಮೇಲಿಟ್ಟಿಲ್ಲ. ಅರ್ಜುನನಿಗೆ ಮುಖ ಸಿಕ್ಕಲೆಂದು ಕಾಯುತ್ತಿದ್ದಾರೆ. ಅಭಿಮನ್ಯುವಿನ ದೇಹಕ್ಕೆ ನಟ್ಟ ಬಾಣ ಗಳನ್ನು ನೋಡಿ, ನೋಡಿ—ಕೊಂದ ರಾಜರ ಹೆಸರುಗಳನ್ನು ಖಚಿತಗೊಳಿಸಿ ಕೊಳ್ಳುತ್ತಿರುವರು.

ಧೃತರಾಷ್ಟ—ಹಾಗಾದರೆ. ಬಾ ಗಾಂಧಾರಿ. ಗಂಗಾ ತೀರಕ್ಕೆ ಹೋಗೋಣ.

ಗಾಂಧಾರಿ—ಮಹಾರಾಜ, ಅಲ್ಲಿಗೆ ಹೋಗಿ ಸೂತಕಸ್ನಾನ ಮಾಡೋಣವೇ ?

ಧೃತರಾಷ್ಟ—ಅಲ್ಲ ಗಾಂಧಾರಿ, ತಾವು ಮಾಡಿದ ತಪ್ಪಿನಿಂದ ತಮ್ಮನ್ನು ತಾವೇ ಕೊಂದುಕೊಂಡ ನಿನ್ನ ಮಕ್ಕಳಿಗೆ ತರ್ಪಣ ಕೊಡೋಣ. ಏಕೆಂದರೆ ಸೂತಕಸ್ನಾನ ಮಾಡಿ, ಅಭಿಮನ್ಯುವಿಗೆ ತರ್ಪಣ ಕೊಡುವುದರಿಂದ ಪಾಂಡವರ ಪಾಳಯವು ನಿನ್ನ ಮಕ್ಕಳ ಮೇಲೆ ಬೀಳುವುದನ್ನು ತಡೆಯಲಾರೆಸಲ್ಲಾ !

(ದುರ್ಯೋಧನ, ದುಶ್ಶಾಸನ, ಶಕುನಿ ಪ್ರವೇಶಿಸುವರು. ಭಟನು ನಿಷ್ಕ್ರಮಿಸುವನು.)

ದುರ್ಯೋಧನ—(ಕಳ್ಳ ನಡಿಗೆಯಿಂದ ಸ್ವಲ್ಪ ಮುಂದುವರಿದು ಹಿಂದುಳಿದಿದ್ದ ದುಶ್ಶಾಸನ ಶಕುನಿಗಳನ್ನು ಕುರಿತು) ಮಾವ ದುಶ್ಶಾಸನ, ಬನ್ನಿ: ತಂದೆಗೆ ನಮಸ್ಕರಿಸೋಣ.

ಶಕುನಿ—ಅಪ್ಪ, ದುರ್ಯೋಧನ, ಬೇಡ. ಈ ಅಂತಃಕಲಹವೆಂದರೆ ನಿಮ್ಮಪ್ಪನಿಗಾಗದು. ಪಾಂಡವರ ಮೇಲವನಿಗೆ ಪ್ರೇಮ; ನಮ್ಮನ್ನು ಬೈಯು ತ್ತಾನೆ.

ದುರ್ಯೋಧನ—ಮಾವ, ಹಾಗಲ್ಲ. ಏನಾದರಾಗಲಿ, ಪೂಜ್ಯ ತಂದೆಗೆ ನಮಸ್ಕರಿಸೋಣ.

ಶಕುನಿ—ಆಗಲಿ. (ಇಬ್ಬರೂ ಜೊತೆಗೂಡುವರು.)

ದುರ್ಯೋಧನ—(ತಂದೆಯ ಬಳಿ ಸಾರಿ) ಅಪ್ಪಾಜಿ, ನಮಸ್ಕಾರ. ನಾನು ದುರ್ಯೋಧನ.

ದುಶ್ಶಾಸನ—(ಬಳಿ ಸಾರಿ) ಅಪ್ಪ, ನಮಸ್ಕಾರ; ನಾನು ದುಶ್ಶಾಸನ.

ಶಕುನಿ—ಭಾವ, ನಮಸ್ಕಾರ, ನಾನು ಶಕುನಿ.

ದುರ್ಯೋಧನ—(ಧೃತರಾಷ್ಟನನ್ನು ಕುರಿತು) ಅಪ್ಪಾಜಿ, ನೀವು ನಮಗಾ

ಶೀರ್ವಾದವನ್ನೇಕೆ ಮಾಡುತ್ತಿಲ್ಲ ? !

ಧೃತರಾಷ್ಟ್ರ—ಅಪ್ಪ, ಏನೆಂದು ಆಶೀರ್ವಾದ ಮಾಡಲಿ ! ಕೃಷ್ಣಾರ್ಜುನರಿಗೆ ಪ್ರಾಣಕ್ಕಿಂತಲೂ ಪ್ರಿಯನಾದ ಬಾಲಕ ಅಭಿಮನ್ಯುವನ್ನು ಕೊಂದೂ ಬಂದು, ಬದುಕುವ ಆಶೆಯನ್ನೇ ಬಿಟ್ಟವರಿಗೆ ಆಶೀರ್ವಾದವೇನಿದೆ ?

ದುರ್ಯೋಧನ—ಅಪ್ಪಾಜಿ, ಏತಕ್ಕಿಷ್ಟು ಉದ್ವೇಗ ?

ಧೃತರಾಷ್ಟ್ರ—ಉದ್ವೇಗವೇಕೆಂದೆಯಾ ? ಗಂಡುಮಕ್ಕಳೇ ತುಂಬಿದ ನಮ್ಮ ಮನೆತನದಲ್ಲಿ, ನೂರು ಗಂಡುಮಕ್ಕಳಿಗಿಂತ ಪ್ರಿಯಳಾದ ಒಬ್ಬ ಮಗಳು ಹುಟ್ಟಿದಳು. ನಿನ್ನ ಮತ್ತು ನಿನ್ನ ಬಳಗದ ಕೃಪೆಯಿಂದ ಇದ್ದೊಬ್ಬ ಮಗಳೂ ಮುಂಡಮೋಚಿಕೊಂಡಳಲ್ಲಾ ! ಅದಕ್ಕೆ ಉದ್ವೇಗ.

ದುರ್ಯೋಧನ—ಅಪ್ಪಾಜಿ, ಈಗ ಜಯದ್ರಥನಿಗೇನಾಗಿದೆ ?

ಧೃತರಾಷ್ಟ್ರ—ಪಾಂಡವರನ್ನು ತಡವಿದ ಗಂಡನು ಅವನೇ ಅಲ್ಲವೆ ?

ದುರ್ಯೋಧನ—ಆ ! ? ತಡವಿದವನೊಬ್ಬನೇ ಏನು ? ಇನ್ನೂ ಬಹಳ ಜನರಿದ್ದಾರೆ.

ಧೃತರಾಷ್ಟ್ರ—ಛೀ ! ನೀಚಕೆಲಸ ! ನಿರ್ದಯರು ನೂರಾರು ಜನ ಸೇರಿ ಹಸುಳೆಯನ್ನು ಹೊಡೆದು ಕೆಡವಿದರು ! ಇನ್ನೂ ಅವರ ಕೈಗಳು ಸೇದಿ ಹೋಗಲಿಲ್ಲವಲ್ಲಾ !

ದುರ್ಯೋಧನ—ಅಪ್ಪಾಜಿ, ವೃದ್ಧ ಭೀಷ್ಮನನ್ನು ಛಲದಿಂದ ಕೊಂದ ಅವರ ಕೈಗಳು ಸೇದಿ ಹೋದವೇ ? ನೋಡುವುದಕ್ಕೆ ಹಸುಳೆಯಂತಿದ್ದು, ಪರಾಕ್ರಮದಲ್ಲಿ ಹಸುಳೆಯಲ್ಲದ ಅಭಿಮನ್ಯುವನ್ನು ಕೊಂದ ಮಾತ್ರಕ್ಕೆ ನಮ್ಮ ಕೈ ಸೇದಿಹೋಗಬೇಕೋ ?

ಧೃತರಾಷ್ಟ್ರ—ಅಪ್ಪ, ಭೀಷ್ಮನನ್ನು ಬೀಳಿಸಿದ್ದು, ಅಭಿಮನ್ಯುವನ್ನು ಕೊಂದದ್ದು, ಎರಡೂ ಸಮವೇನು ?

ದುರ್ಯೋಧನ—ಅಪ್ಪಾಜಿ, ಅವೆರಡೂ ಹೇಗೆ ಸಮವಲ್ಲವೆನ್ನುವಿರಿ ?

ಧೃತರಾಷ್ಟ್ರ—ಅಲ್ಲವಯ್ಯ, ಭೀಷ್ಮನು ಬಾಳಿ ಬದುಕಿ ಕೃತಕೃತ್ಯನಾಗಿದ್ದವನು. ಮೇಲಾಗಿ ಸ್ವೇಚ್ಛಾಮರಣಿ. ತಾನು ಹೇಗೆ ಬೀಳುವೆನೆಂಬ ಉಪಾಯವನ್ನು ತಾನೇ ಹೇಳಿಕೊಟ್ಟು ಅದರಂತೆ ಸ್ವಬುದ್ಧಿಯಿಂದ ಬಿದ್ದವನು. ಪಾಪ! ಅಭಿಮನ್ಯುವಾದರೋ ಇನ್ನೂ ಬೆಳೆದು ಬಾಳಬೇಕಾದ ಬಾಲಕ, ಕುರುವಂಶದ

ಕುಡಿ, ಅರ್ಜುನನ ಚೊಚ್ಚಲು ಚಿಗುರು. ಅನ್ಯಾಯವಾಗಿ ಕತ್ತರಿಸಿಬಿಟ್ಟರಲ್ಲಾ!

ದುಶ್ಶಾಸನ—ಅಪ್ಪ, ಅಭಿಮನ್ಯುವನ್ನು ಬಾಲಕನೆಂದವರುಂಟೆ ? ಅವನು....

ಧೃತರಾಷ್ಟ್ರ—ಏನೇನು ? ಮಾತನಾಡುತ್ತಿರುವವನು ದುಶ್ಶಾಸನನೋ ?

ದುಶ್ಶಾಸನ—ಹೌದು. ನಾವೆಲ್ಲರೂ ನೋಡುತ್ತಿದ್ದಂತೆಯೇ ಅವನು ಬರಸಿಡಿಲಂಥ ಬಿಲ್ಲೊಂದನ್ನು ಚಕ್ಕನೆ ಕೈಗೆ ಸೆಳೆದುಕೊಂಡ; ರಾಜರೆಲ್ಲರ ಮೈಗಳೂ ತೂತಾದವು !

ಧೃತರಾಷ್ಟ್ರ—ಆಹ ! ಇನ್ನೂ ಹುಡುಗನಾದ ಅಭಿಮನ್ಯುವೇ ಅಷ್ಟು ಮಾಡಿದ್ದರೆ, ಅವನ ಸಾವಿನಿಂದ ಉದ್ರಿಕ್ತನಾದ ಅವರಪ್ಪ ಅರ್ಜುನನಿನ್ನೇನು ಮಾಡಬಹುದೋ ನೋಡಿಕೊ.

ದುರ್ಯೋಧನ— ಇನ್ನೇನು ಮಾಡಿಯಾನು ?!

ಧೃತರಾಷ್ಟ್ರ—ಏನು ಮಾಡುವನೆಂಬುದನ್ನು ಆಯುಷ್ಮಿದ್ದವರು ನೋಡುತ್ತೀರಿ.

ದುರ್ಯೋಧನ—ಅಪ್ಪ, ಆ ಅರ್ಜುನನೆಂಬುವನು ಯಾವನು ?

ಧೃತರಾಷ್ಟ್ರ—ಪುತ್ರ, ಅರ್ಜುನನು ಯಾರೆಂಬುದೂ ತಿಳಿಯದೆ ನಿನಗೆ ?

ದುರ್ಯೋಧನ—ತಿಳಿಯದು.

ಧೃತರಾಷ್ಟ್ರ—ಹಾಗಾದರೆ ನನಗೂ ತಿಳಿಯದು. ಆದರೆ ಅರ್ಜುನನ ಬಲ ವೀರ್ಯಗಳನ್ನು ಬಲ್ಲವರು ಇಂದ್ರ, ಹರ, ಅಗ್ನಿ, ಚಿತ್ರಾಂಗದ—ಇನ್ನೂ ಬಹಳ ಜನರಿದ್ದಾರೆ; ಅವರನ್ನು ಕೇಳು.

ಶಕುನಿ—ಹೀಗೆಲ್ಲ ನಮ್ಮನ್ನು ಅಲ್ಲಗಳೆಯಲು ನೀವಲ್ಲದೆ ಇನ್ನಾರು ಸಮರ್ಥರು ? !

ಧೃತರಾಷ್ಟ್ರ—ಶಕುನಿಯೋ ಮಾತನಾಡಿದವನು ! ? ಅಯ್ಯ ಶಕುನಿ, ಜೂಜುಕೋರನಾದ ನೀನು, ನಿನ್ನ ನಿರಂತರ ಕುತಂತ್ರದಿಂದ, ಈ ನಮ್ಮ ಮನೆತನದಲ್ಲಿ ಹೊತ್ತಿಸಿದ ವೈರಾಗ್ನಿಯು ಪ್ರಜ್ವಲಿಸಿ ಮಕ್ಕಳಿಗೂ ಹಬ್ಬುತ್ತಿದೆ.

(ದೂರದ ಪಾಂಡವ ಶಿಬಿರದಿಂದ ಶಂಖಪಟಹ ಸಿಂಹನಾದೋನ್ಮಿಶ್ರ ಘೋರಶಬ್ದವು ತೆರೆಯ ಮರೆಯಲ್ಲಿ ಕೇಳಬರುವುದು.)

ದುರ್ಯೋಧನ— (ತೆರೆಯ ಪಕ್ಕಕ್ಕೆ ನೋಡಿ) ಜಯತ್ರಾತಾ.

ಭಟ—(ಪ್ರವೇಶಿಸಿ) ಒಡೆಯನಿಗೆ ಜಯವಾಗಲಿ.

ದುರ್ಯೋಧನ—ಹೋಗಿ ಪಾಂಡವ ಶಿಬಿರದಲ್ಲಿ ಶಂಖಪಟಹ ಸಿಂಹನಾದ ಸಮ್ಮಿಶ್ರ ಶಬ್ದವೇಕಾಗುತ್ತಿರುವುದೋ ತಿಳಿದು ಬಾ ಹೋಗು.

ಭಟ—(ನಿಷ್ಕ್ರಮಿಸಿ ಪ್ರವೇಶಿಸಿ) ಸಂಶಪ್ತಕರನ್ನು ಬೆನ್ನಟ್ಟಿ ಹೋಗಿ ಹಿಂತಿರುಗಿದ ಧನಂಜಯನು, ಸತ್ತ ಮಗನನ್ನು ನೋಡಿ, ತೊಡೆಯ ಮೇಲೆ ಹಾಕಿಕೊಂಡು ಕಣ್ಣೀರು ಕರೆಯುತ್ತಿದ್ದಾಗ, ಕೃಷ್ಣನು ಬಂದು ಹುರಿದುಂಬಿಸಲು ಆ ಅರ್ಜುನನೆದ್ದು ಪ್ರತಿಜ್ಞೆ ಮಾಡಿದ ; ಅದರ ಆರ್ಭಟವಿದು !

ದುರ್ಯೋಧನ—ಏನು, ಏನಾ ಪ್ರತಿಜ್ಞೆ ?

ಭಟ—"ನನ್ನ ಮಗನನ್ನು ಕೊಂದವರನ್ನೂ, ಅದನ್ನು ಕಂಡು ಆನಂದಪಟ್ಟವರನ್ನೂ ನಾಳೆ ಸೂರ್ಯ ಮುಳುಗುವುದರೊಳಗಾಗಿ ಕೊಲ್ಲುತ್ತೇನೆ"—ಎಂದು.

ದುರ್ಯೋಧನ—ಕೊಲ್ಲದಿದ್ದರೆ ?

ಭಟ—ಗಾಂಡೀವಸಹಿತನಾಗಿ ಚಿತಾರೋಹಣ ಮಾಡುವನಂತೆ.

ದುರ್ಯೋಧನ—ಮಾವ, ಚಿತಾರೋಹಣವಂತೆ, ಚಿತಾರೋಹಣ ! ದುಶ್ಶಾಸನ, ಚಿತಾರೋಹಣವಪ್ಪ, ಚಿತಾರೋಹಣ ! ಹಾಗಾದರೆ ಅವನ ಪ್ರತಿಜ್ಞೆ ಭಂಗವಾಗುವಂತೆ ಪ್ರಯತ್ನ ಮಾಡೋಣ.

ಧೃತರಾಷ್ಟ್ರ—ಮಗನೇ, ಏನು ಪ್ರಯತ್ನ ಮಾಡುವೆಯಪ್ಪ ?

ದುರ್ಯೋಧನ—ನನ್ನ ಹಲವು ಅಕ್ಷೌಹಿಣೀ ಸೈನ್ಯದ ಮಧ್ಯೆ ಜಯದ್ರಥನನ್ನು ಕಾಣದಂತಿಡುತ್ತೇನೆ.

(ಘಟೋತ್ಕಚನು ಪ್ರವೇಶಿಸುವನು.)

ಘಟೋತ್ಕಚ—(ಸ್ವಗತ) ಇವರಿಗೆ ನನ್ನನ್ನು ನಾನೇ ಪರಿಚಯಮಾಡಿಕೊಡುತ್ತೇನೆ. (ಪ್ರಕಾಶ) ಹಿಡಿಂಬೆಯ ಮಗ ಘಟೋತ್ಕಚ ನಾನು. ಶ್ರೀಕೃಷ್ಣನ ವಚನವನ್ನು ತಂದಿದ್ದೇನೆ. ತನ್ನ ಮಕ್ಕಳು ಮಾಡಿದ ಪಾಪದಿಂದ ತಾನು ಶತ್ರುವೆನಿಸಿಕೊಂಡ ಆ ತಾತನೆಲ್ಲಿ ? ನಾನು ಆ ಪೂಜ್ಯನನ್ನು ನೋಡಬೇಕಾಗಿದೆ.

ದುರ್ಯೋಧನ—(ಮುಂದೆ ಬಂದು) ಬಾ ಬಾ, ಶತ್ರುಗಳ ಮನೆಯನ್ನು ಪ್ರವೇಶಿಸು. ನೀನು ತಂದಿರುವ ಕೃಷ್ಣನ ದುರಹಂಕಾರದ ವಚನವೇನದು

ಹೇಳು. ನನಗೆ ಕೇಳಲು ಬಹಳ ಕುತೂಹಲ. ಇದ್ದೋ, ನಾನು ದುರ್ಯೋಧನ, ಬಂದಿದ್ದೇನೆ.

ಘಟೋತ್ಕಚ—(ದುರ್ಯೋಧನನನ್ನು ಗಮನಿಸದೆ ಧೃತರಾಷ್ಟ್ರನ ಕಡೆ ನೋಡಿ) ಇದ್ದೋ ಪೂಜ್ಯ ಧೃತರಾಷ್ಟ್ರನಿಲ್ಲಿದ್ದಾನೆ ! ಎಂತಹ ಲಲಿತ ಗಂಭೀರಾಕೃತಿ ! ಈ ಪುಣ್ಯಾತ್ಮನ ಹೊಟ್ಟೆಯಲ್ಲಿ ಅನಾರ್ಯರು ನೂರು ಜನ ಹುಟ್ಟಿದರೆ ? ಪಾಪ ! (ಬಳಿ ಸಾರಿ ಕೈಮುಗಿದು) ಅಜ್ಜ, ಘಟೋತ್ಕ....(ಎಂದರ್ಧದಲ್ಲೇ ನಿಲ್ಲಿಸಿ ಸ್ವಗತ) ಇದು ಕ್ರಮವಲ್ಲ. (ಪ್ರಕಾಶ) ಧರ್ಮರಾಯ ಮುಂತಾದ ನನ್ನ ತಂದೆಗಳು ತಮಗೆ ನಮಸ್ಕಾರಗಳನ್ನು ಹೇಳಿ ಕಳಿಸಿದಾರೆ. ಅಜ್ಜ, ಘಟೋತ್ಕಚನಾದ ನಾನು ನಮಸ್ಕರಿಸುತ್ತಿದ್ದೇನೆ.

ಧೃತರಾಷ್ಟ್ರ—ಬಾ, ಮರಿ, ಬಾ. ತಮ್ಮನ ಸಾವಿನಿಂದ ನಿನಗೆ ವ್ಯಥೆಯಾಗಿದೆಯೆಂಬುದನ್ನು ಬಲ್ಲೆ; ನನಗೂ ಅಷ್ಟೇ ದುಃಖವಾಗಿದೆ. ಅಯ್ಯೋ ! ನನ್ನ ಮಕ್ಕಳ ಅಲ್ಲದಾಟದಿಂದ ನಾನು ಹಗುರವಾದೆ.

ಘಟೋತ್ಕಚ—ಅಜ್ಜ, ತಾವು ಘನವಂತರಲ್ಲವೇ ! ಘನವಂತರ ಮಂತ್ರದಲ್ಲಿ ಬಂದ ತಮಗೆ ಶ್ರೀಕೃಷ್ಣಭಗವಂತನು ಒಂದು ಮಾತನ್ನು ಹೇಳಿ ಕಳಿಸಿದ್ದಾನೆ.

ಧೃತರಾಷ್ಟ್ರ—(ಸಿಂಹಾಸನದಿಂದ ಎದ್ದು) ಆಹ ! ಆ ಶ್ರೀಕೃಷ್ಣ ಭಗವಂತನ ಆಜ್ಞಾಪನೆಯೇನು ?

ಘಟೋತ್ಕಚ—ಬೇಡಿ ಅಜ್ಜ, ನಿಲ್ಲಬೇಡಿ. ಕುಳಿತುಕೊಳ್ಳಿ. ಜನಾರ್ದನನ ಸಂದೇಶವನ್ನು ಹೇಳುತ್ತೇನೆ; ನೀವು ಕುಳಿತುಕೊಂಡೇ ಜನಾರ್ದನನ ಸಂದೇಶವನ್ನು ಕೇಳಬೇಕಂತೆ.

ಧೃತರಾಷ್ಟ್ರ—ಚಕ್ರಾಯುಧನ ಅಪ್ಪಣೆಯಂತಾಗಲಿ. (ಕುಳಿತುಕೊಳ್ಳುವನು.)

ಘಟೋತ್ಕಚ—ಕೃಷ್ಣಸಂದೇಶವನ್ನು ಕೇಳಜ್ಜ—"ಹಾ! ವತ್ಸ, ಅಭಿಮನ್ಯು! ಹಾ ವತ್ಸ, ಕುರುಕುಲಪ್ರದೀಪ! ಹಾ ವತ್ಸ, ಯದುಕುಲಪ್ರವಾಲ! ನಿನ್ನ ಹೆತ್ತಬ್ಬೆಯನ್ನೂ, ಮಾವನಾದ ಕೃಷ್ಣನನ್ನೂ, ನನ್ನನ್ನೂ ಪರಿತ್ಯಜಿಸಿ ನಿಮ್ಮಜ್ಜ ಇಂದ್ರನನ್ನು ನೋಡುವಾಶೆಯಿಂದ ಸ್ವರ್ಗಕ್ಕೆ ಸಂದೆಯಾ?" ಅಜ್ಜ, ಮಗನೊಬ್ಬನು ಸತ್ತುದರಿಂದ ಅರ್ಜುನನಿಗೀ ಅವಸ್ಥೆ

ಯಾದರೆ ನಾಳೆ ನಿನ್ನ ನೂರು ಮಕ್ಕಳೂ ಸತ್ತಾಗ ನಿನಗಿನ್ನೆಷ್ಟು ದುಃಖ ವಾಗುವುದೋ!? ಆದ್ದರಿಂದ ಈಗಲೇ ಬೇಗ ಆತ್ಮಬಲವನ್ನೆಲ್ಲ ಒಟ್ಟು ಗೂಡಿಸಿಕೋ. ಇಲ್ಲದಿದ್ದರೆ ಪುತ್ರಶೋಕದಿಂದೆದ್ದ ಬೆಂಕಿ ನಿನ್ನ ಪ್ರಾಣವೆಂಬ ಹವಿಸ್ಸನ್ನು ಆಹುತಿಗೊಂಡೀತು!" ಎಂಬುದೇ ಕೃಷ್ಣನ ಸಂದೇಶ.

ಧೃತರಾಷ್ಟ್ರ—ಕ್ರೋಧವ್ಯವಸಾಯದಿಂದ ಕೃಷ್ಣನಿದನ್ನು ಹೇಳಿದಾನೆ. ಕ್ಷತ್ರಿಯರನ್ನೆಲ್ಲ ಕೊಲ್ಲಲು ಗಾಂಡೀವವನ್ನು ಧರಿಸಿ ನಿಂತ ಅರ್ಜುನನು ನನ್ನ ಕಣ್ಣಿಗೀಗ ಕಟ್ಟಿದಂತಿದೆ.

ದುರ್ಯೋಧನ—ಈ ಮಾತನ್ನು ಕೇಳಿ ನನಗೆ ನಗು ಬರುತ್ತಿದೆ.

ಘಟೋತ್ಕಚ—ನಿನಗೆ ನಗು ಬರುತ್ತಿದೆಯೋ?

ದುರ್ಯೋಧನ—ಅಷ್ಟಲ್ಲದೆ ಮತ್ತೇನು? 'ಪಾರ್ಥನೊಬ್ಬನೇ ರಾಜರನ್ನೆಲ್ಲ ಕೊಲ್ಲುವ'ನೆಂದು ಮತ್ಸರಗ್ರಸ್ತನಾದ ಕೃಷ್ಣನು ಭಾವಿಸಬೇಕಾದರೆ ಅವನು ಮೂರ್ಖರೊಡನೆಯೇ ಆಲೋಚಿಸಿರಬೇಕು.

ಘಟೋತ್ಕಚ—ಕಳಿಸಿರುವವನು ಚಕ್ರಪಾಣಿ, ಹೇಳುತ್ತಿರುವವನು ನಾನು, ಹಾಗೂ ನಿನಗೆ ನಗು ಬರುತ್ತಿದೆಯೋ? ಅರ್ಜುನನ ಈ ವಿಚಾರವನ್ನು ಹೇಳಿದ್ದು ನೀನು ಕೇಳಲೆಂದೇ. ನಿನಗೂ ಕೃಷ್ಣನ ಸಂದೇಶವೊಂದಿದೆ ಕೇಳು.

ದುಶ್ಶಾಸನ—ಛೀ, ಮುಚ್ಚು ಬಾಯಿ; ಕ್ಷತ್ರಿಯರಿಗೆ ಅವಮಾನ ಮಾಡುತ್ತೀಯಾ? ಯಾವನ ಆಜ್ಞೆಯನ್ನು ಪ್ರಪಂಚದ ರಾಜರೆಲ್ಲರೂ ಶಿರಸಾವಹಿಸುವರೋ, ಆ ಮಹಾರಾಜನ ಸನ್ನಿಧಿಯಲ್ಲಿ ಇನ್ನೊಬ್ಬರ ಸಂದೇಶವೇ ಸಾಕು!

ಘಟೋತ್ಕಚ—ಓಹೋ, ಮಾತನಾಡುವವನು ದುಶ್ಶಾಸನನೋ? ಅರೇ ದುಶ್ಶಾಸನ, ಚಕ್ರಾಯುಧನು ನಿನಗೆ ಇನ್ನೊಬ್ಬನಾಗಿಬಿಟ್ಟನೊ?! ಅವನು ನಿನಗೆ ರಾಜನಲ್ಲವೋ? ಸರಿ!

ದುರ್ಯೋಧನ—ದುಶ್ಶಾಸನ, ಅವನೊಡನೆ ವೃಥಾ ಚರ್ಚೆಯೇಕೆ? ಸುಮ್ಮನಿರು. ಅವನು ರಾಜನೋ ಅಲ್ಲವೋ, ಅವನು ಬಲಶಾಲಿಯೋ ಅಥವಾ ಬಲಹೀನನೋ! ಮಾತಿನಿಂದೇನು ಪ್ರಯೋಜನ? (ಘಟೋತ್ಕಚನನ್ನು ಕುರಿತು) ಏನು ಹೇಳಿದನಯ್ಯ ನಿಮ್ಮ ಪ್ರಭು?

ಘಟೋತ್ಕಚ—ಪ್ರಭುವೇ ಹೌದು! ಲೋಕತ್ರಯಕ್ಕೂ ಒಡೆಯನಾದ

ಭಗವಾನ್ ಚಕ್ರಾಯುಧನು ಪ್ರಭುವಲ್ಲದೆ ಮತ್ತೇನು ? ನಮಗೆ ಆತನು ವಿಶೇಷವಾಗಿ ಪ್ರಭುವೇ. ನಿನಗವನ ಸಂದೇಶವಿದೋ ಕೇಳು: "ಕ್ಷತ್ರಿಯರ ವಿನಾಶವು ಸನ್ನಿಹಿತವಾಯಿತೆಂದು ತಿಳಿ, ನಿಮ್ಮ ನೂರ್ವರ ಸಾವಿನಿಂದ ಭೂಮಿಯ ಭಾರ ತಗ್ಗುವುದು. ಪುತ್ರಶೋಕೋದ್ರಿಕ್ತನಾದ ಅರ್ಜುನನು ಉಗ್ರಾಸ್ತ್ರಗಳನ್ನೆಸೆಯುತ್ತ ರಣರಂಗದ ಮುಂಚೂಣಿಯಲ್ಲಿ ನಿಂತನೆಂದರೆ ಅವನಿಗಸಾಧ್ಯವಾದುದೇನಿದೆ ?"

ಶಕುನಿ—ಕೇವಲ ಮಾತಿನಿಂದಲೇ ಗೆಲ್ಲುವುದು ಸಾಧ್ಯವಿದ್ದರೆ ಈ ಭೂಮಿಯನ್ನು ಗೆದ್ದಂತೆಯೇ ! ಮಾತು, ಮಾತು ! ಬರಿಯ ಮಾತೇ ಸಾಕಾದರೆ ಸರ್ವಕ್ಷತ್ರಿಯರನ್ನೂ ಸಾಯಿಸಿದಂತೆಯೇ !

ಘಟೋತ್ಕಚ—ಈಗ ಮಾತನಾಡುವವನು ಶಕುನಿಯೋ ? ಅಯ್ಯ ಶಕುನಿ, ಎಸೆಯುತ್ತ ನಿನ್ನ ದಾಳಗಳನ್ನು. ಬಾಣಗಳಿಗೆ ಯೋಗ್ಯವಾದ ಮತ್ತು ಸಮರಕ್ಕನುರೂಪವಾದ ಹಾಸಂಗಿಯನ್ನು, ಬಾ, ಹರಡು. ಅಲ್ಲಿ ರಣರಂಗದಲ್ಲಿ ಕದಿಯಲು ಹೆಂಗಸರಿಲ್ಲ, ಆಕ್ರಮಿಸಲು ಸಿಂಹಾಸನವಿಲ್ಲ; ಪ್ರಾಣಗಳೇ ಪಣ. ಬಾಣಗಳೊಡನೆ ಚಲ್ಲಾಟ !

ದುರ್ಯೋಧನ—ಹೋ ! ಹೋ ! ನಿನ್ನ ಬಣ್ಣ ಬದಲಾಯಿತು. ನಮ್ಮನ್ನು ಬೆದರಿಸಿ, ಮರ್ಯಾದೆಯನ್ನು ಕಡೆಗಣಿಸಿ, ನಾಲಗೆಯನ್ನು ನಿಡಿದು ಮಾಡಿ ನುಡಿದು, ಏನನ್ನೂ ಲೆಕ್ಕಕ್ಕೆ ತಾರದಿರುವೆ ! ನಿನ್ನ ತಾಯ ಕಡೆಯಿಂದ ಉಗ್ರರೂಪ ಬಂದಿದೆಯೆಂಬ ದರ್ಪ ನಿನಗಿದ್ದರೆ, ರಾಕ್ಷಸೋಗ್ರ ಸ್ವಭಾವದಿಂದ ನಾವೂ ಅಷ್ಟೇ ಕ್ರೂರರೆಂದು ತಿಳಿ.

ಘಟೋತ್ಕಚ—(ಕಿವಿಮುಚ್ಚಿ) ಶಾಂತಂ ಪಾಪಂ ! ರಾಕ್ಷಸರು ನಿಮ್ಮಷ್ಟು ಕ್ರೂರರಲ್ಲ. ಅರಗಿನ ಮನೆಯಲ್ಲಿ ಮಲಗಿ ನಿದ್ರಿಸುವ ಸಹೋದರರಿಗೆಂದಿಗೂ ಬೆಂಕಿ ಹಚ್ಚುವುದಿಲ್ಲ ರಾಕ್ಷಸರು; ಅಣ್ಣನ ಹೆಂಡತಿಯನ್ನೆಂದಿಗೂ ಹಾಗೆ ಮುಂದಲೆ ಹಿಡಿದೆಳೆದಾಡರು ರಾಕ್ಷಸರು ! ಯುದ್ಧದಲ್ಲಿ ಮಗನನ್ನು ಕೊಲ್ಲುವ ಮಹಾ ಪಾಪವನ್ನು ರಾಕ್ಷಸರು ಸ್ಮರಿಸಲೂ ಅರರು ! ಅವರ ಆಕಾರ ಆಚಾರಗಳು ವಿಕೃತವಾಗಿದ್ದರೂ ದಯಾಶೀಲರವರು; ನಿಮ್ಮಂತಹ ಭ್ರಷ್ಟರಲ್ಲ !

ದುರ್ಯೋಧನ—ನೀನು ಬಂದಿರುವುದು ದೂತನಾಗಿ, ಯುದ್ಧ ಮಾಡುವುದಕ್ಕಲ್ಲ ! ತಿಳಿಯಿತೋ ? ನೀನು ತಂದ ಸಂದೇಶವನ್ನು ಹಿಂತೆಗೆದು

ಕೊಂಡು ತೊಲಗು. ನಾವು ದೂತಘಾತುಕರಲ್ಲ!

ಘಟೋತ್ಕಚ—(ರೋಷಾವಿಷ್ಟನಾಗಿ) ದೂತನೆಂದು ನನ್ನನ್ನು ಹೀಯಾಳಿಸುತ್ತೀಯಾ? ಬಾ ಹಾಗಾದರೆ, ನಾನು ದೂತನೇ ಅಲ್ಲ. ಬನ್ನಿ ಮತ್ತೆ, ನೀವೆಲ್ಲ ಒಟ್ಟಾಗಿ ನನ್ನ ಮೇಲೆ ಬಿದ್ದು ಘಾತಿಸಿರಿ, ನೋಡೋಣ! ಬಿಲ್ಲಿನ ಹಗ್ಗ ಹಿಡಿದುದರಿಂದ ದಿಕ್ಕು ತಪ್ಪಿದ ಅಭಿಮನ್ಯುವೆಂದು ತಿಳಿದಿರೋ ನನ್ನ? ತುಟಿಗಚ್ಚಿ ಮುಷ್ಟಿಯನ್ನೆತ್ತಿ ನಿಂತಿದಾನೆ ಘಟೋತ್ಕಚ! ಗಂಡುಸಾದವನೆದ್ದು ಬರಲಿ, ಯಮನೂರಿಗೆ ದಾರಿ ತೋರಿಸುತ್ತೇನೆ.

(ಧೃತರಾಷ್ಟ್ರ ಗಾಂಧಾರಿಯರ ಹೊರತು ಎಲ್ಲರೂ ಎದ್ದು ನಿಲ್ಲುವರು.)

ಧೃತರಾಷ್ಟ್ರ—ಮಗು, ಘಟೋತ್ಕಚ, ತಡೆ, ತಡೆಯಪ್ಪ. ನಾನು ಹೇಳುವ ಮಾತನ್ನು ಕೇಳು.

ಘಟೋತ್ಕಚ—ಆಗಲಿ ಅಜ್ಜ, ತಮ್ಮ ಅಪ್ಪಣೆಯಂತಾಗಲಿ. ನಾನು ಮತ್ತೆ ದೂತನಾದೆ. ಆದರೂ ಉಕ್ಕಿಬರುತ್ತಿರುವ ಕೋಪವನ್ನು ತಡೆಯಲಾರೆನಜ್ಜ! ಅಜ್ಜ, ಈಗ ಏನುತ್ತರವನ್ನು ಹೇಳಿ ನನ್ನನ್ನು ಕಳಿಸಿಕೊಡ್ತೀರ?

ದುರ್ಯೋಧನ—ಏ! ಯಾರನ್ನು ಕೇಳುತ್ತೀಯೋ?! ನಾನು ಹೇಳಿದೆನೆಂದು ಆ ಕೃಷ್ಣನಿಗೆ ಹೀಗೆ ಹೇಳು: "ವ್ಯರ್ಥವಾಗಿ ಬಹಳ ಮಾತನ್ನು ಏಕಾಡುತ್ತೀ? ನಿನ್ನ ಪೌರುಷದ ಮಾತುಗಳಿಂದ ನಾವು ಸೋಲುವುದಿಲ್ಲ. ನೀನು ನಮಗೆ ಯುದ್ಧಾಹ್ವಾನವನ್ನು ಕೊಡುವುದಾದರೆ ನಿನಗೆ ನಾವು ಕಳಿಸಬೇಕಾದುದು ಮಾತನ್ನಲ್ಲ! ನೂರಾರು ಜನ ರಾಜರ ಶ್ವೇತಚ್ಛತ್ರಾವಲೀಪರಿವೃತನಾಗಿ ಇದೋ ಈಗಲೇ ಬಂದೆ; ನೀನು ಪಾಂಡವರನ್ನು ಕೂಡಿಕೊಂಡು ಬಾ, ಯುದ್ಧಭೂಮಿಯಲ್ಲಿ ನಿಲ್ಲು. ಅಲ್ಲಿ ನಿನಗೆ ಬಾಣಗಳೊಡನೆ ಉತ್ತರವನ್ನು ಕಳಿಸಿಕೊಡುತ್ತೇನೆ."—ಎಂದು.

ಘಟೋತ್ಕಚ—ಉ! (ಧೃತರಾಷ್ಟ್ರನ ಕಡೆ ತಿರುಗಿ) ಅಜ್ಜ, ಇದೋ ಹೋಗುತ್ತೇನೆ.

ಧೃತರಾಷ್ಟ್ರ—ಮಗು ಹೋಗಿಬಾರಪ್ಪ.

ಘಟೋತ್ಕಚ—ಎಲೆ ಎಲೇ ರಾಜರಿರಾ, ಜನಾರ್ದನನ ಕಟ್ಟಕಡೆಯ ಸಂದೇಶವನ್ನು ಕೇಳಿ. ಧರ್ಮವನ್ನಾಚರಿಸಿ ಸ್ವಜನರಲ್ಲಿ ಪ್ರೇಮವಿಡಿ. ಇಲ್ಲದಿದ್ದರೆ ನಿಮ್ಮ ಆಕಾಂಕ್ಷೆಗಳನ್ನೆಲ್ಲಾ ಇಲ್ಲೇ ಈಗಲೇ ಪೂರೈಸಿಕೊಂಡುಬಿಡಿ.

ಸೂರ್ಯ ಹುಟ್ಟುವುದೇ ತಡ ನಿನುಗೆ ಮೃತ್ಯುವು ಪಾಂಡವರೂಪವನ್ನು ಧರಿಸಿ ಬಂದು ನಿನುಗೆಲ್ಲ ಸತ್ಯವೇನೆಂಬುದನ್ನು ತೋರಿಸಿಕೊಡುತ್ತದೆ. (ಎಂದು ನಿಷ್ಕ್ರಮಿಸುವನು.)

ಕರ್ಣಭಾರ

ಭಟ—(ಪ್ರವೇಶಿಸಿ) ಹೋ! ಹೋ! ತಿಳಿಸಿ, ಹೋಗಿ, ಯುದ್ಧಕಾಲ ಸಮೀಪಿಸಿದೆಯೆಂದು ಮಹಾರಾಜ ಅಂಗೇಶ್ವರನಿಗೆ ತಿಳಿಸಿ. (ಪರಿಕ್ರಮಿಸಿ ನೋಡಿ) ಇದೋ, ಅಂಗರಾಜನಾದ ಕರ್ಣನು ಯುದ್ಧಕವಚವನ್ನು ತೊಟ್ಟು, ಶಲ್ಯರಾಜನೊಡನೆ ತನ್ನ ಮನೆಯಿಂದ ಹೊರಟು ಇತ್ತಕಡೆಯೇ ಬರುತ್ತಿದಾನೆ. ಯುದ್ಧೋತ್ಸವದಲ್ಲಿ ಪ್ರಮುಖನೂ, ಶೌರ್ಯದಿಂದ ಮೆರೆದವರಲ್ಲಿ ಅಭೂತಪೂರ್ವನೂ ಆದೀತನಿಗದೇನು ಹೃದಯಪರಿತಾಪವಿದ್ದೀತು?! ಶೂರನೂ ಧೀಮಂತನೂ ಆದಿವನು ಶೋಕಾಕ್ರಾಂತನಾಗಿರುವನಾದರೂ ಮಳೆಗಾಲ ಬಂದಾಗ ಮೇಘರಾಶಿಯಲ್ಲಿ ಮರೆಯಾದರೇನು, ಸಹಜ ತೇಜಸ್ವಿಯಾಗಿರುವ ಸೂರ್ಯನಂತೆ ಕಂಗೊಳಿಸುತ್ತಿದ್ದಾನೆ. ಆಗಲಿ, ನಾನು ಮರೆಯಾಗಿ ಹೋಗುತ್ತೇನೆ. (ನಿಷ್ಕ್ರಮಿಸುವನು.)

(ಪೂರ್ವನಿರ್ದಿಷ್ಟ ರೀತಿಯಲ್ಲಿ ಕರ್ಣನೂ ಶಲ್ಯನೂ ರಥಸಹಿತವಾಗಿ ಪ್ರವೇಶಿಸುವರು.)

ಕರ್ಣ—ನನ್ನ ಬಾಣಕ್ಕೆ ಗುರಿಯಾದ ರಾಜರೊಬ್ಬರೂ ಜೀವಸಹಿತ ಉಳಿದು ಹೋಗಲಿಲ್ಲ. ಇಂದು ಧನಂಜಯನು ನನ್ನ ಕಣ್ಣಿಗೆ ಬಿದ್ದದ್ದೇ ಆದರೆ, ಕೌರವರಿಗೆ ರಣದ ಮುಂಚೂಣಿಯಲ್ಲಿ ಪ್ರಿಯವನ್ನುಂಟುಮಾಡಬೇಕೆಂದಿದ್ದೇನೆ. ಶಲ್ಯರಾಜ, ಅರ್ಜುನನೆಲ್ಲಿರುವನೋ ಅಲ್ಲಿಗೆ ನನ್ನ ರಥವನ್ನು ನಡೆಸು.

ಶಲ್ಯ—ಆಗಲಿ.

ಕರ್ಣ—(ಸ್ವಗತ) ಒಬ್ಬರಿಗೊಬ್ಬರು ಪ್ರಯೋಗಿಸಿದ ಶಸ್ತ್ರಗಳೇಟಿನಿಂದ ಕತ್ತರಿಸಿ ಬಿದ್ದ ಯೋಧ-ಕುದುರೆ-ಆನೆ-ರಥಗಳಿಂದ ತುಂಬಿದ ಮಹಾ ಯುದ್ಧಗಳಲ್ಲಿ ಕೆರಳಿದ ಕಾಲಪುರುಷನಿಗೆ ಸಮಪರಾಕ್ರಮಿಯಾದ ನನಗೆ, ಇಂದು ಯುದ್ಧಕ್ಕೆ ಹೋಗಬೇಕೆನ್ನುವ ಸಮಯಕ್ಕೆ ಸರಿಯಾಗಿ, ಮನಸ್ಸಿನಲ್ಲದೇನೋ ಶೂನ್ಯಭಾವವಾವರಿಸಿ ಬರುತ್ತಿದೆ. ಅಯ್ಯೋ! ಕಷ್ಟ, ಕುಂತಿಯಲ್ಲಿ ಮೊದಲೇ ಹುಟ್ಟಿ, ಮತ್ತೆಲ್ಲಿಯೋ ಬೆಳೆದು ರಾಧೇಯನೆನಿಸಿಕೊಂಡೆ. ಹಾಗೆ ನೋಡುವುದಾದರೆ ಯುಧಿಷ್ಠಿರಾದಿ ಪಾಂಡವರೆಲ್ಲ ನನಗೆ ತಮ್ಮಂದಿರು. ಸರದಿಯ ಮೇಲೆ ಶೌರ್ಯವನ್ನು ತೋರಿಸುವ ಶುಭದಿನ

ವಿಂದು ನನಗೆ ಬಂದಿದೆ. ಆದರೇನು ?! ಮೊದಲನೆಯದಾಗಿ ನಾನು ಪರಶು ರಾಮನಿಂದ ಸಂಪಾದಿಸಿದ ಶಸ್ತ್ರಾಸ್ತ್ರವಿದ್ಯೆಯೆಲ್ಲ ಅವನ ಶಾಪದಿಂದಲೇ ವ್ಯರ್ಥ ವಾಗಿದೆ. ಮೇಲಾಗಿ ತಾಯ ಮಾತಿನಿಂದ ನನ್ನ ಶೌರ್ಯ ಪ್ರದರ್ಶನಕ್ಕೇ ಆತಂಕ ಒದಗಿದೆ. (ಪ್ರಕಾಶ) ಅಯ್ಯ ಶಲ್ಯರಾಜ, ನನ್ನ ಅಸ್ತ್ರವೃತ್ತಾಂತ ವನ್ನು ಹೇಳುತ್ತೇನೆ, ಕೇಳು.

ಶಲ್ಯ—ನನಗೂ ಆ ವೃತ್ತಾಂತವನ್ನು ಕೇಳಬೇಕೆಂದು ಬಹಳ ಕುತೂ ಹಲವಿದೆ.

ಕರ್ಣ—ಮೊಟ್ಟಮೊದಲಿಗೆ ನಾನು ಪರಶುರಾಮನ ಬಳಿ ಹೋದೆ.

ಶಲ್ಯ—ಉ !

ಕರ್ಣ—ಆ ಮಹನೀಯನ ಬಳಿ ಸಾರಿ ನಮಸ್ಕಾರ ಮಾಡಿದೆ. ಆ ಪೂಜ್ಯನು ಮಿಂಚಿನ ಗೊಂಚಲಂತೆ ಕಂದುಬಣ್ಣದಿಂದ ಕಂಗೊಳಿಸುವ ಜಟೆಯನ್ನೆತ್ತಿ ತಲೆಯ ಮೇಲೆ ಎತ್ತರವಾಗಿ ಗಂಟಿಟ್ಟಿದ್ದನು. ಭೃಗುವಂಶ ಶ್ರೇಷ್ಠನಾದ ಆ ಮುನಿಶ್ರೇಷ್ಠನು ಕ್ಷತ್ರಿಯರಿಗೆ ಸಾಕ್ಷಾತ್ ಮೃತ್ಯುವಿನಂತಿದ್ದ. ಅವರನ್ನು ನಿರ್ಮೂಲ ಮಾಡಲೆಂದು ಹೆಗಲಮೇಲೊಂದು ಮಸೆದ ಗಂಡು ಗೊಡಲಿಯನ್ನು ಧರಿಸಿದ್ದ. ಅದರ ಪ್ರಭೆ ಅವನ ಭುಜದ ಮೇಲೆಲ್ಲ ಚೆಲ್ಲಿತ್ತು ನೋಡಿ ಭಯಭಕ್ತಿಭರಿತನಾಗಿ ತಲೆವಾಗಿ ನಿಂತೆ.

ಶಲ್ಯ—ಆಮೇಲೇನಾಯಿತು ?

ಕರ್ಣ—ಆಮೇಲೆ ಪರಶುರಾಮನು ನನಗಾಶೀರ್ವಾದ ಮಾಡಿ ನನ್ನನ್ನು ಯಾರೆಂದೂ, ಏತಕ್ಕಾಗಿ ಬಂದಿರುವೆಯೆಂದೂ ವಿಚಾರಿಸಿದನು.

ಶಲ್ಯ—ಆಗ ನೀನೇನೆಂದೆ ?

ಕರ್ಣ—ಆಗ ನಾನು ಅಖಿಲಾಸ್ತ್ರಪ್ರಯೋಗವನ್ನೂ ತಮ್ಮಿಂದ ಕಲಿ ಯಲೆಂದು ಬಂದೆನು ಎಂದೆ.

ಶಲ್ಯ—ಅದಕ್ಕವನೇನೆಂದನು ?

ಕರ್ಣ—ಆಮೇಲಾ ಪೂಜ್ಯನು "ನಾನು ಉಪದೇಶ ಮಾಡುವುದು ಬ್ರಾಹ್ಮಣರಿಗೆ ಮಾತ್ರ, ಕ್ಷತ್ರಿಯರಿಗಲ್ಲ"—ಎಂದನು.

ಶಲ್ಯ—ಹೌದು, ಆ ಮಹನೀಯನಿಗೆ ಕ್ಷತ್ರಿಯರೆಂದರೆ ಮೊದಲಿಂದಲೂ ಮಹಾದ್ವೇಷ. ಅದಕ್ಕೆ ನೀನೇನೆಂದೆ ?

ಕರ್ಣ—ಆದಕ್ಕೆ, ನಾನು ಕ್ಷತ್ರಿಯನಲ್ಲವೆಂದು ಹೇಳಿಕೊಂಡು ಅಸ್ತ್ರಗಳ ಉಪದೇಶವನ್ನು ಪಡೆಯಲು ಪ್ರಾರಂಭಿಸಿದೆ.

ಶಲ್ಯ—ಆಹ! ಆಮೇಲೆ?

ಕರ್ಣ—ಹಾಗೆ ಸ್ವಲ್ಪ ಕಾಲ ಕಳೆಯಿತು. ಒಂದು ಸಲ ಗುರುಗಳು ಹಣ್ಣು, ಗೆಡ್ಡೆ, ಗೆಣಸು, ಸಮಿತ್ತು, ದರ್ಭೆ, ಹೂವು ಇವನ್ನು ತರಲು ಕಾಡಿಗೆ ಹೊರಟರು; ನಾನೂ ಜೊತೆಯಲ್ಲಿ ಹೋದೆ. ಕಾಡಿನಲ್ಲಿ ಸುತ್ತಿ ಬಳಲಿ ಹಿಂತಿರುಗಿ ಆಶ್ರಮಕ್ಕೆ ಬಂದಮೇಲೆ ಗುರುಗಳು ನನ್ನ ತೊಡೆಯ ಮೇಲೆ ಹಾಗೇ ತಲೆಯಿಟ್ಟು ಮಲಗಿ ನಿದ್ರೆಹೋದರು.

ಶಲ್ಯ—ಮುಂದೇನಾಯಿತು ?

ಕರ್ಣ—ಆಗ ನನ್ನ ದುರ್ದೈವದಿಂದ 'ವಜ್ರಮುಖ' ಎಂಬ ಕೀಟ ಬಂದು, ನನ್ನ ಎರಡು ತೊಡೆಗಳನ್ನೂ ಕೊರೆಯತೊಡಗಿತು. ಗುರುಗಳಿಗೆಲ್ಲಿ ನಿದ್ರಾಭಂಗವಾಗುವುದೋ ಎಂದು ಹೆದರಿ ಆದ ನೋವನ್ನೆಲ್ಲ ಅಲುಗಡೆ ಧೈರ್ಯದಿಂದ ಸಹಿಸಿಕೊಂಡೆ. ಸ್ವಲ್ಪ ಹೊತ್ತಾದ ಮೇಲೆ ಗುರುಗಳೆಚ್ಚರ ಗೊಂಡು ನೋಡಿಕೊಳ್ಳುತ್ತಾರೆ—ತಮ್ಮ ಮೈ ಕೈಯೆಲ್ಲ ರಕ್ತಮಯವಾಗಿತ್ತು. ಕೂಡಲೇ ಅವರು ಕೋಪದಿಂದ ಕಿಡಿಕಿಡಿಯಾದರು. ನಾನು ಕ್ಷತ್ರಿಯ ನೆಂದೇ ನಿಶ್ಚೈಸಿ 'ಕಾಲಕ್ಕೆ ಸರಿಯಾಗಿ ನಿನಗೆ ಅಸ್ತ್ರಗಳೆಲ್ಲ ನಿಷ್ಫಲವಾಗಲಿ' ಎಂದು ಶಪಿಸಿಬಿಟ್ಟರು.

ಶಲ್ಯ—ಅಯ್ಯೋ! ಪೂಜ್ಯರು ಎಂತಹ ಮಾತನ್ನಾಡಿಬಿಟ್ಟರು?!

ಕರ್ಣ—ಹೀಗಾಗಿ ನನ್ನ ಅಸ್ತ್ರಗಳೂ ನಿರ್ವೀರ್ಯವಾದವು. ನನ್ನ ರಥಾಶ್ವಗಳೂ ಈಗ ದೈನ್ಯಭಾವದಿಂದ ಕಣ್ಣುಗಳನ್ನು ಮುಚ್ಚಿ ಮೈಮರೆತು ಮತ್ತೆ ಮತ್ತೆ ಮುಗ್ಗುತ್ತಿವೆ.

ಶಲ್ಯ—ಅಯ್ಯೋ! ಕಷ್ಟ.

ಕರ್ಣ—ಶಲ್ಯರಾಜ, ವಿಷಾದಪಡಬೇಡ. ಹತನಾದರೆ ಸ್ವರ್ಗ ಸಿಗುತ್ತದೆ, ಜಯಿಸಿದರೋ ಯಶಸ್ಸು ಲಭಿಸುತ್ತದೆ. ಪ್ರಪಂಚದಲ್ಲಿವೆರಡಕ್ಕೂ ಬೆಲೆಯುಂಟು; ರಣರಂಗದಲ್ಲಿ ನಿಷ್ಫಲವೆಂಬುದಿಲ್ಲ. ಈ ಉತ್ತಮಾಶ್ವಗಳು ಯುದ್ಧದಿಂದ ಹಿಂತಿರುಗಿ ಬರುವವೆಂಬ ಆಶೆಯಿಲ್ಲ. ಶ್ರೀಮಂತವಾದ ಕಾಂಬೋಜಕುಲದಲ್ಲಿ ಹುಟ್ಟಿದವು ಇವು; ಗರುಡನಿಗೆ ಸಮ ವೇಗದಲ್ಲಿ.

ನನ್ನಿಂದ ರಕ್ಷಣೆ ಪಡೆಯಬೇಕಾದ ಈ ಅಶ್ವಗಳೇ ನನ್ನನ್ನಿಂದು ರಕ್ಷಿಸಲಿ. (ಧ್ಯಾನಮಗ್ನನಾದಂತೆ ನಿಮೀಲಿತಾಕ್ಷನಾಗಿ) ಗೋಬ್ರಾಹ್ಮಣರಿಗೆ ಕೇಡಿಲ್ಲದಿರಲಿ, ಪತಿವ್ರತೆಯರಿಗೆ ಕೇಡಿಲ್ಲದಿರಲಿ. ರಣದಲ್ಲಿ ಹಿಮ್ಮೆಟ್ಟಿದವರಿಗೆಂದಿಗೂ ಕೇಡಿಲ್ಲದಿರಲಿ. ಕಾಲ ಬಂದಿರುವ ನನಗೂ ಕೇಡಾಗದಿರಲಿ. (ಕಣ್ದೆರೆದು) ಪಾಂಡವರ ರಣಚೂಣಿಯನ್ನು ಪ್ರವೇಶಿಸಿ, ಗುಣಸಂಪನ್ನತೆಯಿಂದ ಸುಪ್ರಸಿದ್ಧನಾದ ಧರ್ಮರಾಜನನ್ನು ಸೆರೆಹಿಡಿದು, ನನ್ನ ಅತ್ಯುತ್ಕೃಷ್ಟ ಬಾಣವೇಗದಿಂದ ಅರ್ಜುನನನ್ನು ಕೆಳಗುರುಳಿಸಿ, ಸಿಂಹವನ್ನು ಕೊಂದಮೇಲೆ ಅರಣ್ಯವನ್ನು ನಿರ್ವಿಘ್ನವಾಗಿ ಪ್ರವೇಶಿಸುವಂತೆ, ಪಾಂಡವರ ದಳಕ್ಕೆ ನಿರಾತಂಕವಾಗಿ ಧಾಳಿಯಿಡುತ್ತೇನೆ. ಶಲ್ಯರಾಜ, ರಥವನ್ನು ಹತ್ತೋಣವೇ ?

ಶಲ್ಯ—ಆಗಲಿ.

ಕರ್ಣ—ಶಲ್ಯರಾಜ, ಅರ್ಜುನನೆಲ್ಲಿರುವನೋ ಅಲ್ಲಿಗೇ ನನ್ನ ರಥವನ್ನು ನಡೆಸು.

(ಇಬ್ಬರೂ ಇನ್ನೇನು ರಥಾರೋಹಣ ಮಾಡುವುದರಲ್ಲಿರುವರು.)

(ತೆರೆಯ ಮರೆಯಲ್ಲಿ)

ಅಯ್ಯ ಕರ್ಣ, ಮಹತ್ತರವಾದೊಂದು ಭಿಕ್ಷೆಯನ್ನು ಬೇಡಬೇಕೆಂದಿದ್ದೇನೆ.

ಕರ್ಣ—(ಆಲಿಸಿ) ಏನಿದೆಂಥ ವೀರ್ಯವಂತ ಶಬ್ದ !? ಆ ಬ್ರಾಹ್ಮಣ ಶ್ರೇಷ್ಠನನ್ನು ಕರೆ. ಇಲ್ಲ, ಇಲ್ಲ—ನಾನೇ ಕರೆಯುತ್ತೇನೆ. (ತೆರೆಯ ಕಡೆ ಮುಖ ನೋಡಿ) ಸ್ವಾಮಿ, ಬನ್ನಿ ಇತ್ತ ಬನ್ನಿ.

(ಬ್ರಾಹ್ಮಣರೂಪದಲ್ಲಿ ಇಂದ್ರನು ಪ್ರವೇಶಿಸುತ್ತಾನೆ.)

ಇಂದ್ರ—(ಸಮೀಪಿಸಿ) ಅಯ್ಯ ಕರ್ಣ, ಮಹತ್ತರವಾದೊಂದು ಭಿಕ್ಷೆಯನ್ನು ಬೇಡಬೇಕೆಂದಿದ್ದೇನೆ.

ಕರ್ಣ—ಬಹಳ ಸಂತೋಷವಾಯ್ತು ಸ್ವಾಮಿ. ನಾನಿಂದು ಲೋಕದಲ್ಲಿ ಕೃತಾರ್ಥನೆಂದು ಗಣ್ಯನಾದೆ. ರಾಜರ ಮೌಳಿಯ ರತ್ನಮಣಿಕಾಂತಿ ಸೋಕಿ ರಂಜಿಸುವ ಪಾದವುಳ್ಳ ಕರ್ಣನಿದೋ ನಾನು, ವಿಪ್ರೋತ್ತಮರಾದ ತಮ್ಮ ಪಾದಧೂಳಿಯಿಂದ ನನ್ನ ಮೌಳಿ ಪವಿತ್ರವಾಗಲೆಂದು, ತಮಗೆ ನಮಸ್ಕರಿಸುತ್ತಿದ್ದೇನೆ. (ಎಂದು ಕಾಲ್ಗೆರಗುವನು.)

ಇಂದ್ರ—(ಆತ್ಮಗತ) ಈಗ ನಾನೇನೆಂದು ಹರಸಲಿ ?! ದೀರ್ಘಾಯು

ವಾಗೆಂದರೆ ಇವನು ದೀರ್ಘಾಯುವಾಗುವನು. ಹಾಗೆನ್ನದಿದ್ದರೆ 'ಈ ಬ್ರಾಹ್ಮಣನು ಆಶೀರ್ವಾದ ಮಾಡುವುದನ್ನೂ ಅರಿಯದ ಮೂಢ'ನೆಂದು ನನ್ನನ್ನು ಹಳಿಯುವನು. ಆದ್ದರಿಂದ ಬಾಳೆನ್ನದೆ, ಬಿಮ್ಮನಿರದೆ, ಮತ್ತೇನೆನ್ನಲಿ? ಹೊಳೆಯಿತು! (ಪ್ರಕಾಶ) ಅಯ್ಯ ಕರ್ಣ, ಸೂರ್ಯ ಚಂದ್ರರಂತೆ, ಹಿಮವಂತನಂತೆ, ಅಪಾರ ಪಾರಾವಾರದಂತೆ ನಿನ್ನ ಯಶಸ್ಸು ಚಿರಸ್ಥಾಯಿಯಾಗಿರಲಿ.

ಕರ್ಣ—ಸ್ವಾಮಿ, ದೀರ್ಘಾಯುವಾಗೆಂದೇಕೆ ಹರಸುತ್ತಿಲ್ಲ? ! ಅಥವಾ ಇದೇ ಶುಭ ಬಿಡಿ—ಏಕೆಂದರೆ ಪುರುಷನು ಯತ್ನದಿಂದ ಸಂಪಾದಿಸಬೇಕಾದ್ದು ಧರ್ಮವೊಂದನ್ನೇ! ರಾಜ್ಯಸಂಪತ್ತುಗಳು ಹಾವಿನೆರಡೆಳೆಯ ನಾಲಗೆಯಂತೆ ಸದಾ ಚಂಚಲ. ಆದ್ದರಿಂದ ಪ್ರಜೆಗಳನ್ನು ಪಾಲಿಸುವ ಧರ್ಮಬುದ್ಧಿಯೊಂದಿದ್ದರೆ ಸಾಕು. ದೇಹ ನಷ್ಟವಾದರೂ ಗುಣ ನಿಲ್ಲುವುದು. ಸ್ವಾಮಿ, ನೀವು ಏನನ್ನಿಚ್ಛೆಸುವಿರಿ? ನಾನು ಏನನ್ನು ಕೊಡಲಿ? ಹೇಳಿ.

ಇಂದ್ರ—ಮಹತ್ತರವಾದೊಂದು ಭಿಕ್ಷೆಯನ್ನು ಯಾಚಿಸಬೇಕೆಂದಿದ್ದೇನೆ.

ಕರ್ಣ—ಅಮೃತದಂತೆ ರುಚಿಯಾದ ಕ್ಷೀರಧಾರೆಯನ್ನು ಕರೆಯುವ ಎಳೆಯ ಹರೆಯದ ಸಾವಿರ ಹಸುಗಳು ಬೇಕೆ? ಅವುಗಳ ಕೊಂಬಿಗೆಲ್ಲ ಭಂಗಾರದ ಗೊಣಸು ತೊಡಿಸಿ, ಕರುಗಳೊಡಗೂಡಿ, ಧಾರೆಯೆರೆದು ಕೊಡುತ್ತೇನೆ.

ಇಂದ್ರ—ಸಾವಿರ ಹಸುಗಳೇ? ನಾನಿನ್ನೆಷ್ಟು ಹಾಲು ಕುಡಿದೇನು? ಇಚ್ಛೆಯಿಲ್ಲ ಕರ್ಣ, ಇಚ್ಛೆಯಿಲ್ಲ!

ಕರ್ಣ—ಪೂಜ್ಯರೇ, ಅವು ತಮಗೆ ಬೇಡವೇ? ಹಾಗಾದರೆ ಕೇಳಿ: ಸೂರ್ಯಾಶ್ವಗಳಿಗೆ ಸಮಾನವಾದ ಕಾಂಬೋಜದೇಶದ ಕುದುರೆಗಳಿವೆ, ವೇಗದಲ್ಲಿ ವಾಯುವಿಗೆ ಸಮ. ಅವು ರಾಜ್ಯಲಕ್ಷ್ಮಿಗೆ ಸಾಧನ, ಶುಭಲಕ್ಷಣ ಸಮನ್ವಿತ, ಸಕಲರಾಜಸನ್ಮಾನಿತ. ಅಂತಹ ಹಲವು ಸಾವಿರ ಕುದುರೆಗಳು ಬೇಕೆ? ನಿಮಗೀಗಲೇ ಕೊಡುತ್ತೇನೆ.

ಇಂದ್ರ—ಕುದುರೆ? ಅದನ್ನು ನಾನು ಹತ್ತುವುದು ಕ್ಷಣಕಾಲ. ಇಚ್ಛೆಯಿಲ್ಲ ಕರ್ಣ, ಇಚ್ಛೆಯಿಲ್ಲ.

ಕರ್ಣ—ಪೂಜ್ಯರೇ, ಇಚ್ಛೆಯಿಲ್ಲವೇ? ಹಾಗಾದರೆ ಕೇಳಿ: ಗಂಭೀರ

ವಾಗಿ ಘೋಷಮಾಡುವ, ಗಿರಿಗಳನ್ನು ಹೋಲುವ, ಸಮರದಲ್ಲಿ ಶತ್ರುಗಳನ್ನು ಸವರುವ, ಬಿಳಿಯ ದಂತದ ಮದಿಸಿದಾನೆಗಳ ಹಿಂಡು ಬೇಕೇ ?

ಇಂದ್ರ—ಆನೆ ? ಅದನ್ನು ನಾನು ಹತ್ತುವುದು ಕ್ಷಣಕಾಲ. ಇಚ್ಛೆಯಿಲ್ಲ ಕರ್ಣ, ಇಚ್ಛೆಯಿಲ್ಲ.

ಕರ್ಣ—ಸ್ವಾಮಿ, ಇಚ್ಛೆಯಿಲ್ಲವೆ ? ಕೇಳಿ: ಅಪಾರ ಭಂಗಾರ ಕೊಡುತ್ತೇನೆ, ಬೇಕೆ ?

ಇಂದ್ರ—ಹೊತ್ತುಕೊಂಡು ಹೋಗಲೆ ? ಇಚ್ಛೆಯಿಲ್ಲ ಕರ್ಣ, ಇಚ್ಛೆಯಿಲ್ಲ.

ಕರ್ಣ—ಹಾಗಾದರೆ ಪೃಥ್ವಿಯನ್ನು ಗೆದ್ದು ಕೊಡಲೆ ?

ಇಂದ್ರ—ನಾನು ಪೃಥ್ವಿಯನ್ನೇನು ಮಾಡಲಿ ?

ಕರ್ಣ—ಅಗ್ನಿಷ್ಟೋಮದ ಫಲವನ್ನು ಕೊಡಲೆ ?

ಇಂದ್ರ—ಅಗ್ನಿಷ್ಟೋಮದ ಫಲವನ್ನೇನು ಮಾಡಲಿ ನಾನು ?

ಕರ್ಣ—ಹಾಗಾದರಿದೋ ನನ್ನ ತಲೆಯನ್ನೇ ಕೊಳ್ಳಿ!

ಇಂದ್ರ—ಅಯ್ಯಯ್ಯೋ !

ಕರ್ಣ—ಹೆದರಬೇಡಿ, ಹೆದರಬೇಡಿ, ಪ್ರಸನ್ನರಾಗಬೇಕು. ಇನ್ನೊಂದು ಮಾತನ್ನು ಹೇಳುತ್ತೇನೆ ಕೇಳಿ: ಇದೋ, ನನ್ನ ದೇಹದ ಮೇಲೆ ಹುಟ್ಟುವಾಗಲೇ ಜೊತೆಯಲ್ಲಿ ಹುಟ್ಟಿ, ನನಗೆ ರಕ್ಷೆಯಾಗಿರುವ ಸಹಜ ಕವಚವೊಂದಿದೆ ! ಇದು ಸಾವಿರಾರು ದೇವಾಸುರರಿಂದಲೂ ಅಭೇದ್ಯ. ನೀವು ಬೇಕೆಂದರೆ ಈ ಕವಚವನ್ನು ಕರ್ಣಕುಂಡಲಗಳೊಡಗೂಡಿ ಪ್ರೀತಿಯಿಂದ ನಿಮಗೆ ಕೊಟ್ಟು ಬಿಡುತ್ತೇನೆ.

ಇಂದ್ರ—(ಹರ್ಷದಿಂದ) ಕೊಡು ; ಕೊಟ್ಟುಬಿಡು ಕರ್ಣ.

ಕರ್ಣ—(ಸ್ವಗತ) ಇದರ ಮೇಲಿವನಿಗಾಶೆಯೇ ? ಹಲವಾರು ವಿಧದ ಕಪಟಬುದ್ಧಿಯ ಕೃಷ್ಣನುಪಾಯವಿರಬಹುದೆ ಇದು ? ಆಗಲಿ, ಅದೂ ಆಗಲಿ. ಛೇ ! ಶೋಕಿಸುವುದು ಯೋಗ್ಯವಲ್ಲ. ನಿಸ್ಸಂಶಯ—(ಪ್ರಕಾಶ) ಸ್ವಾಮಿ ಸ್ವೀಕರಿಸಬೇಕು.

ಶಲ್ಯ—ಅಂಗರಾಜ, ಬೇಡ, ಕೊಡಬೇಡ.

ಕರ್ಣ—ಶಲ್ಯರಾಜ, ತಡೆಯಬೇಡ. ನೋಡು: ಕಾಲ ಕಳೆದ

ಮೇಲೆ ಕಲಿತ ವಿದ್ಯೆ ಕ್ಷಯಿಸಿ ಹೋಗುವುದು; ಆಳವಾಗಿ ಬೇರು ಬಿಟ್ಟು ಭದ್ರವಾದ ಮರಗಳೂ ಬಿದ್ದುಹೋಗುವವು; ಜಲನಿಧಿಯ ನೀರೂ ಬತ್ತುವುದು. ಕಡೆಗುಳಿಯುವುದೆರಡೇ: ಹೋಮ ಮಾಡಿದ್ದು, ದಾನ ಕೊಟ್ಟದ್ದು! ಆದ್ದರಿಂದ ಸ್ವೀಕರಿಸಿ. (ಎಂದು ಕತ್ತರಿಸಿ ಕೊಡುವನು.)

ಇಂದ್ರ—(ತೆಗೆದುಕೊಂಡು) ಅಬ್ಬ! ಕೊನೆಗೂ ಕೈಸೇರಿದವಲ್ಲಾ! ಅರ್ಜುನನ ವಿಜಯಕ್ಕಾಗಿ ಸರ್ವದೇವತೆಗಳೂ ಸೇರಿ ಮೊದಲೇ ಏನನ್ನು ನಿಶ್ಚಯಿಸಿದ್ದರೋ ಅದಿಂದು ನನ್ನಿಂದ ಕೈಗೂಡಿತು. ಆದ್ದರಿಂದ ನಾನೂ ಈಗ ಐರಾವತವನ್ನು ಹತ್ತಿ ಕರ್ಣಾರ್ಜುನರ ದ್ವಂದ್ವಯುದ್ಧವನ್ನು ನೋಡುತ್ತೇನೆ. (ನಿಷ್ಕ್ರಮಿಸುವನು.)

ಶಲ್ಯ—ಅಯ್ಯ ಅಂಗರಾಜ, ಮೋಸ ಹೋದೆಯಲ್ಲಾ ನೀನು ?!

ಕರ್ಣ—ಯಾರಿಂದ ?

ಶಲ್ಯ—ಇಂದ್ರನಿಂದ.

ಕರ್ಣ—ಇಲ್ಲ, ಇಂದ್ರನಲ್ಲವೇ ನನ್ನಿಂದ ಮೋಸ ಹೋದವನು ? ಏಕೆಂದರೆ: ಅವನಾದರೋ ದ್ವಿಜರಿಂದ ಅನೇಕ ಯಜ್ಞಾಹುತಿಗಳನ್ನರ್ಪಿಸಿಕೊಂಡವನು! ಕೀರಿಟಿಯನ್ನು ಹೆತ್ತವನು! ದಾನವಸಂಘವನ್ನು ಮರ್ದಿಸಿದವನು! ಐರಾವತವನ್ನು ತಟ್ಟಿತಟ್ಟಿ ಜಡ್ಡುಗಟ್ಟಿದ ಬೆರಳಿನವನು; ಆ ಇಂದ್ರನಿಂದು ನನ್ನಿಂದ ಕೃತಾರ್ಥನಾದರೆ, ಮೋಸಹೋದವನು ನಾನಲ್ಲ; ಅವನೇ!

(ದೇವದೂತನು ಬ್ರಾಹ್ಮಣರೂಪಿನಿಂದ ಪ್ರವೇಶಿಸುವನು.)

ದೇವದೂತ—ಕವಚಕುಂಡಲಗಳನ್ನು ನಿನ್ನಿಂದ ಕಸಿದುಕೊಂಡ ದೇವೇಂದ್ರನು ಪಶ್ಚಾತ್ತಾಪಪಟ್ಟು, ನಿನಗೀಗ 'ವಿಮಲಾ' ಎಂಬೊಂದು ಶಕ್ತಿಯನ್ನು ಅನುಗ್ರಹಿಸಿದ್ದಾನೆ. ಅದರಿಂದ ನೀನು ಪಾಂಡವರಲ್ಲಿ ಯಾವನಾದರೊಬ್ಬನನ್ನು ಕೊಲ್ಲಲು ಸಮರ್ಥನಾಗಿರುವೆ.

ಕರ್ಣ—ಛೀ! ಕೊಟ್ಟುದಕ್ಕೆ ಪ್ರತಿಯಾಗಿ ನಾನೇನನ್ನೂ ಪಡೆಯಲಿಷ್ಟಪಡುವುದಿಲ್ಲ.

ದೇವದೂತ—ಹಾಗೆನ್ನಬೇಡ; ಬ್ರಾಹ್ಮಣನ ಮಾತನ್ನು ಕೇಳು: ಸ್ವೀಕರಿಸು.

ಕರ್ಣ—ಬ್ರಾಹ್ಮಣರ ಮಾತೆ ? ಅದನ್ನೆಂದೂ ನಾನು ಉಲ್ಲಂಘಿಸಿದ

ವನಲ್ಲ. (ದೇವದೂತನ ಕಡೆ ತಿರುಗಿ) ನನಗಾ ಶಕ್ತಿ ಯಾವಾಗ ಸಿದ್ಧಿಸುವುದು ?

ದೇವದೂತ—ನೀನು ಯಾವಾಗ ಸ್ಮರಿಸಿದರಾವಾಗ.

ಕರ್ಣ—ಆಗಲಿ. ಆಗಲಿ. ಅನುಗ್ರಹೀತನಾದೆ. ತಾವು ಹಿಂತಿರುಗಿ.

ದೇವದೂತ—ಆಗಲಿ. (ನಿಷ್ಕ್ರಮಿಸುವನು.)

ಕರ್ಣ—ಶಲ್ಯರಾಜ, ಇನ್ನು ರಥವನ್ನು ಹತ್ತೋಣ !

ಶಲ್ಯ—ಆಗಲಿ. (ರಥವನ್ನು ಹತ್ತುವರು.)

ಕರ್ಣ—ಅರೇ, ಏನೋ ಶಬ್ದ ಕೇಳಿಸುತ್ತಿದೆ. ಏನದೂ ?! ಪ್ರಳಯ ಸಾಗರ ಘೋರ ಘೋಷಸಮಶಂಖಧ್ವನಿ ಕೇಳಬರುತ್ತಿದೆ. ಅದು ಕೃಷ್ಣನದೋ ಅಥವಾ ಅರ್ಜುನನದೋ ಆಗಿರಬೇಕು. ಹೌದು ! ಯುಧಿಷ್ಠಿರನ ಸೋಲಿಂದ ಕೆರಳಿದ ಪಾರ್ಥನು, ತನ್ನ ಬಲವನ್ನೆಲ್ಲ ಪ್ರದರ್ಶಿಸಿ, ಇಂದು ಯುದ್ಧದಲ್ಲಿ ಹೋರಾಡುವನು. ಶಲ್ಯರಾಜ, ಅರ್ಜುನನೆಲ್ಲಿರುವನೋ ಅಲ್ಲಿಗೇ ನನ್ನ ರಥವನ್ನು ನಡೆಸು.

ಶಲ್ಯ—ಆಗಲಿ. (ನಿಷ್ಕ್ರಮಿಸುವರು.)

ಊರುಭಂಗ

(ಸ್ಥಳ: ಶ್ಯಮಂತ ಪಂಚಕವೆಂಬ ರಣಭೂಮಿ. ದುರ್ಯೋಧನನ ನೂರು ಜನ ತಮ್ಮಂದಿರೂ, ಸೇನೆಯೂ, ಸೇನಾಧಿಪತಿಗಳೂ ಮಣ್ಣು ಮುಕ್ಕಿದ್ದಾರೆ. ಉಳಿದಿರುವವನು ದುರ್ಯೋಧನನೊಬ್ಬನೇ. ಅವನಿಗೂ ಭೀಮನಿಗೂ ಗದಾಯುದ್ಧ ಪ್ರಾರಂಭವಾದಾಗ ದ್ವೈಪಾಯನ, ಹಲಾಯುಧ, ಕೃಷ್ಣ, ವಿದುರ ಮುಂತಾದ ಪೂಜ್ಯರು ಆ ದ್ವಂದ್ವ ಯುದ್ಧವನ್ನು ದೂರದಲ್ಲಿ ನಿಂತು ನೋಡುತ್ತಿದ್ದರು. ದುರ್ಯೋಧನನ ಕೈಚಳಕದ ಮುಂದೆ ಭೀಮನ ಬಲ ನಡೆಯುವುದಿಲ್ಲ. ಭೀಮನು ತಲೆಗೆ ಪೆಟ್ಟು ತಿಂದು ತಡೆಯಲಾರದೆ ನೆಲಕ್ಕುರುಳುತ್ತಾನೆ. ಪಾಂಡವ ಪಕ್ಷಪಾತಿಗಳಾದ ಕೃಷ್ಣ ಮುಂತಾದವರಿಗೆ ಕರುಳು ಕಿತ್ತು ಬಂದಂತಾಯಿತು. ಆದರೆ ದುರ್ಯೋಧನ ಪಕ್ಷಪಾತಿಯಾದ ಬಲರಾಮನಿಗೆ ಅದನ್ನು ಕಂಡು ಆನಂದವೇ ಆನಂದ. ಆ ಬೀಳುತ್ತಿದ್ದ ಭೀಮನನ್ನು ದುರ್ಯೋಧನನಾದರೋ ಕಂಡು 'ಹೆದರಬೇಡ ಭೀಮ, ನೆಲಕ್ಕೆ ಬಿದ್ದ ಶತ್ರುವನ್ನು ಯಾವ ವೀರನೂ ಘಾತಿಸುವುದಿಲ್ಲ' ಎಂದು ಮೂದಲಿಸುತ್ತಾನೆ. ಅಪಹಾಸ್ಯಕ್ಕೀಡಾದ ಭೀಮನಿಗೆ ಕೃಷ್ಣನು ತನ್ನ ತೊಡೆಯನ್ನು ತಟ್ಟಿಕೊಂಡು ರಹಸ್ಯವಾಗಿ ಸನ್ನೆ ಮಾಡುವುದೇ ತಡ, ಭೀಮಸೇನನು ಚೇತರಿಸಿಕೊಂಡೆದ್ದು ಎರಡು ಕೈಗಳಿಂದಲೂ ತನ್ನ ಚಿತ್ರಾಂಗದವೆಂಬ ಮಹಾಗದೆಯನ್ನೆತ್ತಿ, ಸಿಂಹನಾದ ಮಾಡಿ, ಬೀಸಿ ದುರ್ಯೋಧನನ ತೊಡೆಗೆ ಹೊಡೆವನು. ದುರ್ಯೋಧನನು ನೆಲಕ್ಕೊರಗಿದ. ವ್ಯಾಸರು ಆಕಾಶಕ್ಕೆ ನೆಗೆದರು. ಬಲರಾಮನು ತನ್ನ ಕೋಪಾರುಣ ನೇತ್ರಗಳನ್ನು ಮುಚ್ಚಿಕೊಂಡನು. ಅದೇ ಸಮಯವೆಂದು ಕೃಷ್ಣನ ಭುಜವನ್ನು ಅವಲಂಬಿಸಿದ ಭೀಮನನ್ನು ಪಾಂಡವರು ತಮ್ಮ ಶಿಬಿರಕ್ಕೆ ಕರೆದೊಯ್ಯುವರು. ಬಲರಾಮನು ಕಣ್ಣುಬಿಟ್ಟು ನೋಡುತ್ತಾನೆ: ಏಕಾಂಗಿಯಾಗಿ ರಣರಂಗದಲ್ಲಿ ಪೂರಾಯ ಘಾಯಗೊಂಡು ಕೆಳಗೆ ಬಿದ್ದು ಪ್ರಾಣಸಂಕಟದಿಂದ ನರಳುತ್ತಿದ್ದಾನೆ ದುರ್ಯೋಧನ. ರಂಗದ ಮೇಲೆ ಕೇವಲ ನರಳುವ ಶಬ್ದ ಮಾತ್ರ ಕೇಳಬರುತ್ತಿದೆ. ಬಲರಾಮನು ಪ್ರವೇಶಿಸಿ—)

ಬಲದೇವ—ಏಲೆಲೇ ಪಾರ್ಥಿವರೇ! ಇದು ತರವಲ್ಲ!! ಶತ್ರುಬಲಕ್ಕೆ ಮೃತ್ಯುಸ್ವರೂಪವಾದ ಈ ನನ್ನ ಹಲಾಯುಧವನ್ನೂ ಗಮನಿಸದೆ, ಯುದ್ಧ ನಿಯಮವನ್ನೂ, ನನ್ನನ್ನೂ ಸೊಕ್ಕಿನಿಂದ ನಿರ್ಲಕ್ಷಿಸಿ, ತೊಡೆಗಳಿಗೆ ಹೊಡೆದು ದುರ್ಯೋಧನನನ್ನು, ಅಷ್ಟೇ ಅಲ್ಲ, ಕುರುಕುಲ ವಿನಯಸಂಪತ್ತನ್ನೂ, ಭೀಮನು ನೆಲಕ್ಕುರುಳಿಸಿಬಿಟ್ಟ. (ತೆರೆಯ ಕಡೆ ನೋಡಿ) ಅಯ್ಯ ದುರ್ಯೋಧನ, ಒಂದು ನಿಮಿಷ ಪ್ರಾಣವನ್ನು ಬಿಗಿಹಿಡಿದುಕೋ. ರಿಪುಬಲ ಪ್ರಾಣೋಪಹಾರಾರ್ಜಿತವಾದೀ ನನ್ನ ಹಲಾಯುಧದಿಂದ ಭೀಮನೆದೆಯನ್ನು ಉತ್ತು ಬರುತ್ತೇನೆ.

(ತೆರೆಯ ಮರೆಯಲ್ಲಿ)

ಪ್ರಸನ್ನರಾಗಬೇಕು ಭಗವನ್ ಹಲಾಯುಧ, ಪ್ರಸನ್ನರಾಗಬೇಕು.

ಬಲದೇವ—(ತೆರೆಯ ಪಕ್ಕಕ್ಕೆ ನೋಡಿ) ಅಯ್ಯೋ! ಈ ದುರವಸ್ಥೆಯಲ್ಲಿ ಪಾಪ, ದುರ್ಯೋಧನನು ತೆವಳುತ್ತ ನನ್ನನ್ನೇ ಹಿಂಬಾಲಿಸುತ್ತಿರುವನು. ರಕ್ತವೆಂಬ ರಣಚಂದನದಿಂದ ಅದೆಷ್ಟು ದೇದೀಪ್ಯಮಾನನಾಗಿದಾನೆ. ನೆಲದಮೇಲೆ ತೆವಳಿ ಧೂಳಂಟಿದ ಭುಜಗಳಿಂದೀ ದುರ್ಯೋಧನನು ಬಾಲಲೀಲೆಯನ್ನು ಮತ್ತೆ ತೋರುತ್ತಿರುವನೋ! ಸಾಗರಮಹಾಮಂಥನವಾದ ಮೇಲೆ ಮಂದರ ಪರ್ವತದಿಂದ ಸುತ್ತುಬಿಚ್ಚಿ, ಬಿಡುಗಡೆ ಹೊಂದಿ, ಬಸವಳಿದು ಸಮುದ್ರ ಜಲದಲ್ಲಿ ಹೆಡೆಯನ್ನೆಳೆದುಕೊಂಡು ಬರುತ್ತಿರುವ ವಾಸುಕಿಯಂತಿದಾನೆ ಈ ದುರ್ಯೋಧನ.

(ತೊಡೆ ಮುರಿದ ದುರ್ಯೋಧನನು ತೆವಳುತ್ತ ಪ್ರವೇಶಿಸುವನು.)

ದುರ್ಯೋಧನ—ಪ್ರಸನ್ನರಾಗಬೇಕು ಭಗವನ್ ಹಲಾಯುಧ, ಪ್ರಸನ್ನರಾಗಬೇಕು. ಭೂಮಿಯಲ್ಲಿ ಬಿದ್ದ ನಾನಿದ್ದೋ ನಿಮ್ಮ ಕಾಲಿಗೆ ಬಿದ್ದೆ. (ಎಂದು ಬಲರಾಮನ ಪಾದಗಳನ್ನು ಸ್ಪರ್ಶಿಸಿ) ಮೊದಲು ನೀವು ರೋಷವನ್ನು ಬಿಡಿ. ಕುರುಕುಲದ ಪಿತೃಗಳಿಗೆ ಜಲಾಂಜಲಿಯನ್ನು ಕೊಡಲು ಪಾಂಡವ ಮೇಘಗಳು ಜೀವಿಸಿರಲಿ. ನಮ್ಮ ವೈರ, ನಮ್ಮ ಯುದ್ಧದ ಮಾತು, ಕತೆ ಮತ್ತು ನಾವು—ಎಲ್ಲವಿಂದಿಗೆ ನಿರ್ನಾಮವಾಯ್ತು.

ಬಲದೇವ—ಅಯ್ಯ ದುರ್ಯೋಧನ, ನಿಮಿಷಕಾಲ ನಿನ್ನ ಪ್ರಾಣವನ್ನು ಬಿಗಿಹಿಡಿದುಕೋ!

ದುರ್ಯೋಧನ—ಸ್ವಾಮಿ, ತಾವೇನು ಮಾಡಬೇಕೆಂದಿರುವಿರಿ?

ಬಲರಾಮ—ಕೇಳು: ಪಾಂಡವರನ್ನೆಲ್ಲ ಈ ನನ್ನ ಹಲಾಯುಧದಿಂದ ನುಗ್ಗುನುರಿಮಾಡಿ ಸ್ವರ್ಗಕ್ಕೆ ತೂರಿಬಿಡುತ್ತೇನೆ.

ದುರ್ಯೋಧನ—ಬೇಡಿ, ತಾವು ಹಾಗೆ ಮಾಡಬೇಡಿ. ಭೀಮನು ತನ್ನ ಪ್ರತಿಜ್ಞೆಯನ್ನು ನೇರವೇರಿಸಿಕೊಂಡುಬಿಟ್ಟ. ನನ್ನ ತಮ್ಮಂದಿರು ನೂರ್ವರೂ ಸ್ವರ್ಗಸ್ಥರಾದರು! ನಾನೂ ಸಾವನ್ನಿದಿರು ನೋಡುತ್ತಿದ್ದೇನೆ! ಇನ್ನು ಯುದ್ಧದಿಂದೇನು ಪ್ರಯೋಜನ?

ಬಲದೇವ—ನನ್ನ ಕಣ್ಣೆದುರಿಗೇ ನಿನ್ನನ್ನು ಮೋಸಗೊಳಿಸಿದರಲ್ಲಾ

ಎಂದು ನನಗೆ ರೋಷ!

ದುರ್ಯೋಧನ—ನನಗೆ ಮೋಸವಾಯಿತೆಂದು ನೀವು ಭಾವಿಸುವಿರಾ ?

ಬಲದೇವ—ಹೌದು ! ಸಂಶಯವೇನು ?

ದುರ್ಯೋಧನ—(ನೋವಿನಿಂದ ನರಳುತ್ತ) ಅಯ್ಯ ! ನ್ಯಾನಿಂದು ನನ್ನ ಪ್ರಾಣಕ್ಕೆ ತಕ್ಕ ಮೌಲ್ಯವನ್ನು ಪಡೆದಂತಾಯಿತು. ಏಕೆಂದರೆ ಭೀಮನಂಥವನಿಗೂ ನನ್ನನ್ನು ಮೋಸದಿಂದಲ್ಲದೆ ನೆಲಕ್ಕುರುಳಿಸಲಾಗಲಿಲ್ಲ. ಆ ಭೀಮನೋ ಹತ್ತಿ ಉರಿಯುವ ಅರಗಿನ ಮನೆಯಿಂದ ಬಹಳ ಚತುರತೆಯಿಂದ ಪಾರಾದ; ಕುಬೇರನ ಮನೆಯಲ್ಲಾದ ಯುದ್ಧದಲ್ಲಿ ತನ್ನ ಕಡೆಗೆ ಬೀಸಿದ ದೊಡ್ಡ ದೊಡ್ಡ ಬಂಡೆಗಳನ್ನೂ ಸ್ವಶಕ್ತಿಯಿಂದ ಹಿಂದಕ್ಕೆ ಪುಟ ನೆಗೆಸಿದ; ಹಿಡಿಂಬನೆಂಬ ರಾಕ್ಷಸರೊಡೆಯನ ಪ್ರಾಣವನ್ನು ಹಿಂಡಿದ; ಅಂತಹವನೂ ಇಂದು ನನ್ನನ್ನು ಮೋಸದಿಂದ ಗೆದ್ದನೆಂದರೆ ನಾನು ಸೋತಂತಾಗಲಿಲ್ಲ. ಯೋಚಿಸಿ ನೋಡಿ.

(ತೆರೆಯ ಮರೆಯಲ್ಲಿ)

ಅರಗಾಗಿ, ದಾರಿಬಿಟ್ಟು ಅರಗಾಗಿ.

ಬಲದೇವ—(ನಿಟ್ಟಿಸಿ) ಅಯ್ಯೋ ! ಪೂಜ್ಯ ಧೃತರಾಷ್ಟ್ರ ಮತ್ತು ಗಾಂಧಾರಿ ಈ ಇಬ್ಬರನ್ನೂ ಕರೆದುಕೊಂಡು ದುರ್ಯೋಧನಪ್ರಿಯಪುತ್ರ ದುರ್ಜಯನಿತ್ತಲೇ ಬರುತ್ತಿದಾನೆ. ರಾಣಿಯರೀರ್ವರೂ ಹಿಂಬಾಲಿಸುತ್ತಿದ್ದಾರೆ.

(ಧೃತರಾಷ್ಟ್ರ, ಗಾಂಧಾರಿ, ದುರ್ಜಯ ಮತ್ತು ಇಬ್ಬರು ರಾಣಿಯರು ಪ್ರವೇಶಿಸುವರು.)

ಧೃತರಾಷ್ಟ್ರ—ಪುತ್ರ, ಎಲ್ಲಿದೀಯ ?

ಗಾಂಧಾರಿ—ಮುದ್ದು ಮಗನೇ, ಎಲ್ಲಿದ್ದೀಯ ?

ರಾಣಿಯರಿಬ್ಬರು—ಮಹಾರಾಜ, ಎಲ್ಲಿರುವೆ ?

ಧೃತರಾಷ್ಟ್ರ—ಅಯ್ಯೋ ! ಕಷ್ಟ. ಇಂದು ರಣರಂಗದಲ್ಲಿ ನನ್ನ ಮಗನನ್ನು ಮೋಸದಿಂದ ಹೊಡೆದು ಕೆಡವಿದರೆಂದು ಕೇಳಿ, ಮೊದಲೇ ಕುರುಡನಾದ ನಾನು, ಸುರಿಸ ಕಣ್ಣೀರಿಂದ ಮತ್ತಷ್ಟು ಕುರುಡನಾದೆ. (ಕಣ್ಣೊರಸಿಕೊಂಡು, ಕೈಗಳಿಂದ ಕಣ್ಣುಗಳನ್ನು ಮುಚ್ಚಿಕೊಂಡು) ಗಾಂಧಾರಿ, ನೀನಿನ್ನೂ ಬದುಕಿರುವೆಯಾ ?

ಗಾಂಧಾರಿ—ಮಂದಭಾಗ್ಯಳಾದ ನಾನಿನ್ನೂ ಉಸಿರಾಡುತ್ತಿದ್ದೇನೆ

ರಾಣಿಯರಿಬ್ಬರು—ಮಹಾರಾಜ, ಅಯ್ಯೋ ! ಮಹಾರಾಜ !!

ದುರ್ಯೋಧನ—ಹಾ ! ದುರದೃಷ್ಟವೇ ! ನನ್ನ ಕೈಹಿಡಿದ ಹೆಂಡತಿಯರೂ ಕಣ್ಣೀರಿಡುವಂತಾಯಿತೇ ? ಇದುವರೆಗೂ ನನಗೆ ಗದಾಘಾತದ ನೋವು ಕಾಣಿಸಿರಲಿಲ್ಲ; ಅಂತಃಪುರಕ್ಕೆ ಯೋಗ್ಯರಾದ ನನ್ನ ಮುದ್ದು ಮಡದಿಯರು ಕೂದಲನ್ನು ಕೆದರಿಕೊಂಡು, ಕಂಬನಿಗರೆಯುತ್ತ ಯುದ್ಧಭೂಮಿಗೆ ಬಂದುದನ್ನು ಕಂಡು ನನಗೀಗ ನೋವಿನರಿವಾಗುತ್ತಿದೆ.

ಧೃತರಾಷ್ಟ—ಗಾಂಧಾರಿ, ನಮ್ಮ ಕುಲಕಲಶಪ್ರಾಯನಾದ ದುರ್ಯೋಧನನು ನಿನಗೆ ಕಾಣುವನೆ ?

ಗಾಂಧಾರಿ—ಇಲ್ಲ, ಮಹಾರಾಜ.

ಧೃತರಾಷ್ಟ—ಇಲ್ಲವೇ ?! ಅಯ್ಯೋ, ನೋಡಲೇಬೇಕಾದ ಕಾಲದಲ್ಲಿಯೂ ನಾನು ನನ್ನ ಮಗನನ್ನು ನೋಡಲಾರದಾದೆ ! ಓ, ಹಾಳು ವಿಧಿಯೇ, ನಾನು ಶತ್ರುಗಳನ್ನು ಸಮರದಲ್ಲಿ ಸದೆಬಡಿದೆ, ಮಾನವೀರ್ಯಪ್ರದೀಪ್ತನಾದೆ. ವೀರರೂ ಛಲವಂತರೂ ಆದ ನೂರು ಜನ ಮಕ್ಕಳನ್ನು ಪಡೆದುಕೊಂಡರೂ, ನನಗೆ ಸತ್ತಮೇಲೆ ತರ್ಪಣವನ್ನು ಕೊಡಲು ಒಬ್ಬ ಮಗನಾದರೂ ಉಳಿಯಬಾರದೆ ?

ಗಾಂಧಾರಿ—ಪುತ್ರ ದುರ್ಯೋಧನ, ನನಗುತ್ತರ ಕೊಡು. ಪುತ್ರಶತವಿನಾಶದಿಂದ ದುಃಖಿತನಾದ ಮಹಾರಾಜನನ್ನು ಸಮಾಧಾನಪಡಿಸು.

ಬಲದೇವ—ಅಯ್ಯೋ, ಇದೋ ಪೂಜ್ಯಳಾದ ಗಾಂಧಾರಿ ! ಗಂಡನಿಗಿಲ್ಲದ ಕಣ್ಣು ತನಗೆ ಬೇಡವೆಂದು ಕಣ್ಣನ್ನು ಕಟ್ಟಿಕೊಂಡು ನೂರು ಮಕ್ಕಳನ್ನು ನೋಡುವ ಬಯಕೆಯನ್ನೆಲ್ಲ ಬಿಗಿಹಿಡಿದಿದ್ದ ಆ ಧೀರೆಯಿಂದು ದುರ್ಯೋಧನನು ನೆಲಕ್ಕುರುಳಿದನೆಂಬ ಸುದ್ದಿಯನ್ನು ಕೇಳಿ ಧೈರ್ಯಗುಂದಿ, ನಿರಂತರವಾಗಿ ಸುರಿಯುತ್ತಿರುವ ಕಂಬನಿಯಿಂದ ಕಣ್ಣಿಗೆ ಕಟ್ಟಿದ ಆ ಬಟ್ಟೆಯು ಕಟ್ಟಿಲ್ಲನೆಂದು ಶೋಚನೀಯಾವಸ್ಥೆಯಲ್ಲಿದಾಳೆ !

ಧೃತರಾಷ್ಟ—ಪುತ್ರ ದುರ್ಯೋಧನ, ಹದಿನೆಂಟಕ್ಷೋಹಿಣೀ ಮಹಾರಾಜ, ಎಲ್ಲಿದ್ದೀಯ ?

ದುರ್ಯೋಧನ—(ತನ್ನಲ್ಲಿ ತಾನು) ಈಗ, ನಾನು ಮಹಾರಾಜ ! ?

ಧೃತರಾಷ್ಟ—ಬಾ, ಪುತ್ರಶತಜ್ಯೇಷ್ಠ, ನನ್ನ ಮಾತಿಗುತ್ತರ ಕೊಡು.

ದುರ್ಯೋಧನ—(ತನ್ನಲ್ಲಿ ತಾನು) ನಾನೇನೆಂದುತ್ತರ ಕೊಡಲಿ!

ಭೀಮನ ಗದೆಗೆ ತುತ್ತಾಗಿ, ಕೆಳಗೆ ಬಿದ್ದು, ಈ ಯಾತನೆಯಿಂದವಮಾನಿತ ನಾಗಿರುವೆನಲ್ಲಾ !

ಧೃತರಾಷ್ಟ್ರ—ಬಾ ಮಗು, ನನಗೆ ನಮಸ್ಕರಿಸು ಬಾ!

ದುರ್ಯೋಧನ—ಇದೋ ಬಂದೆ, ಬಂದೆ ! (ಏಳಲು ಪ್ರಯತ್ನಿಸಿ ದೊಪ್ಪನೆ ಕೆಳಗೆ ಬೀಳುತ್ತಾನೆ) ಅಯ್ಯೋ, ಹಾಳು ವಿಧಿಯೇ ! ಇದು ನನಗೆ ಎರಡನೆಯ ಪೆಟ್ಟು ! ಅಯ್ಯೋ ! ಭೀಮನು ನನ್ನ ಜುಟ್ಟನ್ನು ಹಿಡಿದು ಗದೆಯನ್ನು ಬೀಸಿ, ಎರಡು ತೊಡೆಗಳನ್ನಷ್ಟೇ ಅಲ್ಲ, ತಂದೆತಾಯಿಗಳಿಗಭಿವಂದಿಸುವ ನನ್ನ ಭಾಗ್ಯ ವನ್ನೂ ಅಪಹರಿಸಿಬಿಟ್ಟ.

ಗಾಂಧಾರಿ—ಇಲ್ಲಿ ಬನ್ನಿ ಸೊಸೆಯರೇ !

ರಾಣಿಯರಿಬ್ಬರು—ಅತ್ತೆಯವರೇ, ಇದೋ ಬಂದಿದ್ದೇವೆ.

ಗಾಂಧಾರಿ—ನಿಮ್ಮ ಗಂಡನನ್ನು ಹುಡುಕಿರಮ್ಮ !

ದೇವಿಯರಿಬ್ಬರು—ಇದೋ, ಮಂದಭಾಗಿನಿಯರು ಹುಡುಕುತ್ತೇವೆ. (ಪರಿಕ್ರಮಿಸುವರು.)

ಧೃತರಾಷ್ಟ್ರ—ಯಾರಿವನು ? ನನ್ನ ವಲ್ಲಿಯ ಸೆರಗನ್ನು ಹಿಡಿದೆಳೆಯುತ್ತ ನನಗೆ ದಾರಿ ತೋರಿಸುತ್ತಿದಾನೆ ?

ದುರ್ಜಯ—ತಾತ, ನಾನು ದುರ್ಜಯ!

ಧೃತರಾಷ್ಟ್ರ—ಮರಿ, ದುರ್ಜಯ, ಹೋಗಪ್ಪ—ನಿಮ್ಮಪ್ಪಾಜಿ ಎಲ್ಲಿರು ವನೋ ಹುಡುಕು ಹೋಗು.

ದುರ್ಜಯ—ಆಗಲಿ ತಾತ. (ಮುಂದೆ ನಡೆದು) ತಾತ, ಇದೋ ಹೊರಟೆ. (ಎಂದು ಓಡುತ್ತ.) ಅಪ್ಪಾಜೀ ಎಲ್ಲಿದೀರ ?

ದುರ್ಯೋಧನ—ಆಹ ! ಈ ಚಿಣ್ಣನೂ ಬಂದ ! ಹೃದಯದಲ್ಲಿ ಸದಾ ಸನ್ನಿಹಿತವಾಗಿರುವ ಪುತ್ರಸ್ನೇಹವು ನನ್ನನ್ನೀಗ ದಹಿಸುತ್ತಿದೆ. ನನ್ನ ತೊಡೆಯ ಮೇಲೆ ಮಲಗಲು ಯೋಗ್ಯನಾದ ಈ ಹಸುಳೆ ದುರ್ಜಯನು ದುಃಖವೆಂದ ರೇನೆಂಬುದನ್ನೇ ಅರಿಯ. ಸೋತು ಬಿದ್ದು ಈ ದುರವಸ್ಥೆಯಲ್ಲಿರುವ ನನ್ನನ್ನು ಕಂಡು ಏನೆಂದಾನೋ ?!

ದುರ್ಜಯ—(ಬಳಿ ಬಂದು) ಇದೋ, ಮಹಾರಾಜರಾದ ನಮ್ಮಪ್ಪಾಜಿ ನೆಲದಮೇಲೆ ಬಿದ್ದಿರುವರಿದೇನು ?!

ದುರ್ಯೋಧನ—ಅಪ್ಪ ದುರ್ಜಯ, ಇಲ್ಲಿಗೇಕೆ ಬಂದೆ ?

ದುರ್ಜಯ—ನೀವು ತಡಮಾಡಿದಿರಿ; ಹೊತ್ತಾಯಿತೆಂದು ಬಂದೆ.

ದುರ್ಯೋಧನ—(ಸ್ವಗತ) ಆಹಾ ! ಈ ಅವಸ್ಥೆಯಲ್ಲೂ ಮಗನ ಮೇಲಣ ಪ್ರೇಮ ನನ್ನೆದೆಯನ್ನು ಸುಡುತ್ತಿದೆ.

ದುರ್ಜಯ—ಅಪ್ಪಾಜಿ, ನಾನು ನಿಮ್ಮ ತೊಡೆಯ ಮೇಲೆ ಕುಳಿತು ಕೊಳ್ಳುತ್ತೇನೆ ! (ಎಂದು ತೊಡೆಯೇರಲು ಹೋಗುವನು.)

ದುರ್ಯೋಧನ—(ನಿವಾರಿಸಿ) ದುರ್ಜಯ, ಅಪ್ಪಾ ! ಕಷ್ಟ ! (ಎಂದು ನೊಂದು) ನನ್ನ ಕಣ್ಮಣಿಯೂ ಹೃದಯಾನಂದದ ಉಕ್ಕಂದವೂ ಆದ ಈ ನನ್ನ ಚಂದ್ರನದನದ ಕಂದನಿಂದು ಕಾಲವಿಪರ್ಯಾಸದಿಂದ ಸುಡುವ ಬೆಂಕಿಯಂತಾದನೇ ? !

ದುರ್ಜಯ—ಅಪ್ಪಾಜಿ, ತೊಡೆಯಮೇಲೆ ಕುಳಿತುಕೊಳ್ಳಲು ಬಂದರೆ ನೀವೇಕೆ ನನ್ನನ್ನು ತಡೆಯುತ್ತೀರಿ ?

ದುರ್ಯೋಧನ—ಚಿಣ್ಣ, ಮತ್ತೆಲ್ಲಿಯಾದರೂ ಕುಳಿತುಕೊಳ್ಳಪ್ಪ ! ಇದುವರೆಗೂ ನೀನು ಕುಳಿತು, ಆಡಿ, ಮಲಗಿ, ನಿನಗೆ ಚಿರಪರಿಚಿತವಾಗಿದ್ದ ಈ ತೊಡೆಯಿನ್ನು ನಿನ್ನ ಭಾಗಕ್ಕಿಲ್ಲವಪ್ಪ !

ದುರ್ಜಯ—ಯಾಕಪ್ಪಾಜಿ, ನೀವೆಲ್ಲಿಗೆ ಹೋಗುತ್ತೀರ ?

ದುರ್ಯೋಧನ—ನನ್ನ ತಮ್ಮಂದಿರು ಸೂರ್ವರಿರುವಲ್ಲಿಗೆ ಹೋಗುತ್ತೇನೆ.

ದುರ್ಜಯ—ಅಪ್ಪಾಜಿ, ನನ್ನನ್ನೂ ಅಲ್ಲಿಗೆ ಕರೆದುಕೊಂಡು ಹೋಗಿ.

ದುರ್ಯೋಧನ—ಹೋಗು ಮಗನೇ. ಹಾಗೆಂದು ಭೀಮನನ್ನು ಕೇಳು ಹೋಗು.

ದುರ್ಜಯ—ಬನ್ನಿರಪ್ಪಾಜಿ ಹೋಗೋಣ; ನಿಮ್ಮನ್ನು ಹುಡುಕುತ್ತಿದ್ದಾರೆ.

ದುರ್ಯೋಧನ—ಯಾರಪ್ಪ ?

ದುರ್ಜಯ—ಅಜ್ಜ, ಅಜ್ಜಿ, ಅಮ್ಮ, ಚಿಕ್ಕಮ್ಮ ; ಎಲ್ಲರೂ.

ದುರ್ಯೋಧನ—ಮಗು, ಹೋಗು. ನಾನು ನಡೆಯಲಾರೆನಪ್ಪ.

ದುರ್ಜಯ—ನಿಮ್ಮನ್ನೆತ್ತಿಕೊಳ್ಳುತ್ತೇನೆ ಬನ್ನಿರಪ್ಪಾಜಿ !

ದುರ್ಯೋಧನ—ಅಪ್ಪ ದುರ್ಜಯ, ನೀನಿನ್ನೂ ಚಿಕ್ಕವನು.

ದುರ್ಜಯ—(ಧೃತರಾಷ್ಟ್ರನ ಕಡೆ ತಿರುಗಿ) ತಾತ, ಬನ್ನಿ. ಅಪ್ಪಾಜಿಯಿಲ್ಲಿದ್ದಾರೆ.

ರಾಣಿಯರಿಬ್ಬರು—ಹಾ ! ಹಾ ! ಮಹಾರಾಜರಲ್ಲಿರುವರಂತೆ ?

ಧೃತರಾಷ್ಟ್ರ—ಎಲ್ಲಿರುವನಪ್ಪಾ, ಮಹಾರಾಜ ?

ಗಾಂಧಾರಿ—ನನ್ನ ಮುದ್ದು ಮಗನೆಲ್ಲಿದಾನೆ ?

ದುರ್ಜಯ—ಇದೋ ಮಹಾರಾಜರು ನೆಲದಮೇಲೆ ಬಿದ್ದಿದ್ದಾರೆ.

ಧೃತರಾಷ್ಟ್ರ—(ಬಳಿ ಸಾರಿ ತಡವರಿಸಿ ಮುಟ್ಟಿ) ಇವನೇ ಏನು ಮಹಾರಾಜನು ? ಲೋಕಕ್ಕೆಲ್ಲ ಏಕೈಕ ನಾಯಕನೆನಿಸಿ, ಭಂಗಾರದ ಕುಂಭದಂತೆ ಧೀರೋನ್ನತನಾಗಿದ್ದ ನನ್ನ ಮಗನಿಂದು ಮುರಿದುಬಿದ್ದ ಮಹಾದ್ವಾರದ ಲಾಳ ಮುಂಡಿಗೆಯಂತೆ ನೆಲದಲ್ಲಿ ಬಿದ್ದಿದಾನೆ !

ಗಾಂಧಾರಿ—ಮಗನೆ ಸುಯೋಧನ, ಬಹಳ ಬಳಲಿರುವೆಯೇನಪ್ಪ ?

ದುರ್ಯೋಧನ—ನಿನ್ನ ಮಗನಲ್ಲವೇನಮ್ಮಾ ನಾನು ?

ಧೃತರಾಷ್ಟ್ರ—ಗಾಂಧಾರಿ, ನೀನೋ ?

ಗಾಂಧಾರಿ—ಹೌದು ? ಧೀರರಾದ ನೂರ್ವರನ್ನು ಹೆತ್ತವಳಿದೋ ನಾನೇ !

ದುರ್ಯೋಧನ—ಅಮ್ಮ ನಾನು ಇಂದು ತಾನೇ ನಿಮ್ಮ ಹೊಟ್ಟೆಯಿಂದ ಮತ್ತೆ ಹುಟ್ಟಿ ಬಂದೆನೆನಿಸುತ್ತಿದೆ ನನಗೆ. ಅಪ್ಪಾಜಿ, ಈಗ ದುಃಖಿಸುವುದರಿಂದೇನು ಪ್ರಯೋಜನ ?

ಧೃತರಾಷ್ಟ್ರ—ಅಪ್ಪ, ದುಃಖಿಸದೆ ಹೇಗೆ ಇರಲಿ ? ವೀರ್ಯ ಬಲೋತ್ಸಿಕ್ತರಾಗಿ ಯುದ್ಧಯಜ್ಞ ದೀಕ್ಷಿತರಾದ ನಿನ್ನ ತಮ್ಮಂದಿರು ನೂರು ಜನರೂ ಈಗಾಗಲೇ ಹತರಾಗಿದ್ದಾರೆ ! ಇನ್ನು ಉಳಿದಿರುವ ನೀನೊಬ್ಬನೂ ಗತಿಸಿದರೆ ಸರ್ವವೂ ನಾಶವಾದಂತೆಯೇ ! (ಎಂದು ಕೆಳಗೆ ಬೀಳುವನು.)

ದುರ್ಯೋಧನ—ಅಯ್ಯೋ, ಪೂಜ್ಯರಾದ ತಾವು ಬಿದ್ದಿರಾ ? ಅಪ್ಪಾಜಿ, ಅಮ್ಮನನ್ನು ಸಮಾಧಾನಪಡಿಸಿ. ಏಳಿ !

ಧೃತರಾಷ್ಟ್ರ—ಅಪ್ಪ, ನಾನೇನೆಂದು ಸಮಾಧಾನ ಪಡಿಸಲಿ ?

ದುರ್ಯೋಧನ—ಯುದ್ಧದಲ್ಲಿ ಹಿಮ್ಮೆಟ್ಟದೆ, ಹುಮ್ಮಸ್ಸಿನಿಂದ ಹೋರಾಡಿ ಹತನಾದನೆಂದು ಸಮಾಧಾನಪಡಿಸಿರಿ. ಅಪ್ಪಾಜಿ, ಹೇಗೋ ಶೋಕವನ್ನು ನಿಗ್ರಹಿಸಿಕೊಳ್ಳುವುದರ ಮೂಲಕ ನನ್ನನ್ನು ಅನುಗ್ರಹಿಸಿ.

(ತಂದೆಯ ಕಾಲ್ಗಳಿಗೆ ತಲೆಯನ್ನು ಮುಟ್ಟಿಸಿ) ಇದೋ, ಇಂದು ನಿಮ್ಮ ಮುಂದೆ ಮಾತ್ರ ತಗ್ಗಿರುವ ಈ ತಲೆಯಿಂದ ನಿಮಗೆ ನಮಸ್ಕರಿಸಿ, ಅಂತಸ್ಥ ಜ್ವಲಂತಾಗ್ನಿಯನ್ನೂ ಚಿಂತಿಸದೆ, ಯಾವ ಘನತೆಯಿಂದ ನಾನು ಹುಟ್ಟಿದನೋ ಅದೇ ಘನತೆಯಿಂದ ಸ್ವರ್ಗಕ್ಕೆ ಹೋಗುತ್ತೇನೆ.

ಧೃತರಾಷ್ಟ್ರ— ಹುಟ್ಟುಗುರುಡನೂ, ವೃದ್ಧನೂ ಆದ ನನಗೆ ಬಾಳಿನಲ್ಲಿನ ಆಶೆಯೆಲ್ಲ ಇಂಗಿಹೋಗಿದೆಯಾದರೂ, ಪ್ರಾಪ್ತವಾಗಿರುವ ಈ ತೀವ್ರ ಪುತ್ರಶೋಕವು ನನ್ನೆಲ್ಲ ಸಂಯಮವನ್ನೂ ಸಡಿಲಗೊಳಿಸಿ ನನ್ನಾತ್ಮವನ್ನಾಕ್ರಮಿಸಿ ಬಿಟ್ಟಿದೆ.

ಬಲದೇವ—(ಸ್ವಗತ) ಅಯ್ಯೋ ಕಷ್ಟ! ದುರ್ಯೋಧನನ ಮೇಲಣ ಆಶೆಯನ್ನು ಬಿಟ್ಟು ನಿತ್ಯಾಸ್ತಮಿತಲೋಚನನಾದ ಈ ಮಹನೀಯನಿಗೆ ಈಗ ನಾನಿಲ್ಲಿರುವೆನೆಂದು ನಿವೇದಿಸಿಕೊಳ್ಳಲು ನನಗೆ ಬಾಯೇ ಬಾರದಾಗಿದೆ.

ದುರ್ಯೋಧನ—(ತಾಯನ್ನು ಕುರಿತು) ಅಮ್ಮಾ, ನಿನಗೊಂದು ಮಾತನ್ನು ಹೇಳಬೇಕೆನಿಸುತ್ತದೆ.

ಗಾಂಧಾರಿ—ಅದೇನು ಹೇಳು ಮಗು.

ದುರ್ಯೋಧನ—ಅಮ್ಮ, ನಿನ್ನನ್ನು ಕೈಮುಗಿದು ಬೇಡಿಕೊಳ್ಳುತ್ತೇನೆ. ನಾನೇನಾದರೂ ಪುಣ್ಯ ಮಾಡಿದ್ದರೆ—ನನ್ನ ಮರುಹುಟ್ಟಿನಲ್ಲಿಯೂ ನೀನೇ ನನ್ನ ತಾಯಾಗಿ ಬಾ.

ಗಾಂಧಾರಿ—ಅಪ್ಪ, ನನ್ನ ಮನೋರಥವನ್ನೇ ನೀನು ಹೇಳಿದೆ.

ದುರ್ಯೋಧನ—ಸತಿ ಮಾಲವಿ, ನೀನೂ ಕೇಳು: (ಅಳುತ್ತಿರುವ ಹೆಂಡತಿಯನ್ನು ಕುರಿತು) ಯುದ್ಧಕಾಲದಲ್ಲಿ ಬಿದ್ದ ಗದಾಘಾತದಿಂದ ನನ್ನ ಹುಬ್ಬುಗಳು ಜರ್ಝರಿತವಾಗಿವೆ. ಏಟುಬಿದ್ದು ನೆತ್ತರು ಚಿಮ್ಮುತ್ತಿರುವ ನನ್ನೀ ಎದೆಗಿನ್ನು ಹಾರವನ್ನು ಧರಿಸುವ ಅವಶ್ಯಕತೆಯಿಲ್ಲ. ನೋಡು, ನನ್ನೀ ಬಾಹುಗಳು, ಹುಣ್ಣೆಂಬ ಭಂಗಾರದ ತೋಳಬಳೆಗಳಿಂದದೆಷ್ಟು ಶೋಭಾಯಮಾನವಾಗಿವೆ! ನಿನ್ನ ಪತಿಯು ಪರಾಙ್ಮುಖನಾಗದೆ ಯುದ್ಧದಲ್ಲಿ ಹೋರಾಡಿ ಹತನಾಗಿದಾನೆ! ಕ್ಷತ್ರಿಯೇ, ನೀನಿನ್ನೇಕೆ ಅಳುತ್ತಿದೀಯೆ?

ಮಾಲವಿ—ನಿಮ್ಮ ಸಹಧರ್ಮಚಾರಿಣಿಯಾದ ನನಗೀ ಬಾಲ್ಯದಲ್ಲೇ ಹೀಗಾಯಿತಲ್ಲಾ ಎಂದು ಅಳುತ್ತಿದ್ದೇನೆ.

ದುರ್ಯೋಧನ—ಪೌರವಿ, ನೀನೂ ಕೇಳು: ವೇದೋಕ್ತ ವಿಧಿಯಿಂದ ಯಜ್ಞಯಾಗಗಳನ್ನು ಮಾಡಿದೆ; ಬಾಂಧವರನ್ನು ಚೆನ್ನಾಗಿ ನೋಡಿಕೊಂಡೆ. ನನ್ನ ನೂರು ಜನ ತಮ್ಮಂದಿರೂ ಶತ್ರುಗಳಿಗೆ ಮೇಲುಗೈಯಾಗಿ ಬಾಳಿದರು. ನಾನಾದರೋ ಆಶ್ರಿತರಿಗೆಂದಿಗೂ ಮೋಸ ಮಾಡಲಿಲ್ಲ; ಯುದ್ಧದಲ್ಲಿ ಹದಿನೆಂಟಕ್ಷೋಹಿಣಿಯ ರಾಜರನ್ನು ಸಂತಾಪಪಡಿಸಿಯಾಯಿತು. ಹೀಗೆ ಅಭಿಮಾನಧನನಾಗಿ ಬಾಳಿದ ನನ್ನನ್ನು ನೋಡಿಯೂ ನೀನೇಕೆ ಶೋಕಿಸುತ್ತೀಯೆ? ನನ್ನಂಥ ವೀರನ ಹೆಂಡಿರು ಕಂಬನಿಗರೆವವರುಂಟೆ?

ಪೌರವಿ—ನಿಮ್ಮೊಡನೆ ಚಿತೆಯೇರಲು ನಿಶ್ಚಯಿಸಿದ್ದೇನೆ; ಇನ್ನಳುವುದಿಲ್ಲ!

ದುರ್ಯೋಧನ—ದುರ್ಜಯ, ನೀನೂ ಕೇಳು: (ಎನ್ನುವಷ್ಟರಲ್ಲಿ ಕಂಠ ಬಿಗಿದು ಬರುವುದು.)

ಧೃತರಾಷ್ಟ್ರ—ಗಾಂಧಾರಿ, ದುರ್ಯೋಧನನು ತನ್ನ ಮುದ್ದು ಮಗನಿಗೇನೆಂದು ಹೇಳುವನೋ?!

ಗಾಂಧಾರಿ—ನಾನು ಅದನ್ನೇ ಚಿಂತಿಸುತ್ತಿದ್ದೇನೆ.

ದುರ್ಯೋಧನ—ನನಗೆ ಹೇಗೋ ಹಾಗೆ, ಪಾಂಡವರಿಗೂ ವಿಧೇಯನಾಗಿರು. ಅಜ್ಜಿ ಕುಂತಿಯ ಆಜ್ಞೆಯ ಪ್ರಕಾರ ನಡೆದುಕೋ. ಅಭಿಮನ್ಯುವಿನ ತಾಯಿ ಮತ್ತು ದ್ರೌಪದಿ ಇಬ್ಬರನ್ನೂ ನಿನ್ನ ತಾಯ್ಗಳೆಂದು ಪೂಜಿಸು. ನೋಡು ಮಗು, ನಿನ್ನ ತಂದೆಯಾದ ದುರ್ಯೋಧನನು ಶ್ಲಾಘ್ಯನೂ, ಅಭಿಮಾನದೀಪ್ತ ಹೃದಯನೂ ಆಗಿ ಸಮಬಲನಾದ ಶತ್ರುವನ್ನು ಯುದ್ಧದಲ್ಲಿ ಇದುರಿಸಿ ಹತನಾದನೆಂದು ನೆನೆದು ಶೋಕವನ್ನು ತ್ಯಜಿಸು. ರೇಷ್ಮೆ ಧರಿಸಿದ ಧರ್ಮರಾಯನ ನಿಡಿದಾದ ಬಲದೋಳನ್ನು ಹಿಡಿದುಕೊಂಡು ಮಿಕ್ಕ ಪಾಂಡವರೊಡಗೂಡಿ, ನನ್ನ ಹೆಸರು ಹೇಳಿ, ನೀನು ನನಗೆ ತರ್ಪಣವನ್ನು ಕೊಡಬೇಕಪ್ಪ!

ಬಲದೇವ—ಅಹ! ವೈರವು ಪಶ್ಚಾತ್ತಾಪವಾಗಿ ಪರಿಣಮಿಸಿತಲ್ಲಾ! (ಆಲಿಸಿ) ಇದೆಲ್ಲಿಯದು ಶಬ್ದ? (ಆಕಾಶದ ಕಡೆ ನಿಟ್ಟಿಸಿ) ರಣದುಂದುಭಿಗಳ ಮೊಳಗು ನಿಂತು ಮೂಕವಾದ, ಬಾಣ-ಕವಚ-ಚಾಮರ-ಛತ್ರಗಳು ಚೆಲ್ಲಿರುವ, ಯೋಧರೂ ಸೂತರೂ ಸತ್ತು ಬಿದ್ದಿರುವ ಈ ರಣರಂಗದಲ್ಲಿ ತನ್ನ ಧನುಷ್ಟಂಕಾರದಿಂದ ಕಾಗೆಗಳ ಗುಂಪನ್ನು ಹೆದರಿಸಿ ಆಕಾಶದ ತುಂಬ ಚದುರುವಂತೆ ಮಾಡಿದವನು ಯಾರು?

ಬಲದೇವ—(ತೆರೆಯ ಪಕ್ಕಕ್ಕೆ ನಿಟ್ಟಿಸಿ) ಓಹೋ! ಗುರುಪುತ್ರ ಅಶ್ವತ್ಥಾಮ ! ಇತ್ತಲೇ ಬರುತ್ತಿದಾನೆ.

(ಕೈಯಲ್ಲಿ ಬಿಲ್ಲು ಹಿಡಿದು ಹಲ್ಲುಮುಡಿ ಕಡಿದ ಅಶ್ವತ್ಥಾಮನು ಪ್ರವೇಶಿಸುವನು.)

ಅಶ್ವತ್ಥಾಮ—ಸಮರಸಂರಂಭದಲ್ಲಿ ಉಭಯ ಬಲಜಲಧಿಗಳೂ ಸಂಧಿಸಿದಾಗ ನೆಗೆದ ಶಸ್ತ್ರಗಳೆಂಬ ಮೊಸಳೆಗಳಿಂದ ಕಡಿವಡೆದ ದೇಹಗಳ ಮತ್ತು ಕೊನೆಯುಸಿರೆಳೆಯುತ್ತ ಕಂಠಗತವಾದ ಪ್ರಾಣಗಳ ಸಮರಶ್ರೇಷ್ಠ ರಾಜರೇ, ಕೇಳಿ, ನೀವೆಲ್ಲ ಕಿವಿಗೊಟ್ಟು ಕೇಳಿ : ರಕ್ಕಿಗೊಳಗಾಗಿ ತೊಡೆ ಮುರಿಸಿಕೊಂಡ ಕೌರವನು ನಾನಲ್ಲ ! ಶಿಥಿಲವೂ ವಿಫಲವೂ ಆದ ಅಸ್ತ್ರಗಳನ್ನು ಹಿಡಿದ ಸೂತಪುತ್ರ ನಾನಲ್ಲ ! ಆಯುಧವನ್ನು ಹಿಡಿದೆತ್ತಿ ಝಳಪಿಸಿ ಸರಭಸದಿಂದ ಬಂದೀ ರಣಾಂಗಣದಲ್ಲಿ ಏಕಾಂಗಿಯಾಗಿ ನಿಂತಿರ್ದೇನೆ; ನಾನು ದ್ರೋಣಪುತ್ರ ! (ಇದ್ದಕ್ಕಿದ್ದಂತೆ ನಿರಾಶೆಯಿಂದ) ವಿಜಯಶ್ಲಾಘನೆಯ ಲಾಭವಿಲ್ಲದ ಈ ಸಮರಶ್ರೀಯಿಂದ ನನಗಾದರೂ ಆಗಬೇಕಾದುದೇನು?! (ಸ್ವಲ್ಪ ಹಾಗೇ ಚಿಂತಿಸಿ) ಛೀ ! ಹಾಗೆಂದವರುಂಟೆ ? ! ನಾನು ನಮ್ಮ ತಂದೆಗೆ ಉತ್ತರಕ್ರಿಯೆಗಳನ್ನು ಮಾಡುತ್ತಿರುವಷ್ಟರಲ್ಲಿಯೇ ಕುರುಕುಲತಿಲಕಪ್ರಾಯನಾದ ದುರ್ಯೋಧನನು ಪಾಂಡವರಿಂದ ಮೋಸಕ್ಕೊಳಗಾದನಲ್ಲಾ ! ಇದನ್ನು ಯಾರು ತಾನೇ ನಂಬಿಯಾರು ? ರಥಗಳ ಮೇಲೆ, ಆನೆಗಳ ಮೇಲೆ ಕುಳಿತು, ಕೈಗಳಲ್ಲಿ ಬಿಲ್ಲುಗಳನ್ನು ಹಿಡಿದು, ಅಂಜಲಿಬದ್ಧರಾಗಿ ಉತ್ಕಂಠತೆಯಿಂದ ದುರ್ಯೋಧನನ ಆಜ್ಞೆಗಾಗಿ ಕಾಯುತ್ತಿದ್ದ ಹನ್ನೊಂದು ಅಕ್ಷೋಹಿಣೀ ಸೇನೆಯ ರಾಜರಿದ್ದರು ; ಪರಶುರಾಮನ ಹರಿತವಾದ ಬಾಣಗಳೂ ಭೇದಿಸಲಾರದ ಕವಚವನ್ನು ತೊಟ್ಟ ಭೀಷ್ಮಾಚಾರ್ಯರಿದ್ದರು; ಮಹಾ ಯೋಧಾಗ್ರಣಿಯಾದ ನಮ್ಮ ತಂದೆಯಿದ್ದರು; ರಣದ ಮುಂಚೂಣಿಯಲ್ಲಿ ಇಂಥವರಿದ್ದೂ ಸ್ವಯಂ ಅತಿರಥನಾದ ದುರ್ಯೋಧನನಿಗೆ ಕಾಲಮಹಿಮೆಯಿಂದ ಸೋಲಾಯಿತು ! ಗಾಂಧಾರೀಪುತ್ರನೆಲ್ಲಿರುವನೋ ? ! (ತಿರುಗಿ ನೋಡಿ) ಇದೋ ರಣಾರ್ಣವ ಪಾರಂಗತನಾದ ಕುರುರಾಜನು ಇಳೆಗುರುಳಿದ ಗಜ-ತುರಗ-ನರ-ರಥಗಳ ಪ್ರಾಕಾರದ ಮಧ್ಯದಲ್ಲಿದಾನೆ. ಇಟ್ಟ ಕಿರೀಟ ಕೆಳಗುರುಳಿ, ಕೆಂಗೂದಲೆಲ್ಲ ಕೆದರಿ, ಗದೆಯ ಪೆಟ್ಟಿಂದಾದ ಹುಣ್ಣುಗಳಿಂದ ರಕ್ತ ಸುರಿದು, ಮೈಯೆಲ್ಲ ಕೆಂಪಾಗಿ, ಮೃತ್ಯುಶಯ್ಯೆಯ ಮೇಲಿರುವ ದುರ್ಯೋಧನನು—ಪಡುವಣಪರ್ವತವನ್ನೇರಿ ಅಸ್ತಂಗತನಾಗುವ

ಎನಿ...ಧಸೂರ್ಯನಂತಿರುವನು. (ಬಳಿ ಸಾರಿ) ಅಯ್ಯ, ಕುರುರಾಜ,

ಅಶ್ವತ್ಥ—ಗುರುಪುತ್ರ, ಇದು ಅಸಂತೃಪ್ತಿಯ ಫಲ.

ಉತ್ಪಾಟನ ಮಾಯ್ಯ ಕುರುರಾಜ, ನಾನೀಗ ಧರ್ಮದ ಮೂಲವನ್ನೇ

ದುರ್ಯೋಧನ—...ನೆ.

ಅಶ್ವತ್ಥಾಮ—ಕೇಳು...ಗ ನೀನೇನು ಮಾಡಬೇಕೆಂದಿರುವೆ ?

ತನ್ನೆಂಟೂ ತೋಳುಗಳನ್ನು ...ಡನ ಬೆನ್ನೇರಿ, ಶಾರ್ಙ್ಗಚಕ್ರಧಾರಿಯಾಗಿ ಯುದ್ಧಮಾಡಲುದ್ಯತನಾದ ಕೃಷ್ಣನನ್ನು ಪಾಂಡುತನಯಸಹಿತವಾಗಿ ...ದ ಚಿತ್ರಪಟವನ್ನೆತ್ತಿ ಬಿಸುಡುವಂತೆ ಶಸ್ತ್ರಸಂಧಾನದಿಂದ ಚಿಮ್ಮಿಬಿಡುತ್ತೇನೆ.

ದುರ್ಯೋಧನ—ಅಯ್ಯ, ಬೇ... ಹಾಗ...ಬೇಡ. ಅಭಿಷಿಕ್ತ ರಾಜರೆಲ್ಲರೂ ಭೂಮಿತಾಯ ಮಡಿಲಲ್ಲಿ ಮ...ಬಿಟ್ಟರು. ಕರ್ಣನು ಸ್ವರ್ಗಸ್ಥನಾದ; ಭೀಷ್ಮಾಚಾರ್ಯರ ದೇಹ ಪಾತವಾಯಿತ...ನನ್ನ ನೂರ್ವರು ತಮ್ಮಂದಿರೂ ಗತಿಸಿಹೋದರು; ನನ್ನ ಗತಿಯೂ ಹೀಗಾಯಿ... ಗುರುಪುತ್ರ, ಇನ್ನು ಬಿಲ್ಲನ್ನು ಬಿಸಾಡು.

ಅಶ್ವತ್ಥಾಮ—ಅಯ್ಯ ಕುರುರಾಜ, ಭೀಮ... ಗದಾಘಾತದಿಂದ ನಿನ್ನ ತೊಡೆಗಳ ಜೊತೆಯಲ್ಲಿ ನಿನ್ನ ದರ್ಪವೂ ಮುರಿದುಬಿ... ?

ದುರ್ಯೋಧನ—ಹಾಗಲ್ಲ ! ರಾಜರಿಗೆ ಅಭಿಮಾನವೇ ಶರೀರ. ಆ ಅಭಿಮಾನಕ್ಕಾಗಿಯೇ ನಾನು ಯುದ್ಧವನ್ನು ಕೈಗೊಂಡಿದ್ದ... ನೋಡು ಗುರುಪುತ್ರ, ಸಭೆಯಲ್ಲಿ ದ್ರೌಪದಿಯನ್ನು ಮುಂದಲೆಹಿಡಿದೆಳೆದಾಡಿದೆವು. ಪಗಡೆಯಾಟದ ನೆಪದಲ್ಲಿ ಸೋತ ಪಾಂಡವರನ್ನು ವನ್ಯಮೃಗಗಳೊಡಗೂಡಿಸಿ ಕಾಡಿನಲ್ಲಿ ತಿರ್ರನೆ ತಿರುಗಾಡಿಸಿದೆವು. ಎಳೆಯ ಬಾಲಕನಾದ ಅಭಿಮನ್ಯುವನ್ನು ರಣರಂಗದಲ್ಲಿ ಹೇಸದೆ ಕೊಂದೆವು. ಇವುಗಳ ಮುಂದೆ ಪಾಂಡವರು ನನ್ನ ದರ್ಪವನ್ನು ಮುರಿದರೆಂಬ ಮಾತು ಅತ್ಯಲ್ಪವಲ್ಲವೇ ? ಆಲೋಚಿಸಿ ನೋಡು.

ಅಶ್ವತ್ಥಾಮ—ಏನಾದರೂ ಸುಮ್ಮನಿರಲಾರೆ. ಪ್ರತಿಜ್ಞೆ ಮಾಡಿಬಿಟ್ಟಿದೇನೆ ! ನಿನ್ನಾಣೆ, ನನ್ನಾತ್ಮದಾಣೆ, ವೀರಸ್ವರ್ಗದಾಣೆಯಿಟ್ಟು ಹೇಳುತ್ತೇನೆ ಕೇಳು : ಇರುಳುಗಾಳಗವನ್ನು ಮಾಡಿ ಪಾಂಡವರನ್ನು ಸುಟ್ಟು ಬೂದಿಮಾಡುತ್ತೇನೆ.

ಬಲದೇವ—ಗುರುಪುತ್ರನೆಂದಮೇಲೆ ತಪ್ಪದು !

ಅಶ್ವತ್ಥಾಮ—ಓಹೋ ಪೂಜ್ಯ ಹಲಾಯುಧನೂ ಇಲ್ಲೇ ಇದ್ದಾರೆ

ಧೃತರಾಷ್ಟ—ಅಯ್ಯೋ ! ನನ್ನ ಮಗನಿಗಾದ ಮೋಸ... ಕಂಡಿದಾನೆ ಪೂಜ್ಯ ಬಲದೇವನು. ...ದ್ರೇನಂತೆ ? !

ಅಶ್ವತ್ಥಾಮ—ದುರ್ಜಯ, ಬಾ ಇಲ್ಲಿ. ಅಭಿಷ್ಠೇ ತಂದೆಯು ತನ್ನ ಬ್ರಾಹ್ಮಣನಾದ ನನ್ನ ವಾಕ್ಯಬಲದಿಂದ ನೀನುಸಮ್ರಾಟನಾಗು. ಶೌರ್ಯದಿಂದ ಸಂಪಾದಿಸಿದ ಈ ಸಾಮ್ರಾಜ್ಯದಾಶೆ ನೆರವೇರಿತು ! ನನ್ನ

ದುರ್ಯೋಧನ—ಹಾ ! ನನ್ನ ...ಪಿತಾಮಹರಾದ ಪೂಜ್ಯ ಶಂತನು ಪ್ರಾಣ ಹೋಗುವಂತಿದೆ ! ಇದೋ ನ... ...ದು...ಡಿಕೊಂಡು ನನ್ನ ತಮ್ಮಂದಿರು ಮುಂತಾದವರು ! ಕರ್ಣನನ್ನು ...ದು... ...ತ್ತಿದಾರೆ ! ಐರಾವತದ ಮಸ್ತಕ ಸೂರ್ವರೂ ನನ್ನನ್ನು ಇದಿರು...ಳ್ಳಲು ... ಅವನ ಪಕ್ಕದಲ್ಲೇ ಕುಳಿತ ಕಾಕಪಕ್ಷ ವನ್ನೇರಿ, ಇಂದ್ರನ ಕೈಯನ್ನು ಹಿಡಿದ... ...ಯವಾಗಿ ಕೋಪದಿಂದ ಇಂದ್ರನೊಡನೆ ಧರನಾದ ಅಭಿಮನ್ಯು ನನ್ನ ... ...ಮುಂತಾದ ಅಪ್ಸರೆಯರಿದೋ ಬಂದರು ! ಘಾತನಾಡುತ್ತಿದಾನೆ. ಊರ್ವ... ಇದೋ ಮೂರ್ತಿಮಂತ ಸ...ಸಾಗರಗಳು, ಗಂಗೆ ಮುಂತಾದ ಮಹಾನದಿ ಗಳು ! ನನ್ನನ್ನು ಕರೆತರಲು ಸಹಸ್ರ ಹಂಸಗಳನ್ನು ಹೂಡಿದ ವೀರವಾಹೀ ವಿಮಾನವನ್ನು ಯಮುನ ಕಳಿಸಿದ್ದಾನೆ ! ಇದೋ, ಬಂದೆ ! ಬಂದೆ !! (ಎಂದು ಸ್ವರ್ಗಸ್ಥನಾಗುವನು.)

ಧೃತರಾಷ್ಟ—ಸಜ್ಜನರು ತುಂಬಿರುವ ತಪೋವನಕ್ಕೆ ತೆರಳುತ್ತೇನೆ. ಪ್ರೀತಿ ಪಾತ್ರನಾದ ಪುತ್ರನು ಸತ್ತಮೇಲೆ ಈ ರಾಜ್ಯಕ್ಕೆ ಧಿಃಕ್ಕಾರ !

ಅಶ್ವತ್ಥಾಮ—ಇದೋ ಸೌಪ್ತಿಕವಧೆಗಾಗಿ ಬಿಲ್ಲುಬಾಣಗಳನ್ನು ಹಿಡಿದು ಹೊರಟೆ !

ಬಲದೇವ—ಶತ್ರುಪಕ್ಷವನ್ನು ಸದೆಬಡಿದು ರಾಜನು ಭೂಮಿಯನ್ನು ಪರಿ ಪಾಲಿಸಲಿ

...ಕ್ಕ ಮಿಸುವರು.)

...ಂ ಮಂಗಳಂ ||

ಭಾಸನ ಭಾರತ ರೂಪಕ/ ರೂ. 3.00